● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನಾವು ನಿತ್ಯ ಬಳಸುವ ತಂತ್ರಜ್ಞಾನದ ಸಲಕರಣೆಗಳ ನಾಮಕರಣದ ಹಿಂದೆ ಸ್ವಾರಸ್ಯದ ಕತೆಗಳಿವೆ



ಮಹಿಳಾ ಮತ
ಬಾಲಕಿಯರ ಬಾಲ್ಯ ಕಸಿವ ಮೊಬೈಲ್ ಮಾಯಾಲೋಕ

ನೈಜ ಶಿವಸೇನಾ: ಶಿಂದೆ ಬಣಕ್ಕೆ ಮೇಲುಗೈ 9

ಸರ್ಕಾರಕ್ಕೆ ಮತ್ತೆ ‘ಮುಂಬಡ್ತಿ’ ಸಂಕಷ್ಟ? 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,107 ▼	17,007 ▼	₹50,900 (ಬೆಂಗಳೂರು) ▼	₹ 56,300 (ಬೆಂಗಳೂರು) ▼	81.53 ▲

ಶಾಂತಿಗೆ ಭಂಗ, ಕಾನೂನುಬಾಹಿರ ಚಟುವಟಿಕೆಗೆ ಸಂಚು ರೂಪಿಸಿದ್ದ ಆರೋಪ

ಪಿಎಫ್‌ಐನ 80 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರ ಶಾಂತಿಗೆ ಭಂಗ, ಕಾನೂನು ಬಾಹಿರ ಚಟುವಟಿಕೆಗೆ ಸಂಚು ರೂಪಿಸಿದ್ದ ಆರೋಪದ ಮೇಲೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಹಾಗೂ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಮುಖಂಡರ ಮನೆಗಳ ಮೇಲೆ ರಾಜ್ಯದಾದ್ಯಂತ ಪೊಲೀಸರು ದಾಳಿ ಮಾಡಿದ್ದು, 80ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ, ಮೈಸೂರು, ಶಿವಮೊಗ್ಗ, ತುಮಕೂರು, ಕೋಲಾರ, ರಾಯಚೂರು, ಗದಗ, ಮಂಗಳೂರು, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಮಂಡ್ಯ, ರಾಮನಗರ, ಉಡುಪಿ, ಚಾಮರಾಜನಗರ, ಕಲಬುರಗಿ, ಹುಬ್ಬಳ್ಳಿ-ಧಾರವಾಡ ಸೇರಿದಂತೆ ಹಲವೆಡೆ ಮಂಗಳವಾರ ನಸುಕಿನಿಂದ ಸಂಜೆಯವರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿದರು.

‘ಕಾನೂನು ಬಾಹಿರ ಚಟುವಟಿಕೆ, ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದ ಆರೋಪದಡಿ ಪಿಎಫ್‌ಐ ಮುಖಂಡರ ಮನೆಗಳ ಮೇಲೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಹಾಗೂ ಬೆಂಗಳೂರು ಪೊಲೀಸರು ಇತ್ತೀಚೆಗೆ ದಾಳಿ ಮಾಡಿದ್ದರು. 20 ಮುಖಂಡರನ್ನು ಬಂಧಿಸಿದ್ದರು. ಇದನ್ನು ಖಂಡಿಸಿದ್ದ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು, ರಾಜ್ಯದೆಲ್ಲೆಡೆ ಶಾಂತಿಗೆ ಭಂಗ ಮಾಡಲು ಯೋಜನೆ ರೂಪಿಸಿದ್ದರು. ಈ ಬಗ್ಗೆ ಮಾಹಿತಿ ಸಂಗ್ರಹಿಸಿ ರಾಜ್ಯದೆಲ್ಲೆಡೆ ಕಾರ್ಯಾಚರಣೆ ನಡೆಸಿ, ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ದಾಳಿ ವೇಳೆ ಹಲವು ದಾಖಲೆಗಳನ್ನೂ ಜಪ್ತಿ ಮಾಡಲಾಗಿದೆ. ಇವುಗಳ ಪರಿಶೀಲನೆ ನಡೆಸಲಾಗುತ್ತಿದ್ದು, ಅಗತ್ಯಬಿದ್ದರೆ ಬಂಧಿತರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದೂ ಹೇಳಿದರು.

‘ಬಂಧಿತ ಆರೋಪಿಗಳ ವಿರುದ್ಧ ಆಯಾ ಠಾಣೆಗಳಲ್ಲಿ ಸಿಆರ್‌ಪಿಸಿ ಸೆಕ್ಷನ್ 107 ಅಡಿ (ಶಾಂತಿ ಭಂಗ ಉಂಟು ಮಾಡುವ ಅನುಮಾನ) ಪ್ರಕರಣ ದಾಖಲಿಸಲಾಗಿದೆ’ ಎಂದರು.

8ನೇ ಪುಟ ನೋಡಿ



ತಮ್ಮ ನಾಯಕರ ಬಂಧನವನ್ನು ಖಂಡಿಸಿ ರಾಯಚೂರಿನ ತಹಶೀಲ್ದಾರ್ ಕಚೇರಿ ಎದುರು ಎಸ್‌ಡಿಪಿಐ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು

7 ರಾಜ್ಯಗಳಲ್ಲಿ 230ಕ್ಕೂ ಹೆಚ್ಚು ಮಂದಿ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕರ್ನಾಟಕವೂ ಸೇರಿದಂತೆ ಏಳು ರಾಜ್ಯಗಳಲ್ಲಿ ಪಿಎಫ್‌ಐ ಜತೆಗೆ ನಂಟು ಹೊಂದಿದ್ದ ಸುಮಾರು 230 ಜನರನ್ನು ಮಂಗಳವಾರ ಬಂಧಿಸಲಾಗಿದೆ ಇಲ್ಲವೇ ವಶಕ್ಕೆ ಪಡೆಯಲಾಗಿದೆ. ಹೆಚ್ಚಿನ ಕಡೆಗಳಲ್ಲಿ ರಾಜ್ಯ ಪೊಲೀಸರೇ ಕಾರ್ಯಾಚರಣೆ ನಡೆಸಿದ್ದಾರೆ. ಐದು ದಿನಗಳ ಹಿಂದೆ ಇದೇ ರೀತಿಯ ಕಾರ್ಯಾಚರಣೆ ನಡೆಸಲಾಗಿತ್ತು. ಅದರಲ್ಲಿ 109 ಜನರನ್ನು ಬಂಧಿಸಲಾಗಿತ್ತು. ಈ ಕಾರ್ಯಾಚರಣೆ ಎನ್‌ಐಎ ನೇತೃತ್ವದಲ್ಲಿ ನಡೆದಿತ್ತು.

ಉತ್ತರ ಪ್ರದೇಶದಲ್ಲಿ 57, ದೆಹಲಿಯಲ್ಲಿ 30, ಅಸ್ಸಾಂನಲ್ಲಿ 25, ಮಧ್ಯಪ್ರದೇಶದಲ್ಲಿ 21 ಮತ್ತು ಮಹಾರಾಷ್ಟ್ರ ಹಾಗೂ ಗುಜರಾತ್‌ನಲ್ಲಿ ತಲಾ 10 ಜನರನ್ನು ಬಂಧಿಸಲಾಗಿದೆ.

8ನೇ ಪುಟ ನೋಡಿ

ಪಿಎಫ್‌ಐ ಮೇಲೆ ಪೊಲೀಸರು ದಾಳಿ ನಡೆಸಿಲ್ಲ: ಬಸವರಾಜ ಬೊಮ್ಮಾಯಿ

ಪಿಎಫ್‌ಐ ಕಾರ್ಯಕರ್ತರ ಮೇಲೆ ಪೊಲೀಸರು ನಡೆಸಿರುವುದು ದಾಳಿಯಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ತಮಗೆ ಬಂದ ಮಾಹಿತಿ ಆಧಾರದ ಮೇಲೆ ಪೊಲೀಸರು ಕೆಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಜಿಲ್ಲಾಡಳಿತ ಹಾಗೂ ತಹಶೀಲ್ದಾರರ ಆದೇಶದ ಮೂಲಕ ಅದನ್ನು ಪೊಲೀಸರು ಮಾಡಿದ್ದಾರೆ. ಕರ್ನಾಟಕ ಮತ್ತು ಎಲ್ಲ ರಾಜ್ಯಗಳ ಪೊಲೀಸರು ಪಿಎಫ್‌ಐ ಕಾರ್ಯಕರ್ತರ ಮೇಲೆ ಇದೇ ಕ್ರಮ ಕೈಗೊಂಡಿದ್ದಾರೆ ಎಂದರು.



ರಾಷ್ಟ್ರಪತಿಗೆ ಗೌರವ

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ರಾಜ್ಯ ಸರ್ಕಾರದ ‘ಪೌರ ಸನ್ಮಾನ’ ಸ್ವೀಕರಿಸಿದ ಬಳಿಕ ನಾಗರಿಕರ ಪರವಾಗಿ ಸತ್ಕರಿಸಿದ ಮಂಜಮ್ಮ ಜೋಗತಿ, ಕಿರಣ್ ಮಜುಂದಾರ್ ಷಾ, ಪ್ರಕಾಶ್ ಪಡುಕೋಣೆ, ಚಂದ್ರಶೇಖರ ಕಂಬಾರ, ಮಧುಪಂಡಿತ್ ದಾಸ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ನಮಸ್ಕರಿಸಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಸ್ವಯಂ ನೋಂದಣಿ ಪ್ರಕ್ರಿಯೆ ದುರುಪಯೋಗ

ಪಿಎಂ ಕಿಸಾನ್ ಯೋಜನೆ: 3.97 ಲಕ್ಷ ಅನರ್ಹರಿಗೆ ₹442 ಕೋಟಿ ಪಾವತಿ

● ಭರತ್ ಜೋಶಿ

ಬೆಂಗಳೂರು: ಸಣ್ಣ ಮತ್ತು ಅತಿ ಸಣ್ಣ ರೈತರ ಸಂಕಷ್ಟಕ್ಕೆ ಸ್ಪಂದಿಸಲೆಂದು ಕೇಂದ್ರ ಸರ್ಕಾರ ಜಾರಿ ಮಾಡಿದ ‘ಪಿಎಂ–ಕಿಸಾನ್’ ಯೋಜನೆಯಡಿ 3.97 ಲಕ್ಷ ‘ಅನರ್ಹರು’ ಹೆಸರು ನೋಂದಾಯಿಸಿ ಹಣ ಪಡೆದು ವಂಚಿಸಿರುವುದು ಪತ್ತೆಯಾಗಿದ್ದು, ಈ ರೀತಿ ಒಟ್ಟು ₹442 ಕೋಟಿ ಪಾವತಿಯಾಗಿದೆ.

ಯೋಜನೆಯಡಿ ಸ್ವಯಂ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಹೀಗಾಗಿ, 3,312 ಮೃತ ರೈತರ ಖಾತೆಗಳಿಗೂ ಹಣ ಪಾವತಿಯಾಗಿದೆ.

‘ಅನರ್ಹ’ ರೈತರಿಂದ ಹಣ ವಸೂಲಿ ಮಾಡಲು ಅಧಿಕಾರಿಗಳು ಮುಂದಾಗಿದ್ದಾರೆ. ಕೇಂದ್ರ ಸರ್ಕಾರ 2019 ರಲ್ಲಿ ಪಿಎಂ– ಕಿಸಾನ್ ಯೋಜನೆಯನ್ನು ಜಾರಿ ಮಾಡಿತು. ಕೇಂದ್ರ ಸರ್ಕಾರ ಒಬ್ಬ ರೈತರಿಗೆ ₹6,000 ನೀಡುವ ಜತೆಗೆ ಕರ್ನಾಟಕದಲ್ಲಿರುವ ಬಿಜೆಪಿ ಸರ್ಕಾರ ಈ ಯೋಜನೆಗೆ ಇನ್ನೂ ₹4,000 ಸೇರಿಸಿ ಒಟ್ಟು ₹10 ಸಾವಿರವನ್ನು ಪಾವತಿ ಮಾಡುತ್ತಿದೆ.

ಆದಾಯ ತೆರಿಗೆ ಪಾವತಿಸುವ ಹಿಡುವಳಿದಾರರು ಮತ್ತು ಸಾಂಸ್ಥಿಕ ಭೂ ಹಿಡುವಳಿದಾರರು ಈ ಯೋಜನೆಗೆ ಅರ್ಹರಲ್ಲ. ಆದರೆ, ಇಂತಹ ರೈತರು ಯೋಜನೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ.

‘ಈ ಯೋಜನೆಯನ್ನು ಆರಂಭಿಸಿದಾಗ ಸ್ವಯಂ ನೋಂದಣಿ ಮಾಡಿಕೊಳ್ಳಲು ರೈತರಿಗೆ ಮುಕ್ತ ಅವಕಾಶ ನೀಡಲಾಗಿತ್ತು. ಆಗ ಇದರ ದುರ್ಬಳಕೆಯಾಗಿದೆ’ ಎಂದು ಕೃಷಿ ಆಯುಕ್ತ ಬಿ. ಶರತ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಅನರ್ಹ ರೈತರಿಂದ ಹಣವನ್ನು ಹಿಂದಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲು ಈಗಾಗಲೇ ಬ್ಯಾಂಕ್‌ಗಳಿಗೆ ಪತ್ರ ಬರೆಯಲಾಗಿದೆ. ಹಣವನ್ನು ಹಿಂದಕ್ಕೆ ಪಡೆಯುವ ಪ್ರಕ್ರಿಯೆಯಲ್ಲಿ ಬ್ಯಾಂಕ್‌ಗಳಿಗೆ ನೆರವಾಗಲು ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಮುಂದೆ ಇಂತಹ ವಂಚನೆ ನಡೆಯಲು ಸಾಧ್ಯವಾಗದಂತೆ ಸರ್ಕಾರ ಪರಿಶೀಲನಾ ಪ್ರಕ್ರಿಯೆಯನ್ನು ಬಿಗಿಗೊಳಿಸಿದೆ’ ಎಂದು ಅವರು ತಿಳಿಸಿದರು.

13ನೇ ಪುಟ ನೋಡಿ

ಹಣ ಪಡೆದ ಅನರ್ಹರು

ಅನರ್ಹತೆಗೆ ಕಾರಣ	ರೈತರ ಸಂಖ್ಯೆ	ಹಣ ಪಾವತಿ (₹ಕೋಟಿಗಳಲ್ಲಿ)
ಆದಾಯ ತೆರಿಗೆ	91,969	104.24
ಭೂಹಿಡುವಳಿದಾರರು	1,99,240	295.66
ವಂಚಿಸಿ ಸ್ವಯಂ ನೋಂದಣಿ	1,06,416	39.44
ಸತ್ತವರು	3,312	ಮೊತ್ತದ ಮಾಹಿತಿ ಇಲ್ಲ

ಅಶಿಸ್ತು: ಗೆಹಲೋತ್ ನಿಷ್ಠ ಮೂವರಿಗೆ ನೋಟಿಸ್

ನವದೆಹಲಿ (ಪಿಟಿಐ): ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರಿಗೆ ನಿಷ್ಠರಾಗಿರುವ ಮೂವರಿಗೆ ‘ಗಂಭೀರ ಸ್ವರೂಪದ ಅಶಿಸ್ತು’ ತೋರಿದ ಆರೋಪದಡಿ ಕಾಂಗ್ರೆಸ್‌ನ ಹೈಕಮಾಂಡ್ ಮಂಗಳವಾರ ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ಸಚಿವ ಶಾಂತಿಕುಮಾರ್ ಧರಿವಾಲ್, ಮುಖ್ಯ ಸಚೇತಕ ಮಹೇಶ್ ಜೋಶಿ, ಶಾಸಕ ಧರ್ಮೇಂದ್ರ ರಾಠೋಡ್ ಅವರಿಗೆ ನೋಟಿಸ್ ನೀಡಲಾಗಿದೆ. ನೂತನ ಮುಖ್ಯಮಂತ್ರಿ ಆಯ್ಕೆ ಸಂಬಂಧ ಭಾನುವಾರ ಕರೆದಿದ್ದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಗೆ ಇವರು ಗೈರು ಹಾಜರಾಗಿದ್ದು ಅಷ್ಟೇ ಅಲ್ಲದೆ ಪರ್ಯಾಯ ಸಭೆ ನಡೆಸಿದ್ದರು.

ನೋಟಿಸ್‌ಗೆ ಉತ್ತರಿಸಲು 10 ದಿನ ಸಮಯ ನೀಡಲಾಗಿದೆ. ‘ಗಂಭೀರ ಸ್ವರೂಪದ ಅಶಿಸ್ತು ತೋರಿರುವ ನಿಮ್ಮ ವಿರುದ್ಧ ಏಕೆ ಶಿಸ್ತುಕ್ರಮ ಜರುಗಿಸಬಾರದು’ ಎಂದು ಶಿಸ್ತು ಸಮಿತಿ ಮುಖ್ಯಸ್ಥರೂ ಆದ ಪ್ರಧಾನ ಕಾರ್ಯದರ್ಶಿ ತಾರೀಖ್ ಅನ್ವರ್ ನೋಟಿಸ್‌ನಲ್ಲಿ ಪ್ರಶ್ನಿಸಿದ್ದಾರೆ.

ರಾಜ್ಯದಲ್ಲಿನ ಪಕ್ಷದ ಬೆಳವಣಿಗೆಗೆ ಸಂಬಂಧಿಸಿದಂತೆ ವೀಕ್ಷಕರಾದ ಮಲ್ಲಿಕಾರ್ಜುನ ಖರ್ಗೆ, ಅಜಯ್ ಮಾಕನ್ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ 9 ಪುಟದ ವರದಿ ಸಲ್ಲಿಸಿದ್ದರು.

5ನೇ ಪುಟ ನೋಡಿ

ಮಂಗಳವಾರದ ಬೆಳವಣಿಗೆ

- ರಾಜಸ್ಥಾನದ ಕಾಂಗ್ರೆಸ್ ಸರ್ಕಾರವನ್ನು ಕೆಡವಲು ಬಿಜೆಪಿ ಮತ್ತೆ ಪ್ರಯತ್ನ ಆರಂಭಿಸಿದೆ. ಪಿತೂರಿ ನಡೆಸುತ್ತಿದೆ ಎಂದು ಸಚಿವ ಪ್ರತಾಪ್ ಸಿಂಗ್ ಖಾಚರಿಯವಾಸ್ ಹೇಳಿದ್ದಾರೆ
- ಸಚಿನ್ ಪೈಲಟ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಸಚಿವ ರಾಜೇಂದ್ರ ಸಿಂಗ್ ಗುಢ ಆಗ್ರಹಿಸಿದ್ದಾರೆ
- ಗೆಹಲೋತ್ ಅವರಿಗೆ ನಿಷ್ಠರಾಗಿರುವ ಶಾಸಕರು ಪರ್ಯಾಯ ಸಭೆ ನಡೆಸಿದ್ದರ ಉದ್ದೇಶ ಹೈಕಮಾಂಡ್ ಮೇಲೆ ಒತ್ತಡ ಹೇರುವುದು ಆಗಿರಲಿಲ್ಲ ಎಂದು ಮುಖ್ಯ ಸಚೇತಕ ಮಹೇಶ್ ಜೋಶಿ ಹೇಳಿದ್ದಾರೆ
- ಕಾಂಗ್ರೆಸ್ ಮುಖಂಡರಾದ ಎ.ಕೆ. ಆ್ಯಂಟನಿ ಮತ್ತು ಸುಶೀಲ್ ಕುಮಾರ್ ಶಿಂದೆ ಅವರಿಗೆ ದೆಹಲಿಗೆ ಬರಲು ಸೂಚಿಸಲಾಗಿದೆ
- ಸೋನಿಯಾ ಅವರ ನಿರ್ಧಾರಕ್ಕೆ ಬದ್ಧರಾಗಿ ಇರುವುದಾಗಿ ಗೆಹಲೋತ್ ಅವರು ಭರವಸೆ ನೀಡಿದ್ದಾರೆ ಎನ್ನಲಾಗಿದೆ

ಕ್ಷುದ್ರಗ್ರಹಕ್ಕೆ ಡಿಕ್ಕಿ ಹೊಡೆದ ಬಾಹ್ಯಾಕಾಶ ನೌಕೆ

ಲಾರೆಲ್ (ಅಮೆರಿಕ) (ಎಪಿ): ಕ್ಷುದ್ರಗ್ರಹ ಅಥವಾ ಧೂಮಕೇತುಗಳಿಂದ ಎದುರಾಗುವ ಸಂಭಾವ್ಯ ಅಪಾಯಗಳ ವಿರುದ್ಧ ಭೂಮಿಯನ್ನು ರಕ್ಷಿಸುವ ತಂತ್ರಜ್ಞಾನವನ್ನು ಪರೀಕ್ಷಿಸುವ ವಿಶ್ವದ ಮೊದಲ ಕಾರ್ಯಾಚರಣೆಯನ್ನು ನಾಸಾ ಮಂಗಳವಾರ ಯಶಸ್ವಿಯಾಗಿ ಪೂರ್ಣಗೊಳಿಸಿದೆ.

13

ಆಶಾ ಪಾರೇಖ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ




ನವದೆಹಲಿ: ಭಾರತೀಯ ಸಿನಿಮಾ ರಂಗಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಬಾಲಿವುಡ್‌ನ ಹಿರಿಯ ನಟಿ, ನಿರ್ದೇಶಕಿ ಮತ್ತು ನಿರ್ಮಾಪಕಿ ಆಶಾ ಪಾರೇಖ್ ಅವರಿಗೆ 2020ನೇ ಸಾಲಿನ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಮಂಗಳವಾರ ಘೋಷಿಸಲಾಗಿದೆ.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ನ.10ಕ್ಕೆ ಕೆಂಪೇಗೌಡ ಪ್ರತಿಮೆ ಅನಾವರಣ: ಪ್ರಧಾನಿ ಭಾಗಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ಸ್ಥಾಪಿಸುತ್ತಿರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ನ. 10ರಂದು ಪ್ರಧಾನಿ ನರೇಂದ್ರ ಮೋದಿ ಅನಾವರಣಗೊಳಿಸುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ವಿಮಾನ ನಿಲ್ದಾಣದ ಆವರಣದಲ್ಲಿ ಕೆಂಪೇಗೌಡರ ಭವ್ಯವಾದ ಪ್ರತಿಮೆ ಸ್ಥಾಪಿಸುವ ಯೋಜನೆಯನ್ನು 2019ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದರು. ನಂತರ ಮುಖ್ಯಮಂತ್ರಿಯಾದ ಬಸವರಾಜ ಬೊಮ್ಮಾಯಿ, ಪ್ರತಿಮೆ ಸ್ಥಾಪಿಸುವ ಜತೆಗೆ 20 ಎಕರೆಗೂ ಹೆಚ್ಚು ಜಾಗದಲ್ಲಿ ಥೀಮ್ ಪಾರ್ಕ್ ಅಭಿವೃದ್ಧಿಪಡಿಸುವ ತೀರ್ಮಾನ ಕೈಗೊಂಡಿದ್ದರು.

ಪ್ರತಿಮೆ ಮತ್ತು ಪಾರ್ಕ್ ಕಾಮಗಾರಿ ಉಸ್ತುವಾರಿಯನ್ನು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ನೋಡಿಕೊಳ್ಳುತ್ತಿದ್ದಾರೆ. ಕೆಂಪೇಗೌಡರ ಪ್ರತಿಮೆಯನ್ನು ನೋಯ್ಡಾದ ಶಿಲ್ಪಿ ರಾಮ್ ಸುತರ್ ಸಿದ್ಧಪಡಿಸಿದ್ದಾರೆ.

ಸೇಂಟ್ ಜೋಸೆಫ್ಸ್ ವಿ.ವಿ ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು

‘ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಉಚ್ಚತಾ ಶಿಕ್ಷಣ ಅಭಿಯಾನದಡಿ ಉನ್ನತೀಕರಿಸಿದ ನಗರದ ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಉದ್ಘಾಟಿಸಿದರು.

ಶಾಂತಿನಗರದ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಕಾರ್ಯಕ್ರಮ ಜರುಗಿತು. ವಿಶ್ವವಿದ್ಯಾಲಯದ ಕಿರು ಪರಿಚಯದ ವಿಡಿಯೊವನ್ನು ಪ್ಲೇ ಮಾಡುವ ಮೂಲಕ ಉದ್ಘಾಟನೆ ನೆರವೇರಿತು.

ರಾಷ್ಟ್ರಪತಿ ದ್ರೌಪದಿ ಮುರ್ಮು, ‘ಶಿಕ್ಷಣ ಕೇವಲ ಪಠ್ಯಕ್ಕಷ್ಟೇ ಸೀಮಿತವಾಗಬಾರದು. ಕಲೆ, ಸಂಸ್ಕೃತಿ, ಮಾನವೀಯ ಮೌಲ್ಯ, ನೈತಿಕತೆ, ಕೌಶಲ... ಹೀಗೆ ಎಲ್ಲ ಕ್ಷೇತ್ರದಲ್ಲೂ ವಿದ್ಯಾರ್ಥಿಗಳಿಗೆ ಜ್ಞಾನ ನೀಡಬೇಕು. ಈ ಮೂಲಕ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಿ, ವಿದ್ಯಾರ್ಥಿಗಳ ಭವಿಷ್ಯದ ಜೊತೆಯಲ್ಲೇ ದೇಶದ ಅಭಿವೃದ್ಧಿಗೆ ಕೈ ಜೋಡಿಸಬೇಕು’ ಎಂದರು.



ಶಾಂತಿನಗರದ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಕಟ್ಟಡ – ಪ್ರಜಾವಾಣಿ

‘ದೇಶದ ಶಿಕ್ಷಣ ವ್ಯವಸ್ಥೆ ಬಲಪಡಿಸಲು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಲಾಗಿದೆ. ದೇಶದ ಶಿಕ್ಷಣ ಸಂಸ್ಥೆಗಳು, ವಿಶ್ವದರ್ಜೆಯ ಕಲಿಕಾ ಕೇಂದ್ರಗಳಾಗಬೇಕು. ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿರುವ ನಾವು, ಮುಂದಿನ 25 ವರ್ಷಗಳ ನಂತರ ಶತಮಾನೋತ್ಸವ ಆಚರಿಸುತ್ತೇವೆ. ಈ ಸಮಯಕ್ಕೂ ಮೊದಲೇ ಶಿಕ್ಷಣದಲ್ಲಿ ಭಾರತ ಶಕ್ತಿಶಾಲಿ ದೇಶವಾಗಬೇಕು’ ಎಂದೂ ರಾಷ್ಟ್ರಪತಿ ಹೇಳಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ‘ಹಲವು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಿರುವ ಬೆಂಗಳೂರು ಇತ್ತೀಚಿನ ದಿನಗಳಲ್ಲಿ ಶಿಕ್ಷಣದ ಹಬ್ ಆಗುತ್ತಿದೆ. ಸೇಂಟ್ ಜೋಸೆಫ್ಸ್ ಕಾಲೇಜು, ಇಂದು ವಿಶ್ವವಿದ್ಯಾಲಯ ಆಗುತ್ತಿರುವುದು ಖುಷಿ ಸಂಗತಿ. ಚರಿತ್ರೆ ಸೃಷ್ಟಿಸುವ ಹಾಗೂ ಮಾನಸಿಕ–ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಶಿಕ್ಷಣ ವಿದ್ಯಾರ್ಥಿಗಳಿಗೆ ಸಿಗಲಿ’ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉನ್ನತ ಶಿಕ್ಷಕ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಆರ್ಚ್ ಬಿಷಪ್ ಪೀಟರ್ ಮಚಾಡೊ, ವಿಶ್ವವಿದ್ಯಾಲಯದ ಕುಲಾಧಿಪತಿ ಡೈಯೊನಿಸಿಯಸ್ ವಾಜ್, ಸಹ ಕುಲಪತಿ ಸ್ವೇಬರ್ಟ್ ಡಿಸಿಲ್ವಾ ಹಾಗೂ ಕುಲಪತಿ ವಿಕ್ಟರ್ ಲೋಬೊ ಕಾರ್ಯಕ್ರಮದಲ್ಲಿದ್ದರು.

ಹೊಸ ಕ್ಯಾಂಪಸ್: ‘ಸೊಸೈಟಿ ಆಫ್ ಜೀಸಸ್ ಆಡಳಿತ ಮಂಡಳಿ ನಿರ್ವಹಣೆಯಲ್ಲಿ ವಿಶ್ವವಿದ್ಯಾಲಯ ಆರಂಭವಾಗಿದೆ. ವಿವಿಧ ವಿಭಾಗಗಳಲ್ಲಿ 8,500 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ದೊಡ್ಡ ಕ್ಯಾಂಪಸ್ ನಿರ್ಮಾಣ ಮಾಡುವ ಉದ್ದೇಶವಿದೆ’ ಎಂದು ಆಡಳಿತ ಮಂಡಳಿ ತಿಳಿಸಿದೆ.

ಸಂಚಾರ ದಟ್ಟಣೆ: ಅಂಗಡಿಗಳು ಬಂದ್

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಸಂಚಾರದ ವೇಳೆ ಕೆಲ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಓಡಾಟಕ್ಕೆ ನಿರ್ಬಂಧ ವಿಧಿಸಿದ್ದರಿಂದ, ವಿಪರೀತ ದಟ್ಟಣೆ ಉಂಟಾಯಿತು. ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ಉದ್ಘಾಟನಾ ಕಾರ್ಯಕ್ರಮಕ್ಕೆ ಭದ್ರತೆ ಒದಗಿಸಿದ್ದ ಪೊಲೀಸರು, ಶಾಂತಿನಗರದ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿ ಅಂಗಡಿಗಳನ್ನು ಸಂಪೂರ್ಣ ಬಂದ್ ಮಾಡಿಸಿದ್ದರು.

ರಿಚ್ಮಂಡ್ ವೃತ್ತದ ಮೇಲ್ಸೇತುವೆ ಹಾಗೂ ನಂಜಪ್ಪ ವೃತ್ತದಲ್ಲಿ ಮಧ್ಯಾಹ್ನ ವಾಹನಗಳ ಸಂಚಾರ ನಿಷೇಧಿಸಲಾಗಿತ್ತು. ರಾಷ್ಟ್ರಪತಿ ವಾಹನ ಸಂಚಾರದಿಂದಾಗಿ, ಶಾಂತಿನಗರ, ಕಾರ್ಪೊರೇಷನ್ ವೃತ್ತ, ರೆಸಿಡೆನ್ಸಿ ರಸ್ತೆ, ರಾಜಭವನ ರಸ್ತೆ ಹಾಗೂ ಸುತ್ತಮುತ್ತ ದಟ್ಟಣೆ ಕಂಡುಬಂತು.

ನಳಿನಿ ಶೇಖರ್‌ಗೆ ಎಂ.ಜಿ. ಮೋಟರ್ ಗೌರವ

ಬೆಂಗಳೂರು: ಹಸಿರು ದಳದ (ಗ್ರೀನ್ ಫೋರ್ಸ್) ಸ್ಥಾಪಕಿ ನಳಿನಿ ಶೇಖರ ಅವರಿಗೆ ಎಂ.ಜಿ. ಮೋಟರ್ ಗೌರವ ಲಭಿಸಿದೆ.



ಎಂ.ಜಿ. ಚೇಂಜ್ ಮೇಕರ್‌ಗಳ ಸೀಸನ್ 4ರಲ್ಲಿ ಸುಸ್ಥಿರತೆ ವಿಷಯಕ್ಕೆ ಒತ್ತು ನೀಡಲಾಗಿತ್ತು. ಪೌರ ಕಾರ್ಮಿಕರ ಏಕೀಕರಣದ ಪ್ರವರ್ತಕರಾದ ನಳಿನಿ ಶೇಖರ್ ಅವರ ಸಾಮೂಹಿಕ ಸಬಲೀಕರಣದ ಮೂಲಕ ಹಿಂದುಳಿದ ಸಮುದಾಯಗಳಿಗೆ ಸಹಾಯ ಮಾಡುವ ಸುಸ್ಥಿರ ಮತ್ತು ನವೀನ ಪ್ರಯತ್ನಕ್ಕೆ ಈ ಗೌರವ ಲಭಿಸಿದೆ ಎಂದು ಪ್ರಕಟಣೆಯು ತಿಳಿಸಿದೆ.



ಬೆಂಗಳೂರು ಕೃಷಿ ವಿ.ವಿಯಲ್ಲಿ ನಡೆದ ತರಬೇತಿಗೆ ವಿಸ್ತರಣಾ ನಿರ್ದೇಶಕ ಡಾ.ಕೆ. ನಾರಾಯಣಗೌಡ ಚಾಲನೆ ನೀಡಿದರು

‘ತಂತ್ರಜ್ಞಾನ ಬಳಸಿ ಕೃಷಿಕರ ಮನೆಗೆ ಮಾಹಿತಿ’

ಬೆಂಗಳೂರು: ‘ಕೃಷಿ ತಂತ್ರಜ್ಞಾನಗಳ ಶೀಘ್ರ ವರ್ಗಾವಣೆಗೆ ಡಿಜಿಟಲ್ ತಂತ್ರಜ್ಞಾನ ಅವಶ್ಯ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ ಹೇಳಿದರು.

ಕೃಷಿ ವಿಶ್ವವಿದ್ಯಾಲಯದಲ್ಲಿ ಈಚೆಗೆ ಆಯೋಜಿಸಿದ್ದ ತರಬೇತಿಯಲ್ಲಿ ಅವರು ಮಾತನಾಡಿದರು.

‘ಕೃಷಿ ಸಂಬಂಧಿತ ಇಲಾಖೆ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಸಿಬ್ಬಂದಿ ಕೊರತೆಯಿದೆ. ವಾಟ್ಸ್‌ಆ್ಯಪ್, ಯುಟ್ಯೂಬ್ ಮತ್ತು ಕೃಷಿ ಆ್ಯಪ್‌ಗಳ ಮೂಲಕ ನೂತನ ತಂತ್ರಜ್ಞಾನವನ್ನು ಕೃಷಿಕರ ಮನೆ ಬಾಗಿಲಿಗೇ ಅತ್ಯಂತ ಕಡಿಮೆ ಸಮಯದಲ್ಲಿ ಹೆಚ್ಚಿನ ರೈತರಿಗೆ ತಲುಪಲು ಡಿಜಿಟಲ್ ತಂತ್ರಜ್ಞಾನ ಸಹಕಾರಿ’ ಎಂದು ಹೇಳಿದರು.

ತರಬೇತಿ ಸಂಯೋಜಕ ಡಾ.ಕೆ. ಶಿವರಾಮು ಅವರು ಕೃಷಿಯಲ್ಲಿ ಮೊಬೈಲ್ ಆ್ಯಪ್ ಬಳಕೆ, ಬದಲಾಗುತ್ತಿರುವ ಹವಾಮಾನದಲ್ಲಿ ಡಿಜಿಟಲ್ ತಂತ್ರಜ್ಞಾನ ಸ್ಥಿತಿಸ್ಥಾಪಕತ್ವ, ಭೌಗೋಳಿಕ ಮಾಹಿತಿ ವ್ಯವಸ್ಥೆಯ ಅಳವಡಿಕೆ, ಮಾರುಕಟ್ಟೆಯಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಕೆ, ಕೃಷಿ ಸ್ಟಾರ್ಟ್‌ಅಪ್‌ಗಳ ಕುರಿತು ಮಾಹಿತಿ ನೀಡಿದರು.

ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆ ಪ್ರಾಧ್ಯಾಪಕಿ ಡಾ.ಎ.ಶೈಲಜಾ, ಡಾ.ಕಲ್ಪನಾ, ಡಾ.ಆರ್.ನಾರಾಯಣ ರೆಡ್ಡಿ, ಡಾ.ಸಿ.ವಿ.ವೆಂಕಟೇಶಮೂರ್ತಿ ಭಾಗವಹಿಸಿದ್ದರು.

ಸುಳ್ಳು ಮಾಹಿತಿ ನೀಡಿ ಹಕ್ಕುಪತ್ರ ಪಡೆದ 27 ಮಂದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ (ಹೆಚ್ಚುವರಿ) 27 ಫಲಾನುಭವಿಗಳು ಸುಳ್ಳು ಮಾಹಿತಿ ನೀಡಿ ಹಕ್ಕುಪತ್ರ ಪಡೆದ ಪ್ರಕರಣದಲ್ಲಿ ಕರ್ತವ್ಯಲೋಪ ಎಸಗಿರುವ ಆರೋಪ ಎದುರಿಸುತ್ತಿರುವ ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿ ಕೆ.ರಂಗನಾಥ್ ಪ್ರಕರಣವನ್ನು ಉಪಲೋಕಾಯುಕ್ತಕ್ಕೆ ವಹಿಸಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ.

ಯಲಹಂಕ, ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಉತ್ತರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ರಂಗನಾಥ್ ಅವರು ಅಲ್ಪಾವಧಿಯಲ್ಲೇ 37 ಎಕರೆಯನ್ನು (₹200 ಕೋಟಿ ಮೌಲ್ಯ) ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ 15 ಪ್ರಕರಣಗಳ ಬಗ್ಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಎನ್.ಮಂಜುನಾಥ ಪ್ರಸಾದ್ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ 2020ರ ಜುಲೈ 25ರಂದು ವರದಿ ಸಲ್ಲಿಸಿದ್ದರು. ಆದರೂ, ಸರ್ಕಾರ ಕ್ರಮ ಕೈಗೊಂಡಿರಲಿಲ್ಲ.

ಮುಖ್ಯಾಂಶಗಳು

- ಸೇವೆಯಿಂದ ಅಮಾನತು ಆಗಿರುವ ರಂಗನಾಥ್
- ತಹಶೀಲ್ದಾರ್ ಆಗಿದ್ದ ವೇಳೆಯೂ ಕರ್ತವ್ಯಲೋಪ ಎಸಗಿರುವ ಅಧಿಕಾರಿ

ರಂಗನಾಥ್ ಎಸಗಿದ ಭೂ ಅಕ್ರಮದ ಬಗ್ಗೆ ‘37 ಎಕರೆ ಗೋಮಾಳ ಪರಭಾರೆ; ಅಧಿಕಾರಿಗೆ ರಕ್ಷಣೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ 2022ರ ಫೆ.18ರಂದು ವರದಿ ಪ್ರಕಟವಾಗಿತ್ತು. ಮಾರ್ಚ್ ತಿಂಗಳಲ್ಲಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು. ಇದೀಗ, ಮತ್ತೊಂದು ಪ್ರಕರಣದಲ್ಲಿ ಕ್ರಮಕ್ಕೆ ಸರ್ಕಾರ ಶಿಫಾರಸು ಮಾಡಿದೆ. ಮೇಡಿ ಅಗ್ರಹಾರ ಗ್ರಾಮದ ಸರ್ವೆ ಸಂಖ್ಯೆ 24ರಲ್ಲಿ ಬಿ.ಎನ್.ದ್ವಾರಕನಾಥ್, ಷಣ್ಮುಗಂ, ರಾಣಿ, ಶುಭಶ್ರೀ, ಕೃಷ್ಣಮ್ಮ, ಕೆ.ವೈ. ಮೂರ್ತಿ, ಕಲಾವತಿ, ಮುನಿರಾಜು, ವಿ.ಎಂ.ಗಣೇಶ್, ವಿ.ಎಂ. ಹರೀಶ್, ಪದ್ಮ, ಅಂಕಮ್ಮ ಸೇರಿದಂತೆ 27 ಮಂದಿ ಸುಳ್ಳು ಮಾಹಿತಿ ನೀಡಿ ಹಕ್ಕುಪತ್ರ ಪಡೆದಿದ್ದರು. ಜತೆಗೆ, ಹಕ್ಕುಪತ್ರದಲ್ಲಿ ವಿಧಿಸಿದ್ದ ಷರತ್ತುಗಳನ್ನು ಉಲ್ಲಂಘಿಸಿದ್ದರು. ಈ ವೇಳೆ, ಉತ್ತರ ತಹಶೀಲ್ದಾರ್ ಆಗಿದ್ದ ರಂಗನಾಥ್ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಯಾವುದೇ ಕ್ರಮ ಕೈಗೊಳ್ಳದೆ ಕರ್ತವ್ಯಲೋಪ ಎಸಗಿದ್ದರು.

ದೂರು ನೀಡಿದ್ದರೂ ಕ್ರಮ ಕೈಗೊಂಡಿರಲಿಲ್ಲ. ಇದರಿಂದಾಗಿ, ಸರ್ಕಾರದ ಮಹತ್ವದ ಯೋಜನೆಯು ಸರ್ಕಾರದ ಪಾಲಾಗಿದೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕಂದಾಯ ಇಲಾಖೆಯು 2018ರ ಮೇ ತಿಂಗಳಲ್ಲಿ ಶಿಫಾರಸು ಮಾಡಿತ್ತು. ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರು ಸಹ 2018ರಲ್ಲಿ ಸರ್ಕಾರಕ್ಕೆ ಪತ್ರ ಬರೆದಿದ್ದರು. ಇದೀಗ, ನಾಲ್ಕು ವರ್ಷಗಳ ಬಗ್ಗೆ ಸರ್ಕಾರವು, ಈ ಪ್ರಕರಣದ ಬಗ್ಗೆ ಪೂರ್ಣ ಪ್ರಮಾಣದ ವಿಚಾರಣೆಯ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟು ತನಿಖೆಗೆ ಆದೇಶಿಸಿದೆ.

ಖಾದಿ ಉತ್ಪನ್ನ ಖರೀದಿಸಿ– ಎಂಟಿಬಿ

ಬೆಂಗಳೂರು: ‘ಗಾಂಧಿ ಜಯಂತಿಯಂದು (ಅ. 2) ತಮ್ಮ ವ್ಯಾಪ್ತಿಯಲ್ಲಿ ಬರುವ ಖಾದಿ ಭಂಡಾರಗಳಿಗೆ ಭೇಟಿ ನೀಡಿ, ಖಾದಿ ಉತ್ಪನ್ನಗಳನ್ನು ಖರೀದಿಸುವ ಮೂಲಕ ನಷ್ಟದಲ್ಲಿರುವ ಖಾದಿ ಸಂಘ-ಸಂಸ್ಥೆಗಳಿಗೆ ಉತ್ತೇಜನ ನೀಡಬೇಕು’ ಎಂದು ಎಲ್ಲ ಶಾಸಕರಿಗೆ ಸಣ್ಣ ಕೈಗಾರಿಕೆ ಸಚಿವ ಎಂಟಿಬಿ ನಾಗರಾಜು ಪತ್ರ ಬರೆದಿದ್ದಾರೆ.

‘ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ಯ ಮತ್ತು ಸ್ವಾವಲಂಬಿ ಗ್ರಾಮ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಉದ್ದೇಶದಿಂದ ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಸ್ಥಾಪಿಸಲಾಗಿದೆ. ಅದು ಲಾಭದಾಯಕವಾಗಿಲ್ಲ. ಖಾದಿ ಸಂಘ-ಸಂಸ್ಥೆಗಳನ್ನು ಪುನಶ್ಚೇತನಗೊಳಿಸಿ ಗಾಂಧೀಜಿ ಕನಸು ನನಸು ಮಾಡಬೇಕಿದೆ’ ಎಂದಿದ್ದಾರೆ.

‘ರಾಜ್ಯದಲ್ಲಿ ಖಾದಿ ಉತ್ಪನ್ನಗಳನ್ನು ಉತ್ಪಾದಿಸುವ ಸುಮಾರು 200 ಸಂಸ್ಥೆಗಳಿವೆ. ಅವುಗಳಲ್ಲಿ ಸುಮಾರು 20 ಸಾವಿರ ನೂಲುವವರು, ನೇಕಾರರು ಕೆಲಸ ಮಾಡುತ್ತಿದ್ದಾರೆ. ಕೋವಿಡ್‌ನಿಂದ ಖಾದಿ ಸಂಘ-ಸಂಸ್ಥೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಹೀಗಾಗಿ, ಗಾಂಧಿ ಜಯಂತಿಯ ಸುಸಂದರ್ಭದಲ್ಲಿ ಖಾದಿ ಉತ್ಪನ್ನಗಳನ್ನು ಖರೀದಿಸುವ ಮೂಲಕ ಜನಪ್ರತಿನಿಧಿಗಳು ಈ ಸಂಸ್ಥೆಗಳ ನೆರವಿಗೆ ಬರಬೇಕಿದೆ’ ಎಂದೂ ತಿಳಿಸಿದ್ದಾರೆ.

ಕಾರಾಗೃಹ ಮತ್ತು ಸುಧಾರಣೆ ಸೇವೆ
ಮುಖ್ಯ ಅಧೀಕ್ಷಕರವರ ಕಛೇರಿ,
ಕೇಂದ್ರ ಕಾರಾಗೃಹ ಬೆಂಗಳೂರು, ಎಲೆಕ್ಟ್ರಾನಿಕ್ ಸಿಟಿ (ಅಂಚೆ) ಪರಪ್ಪನ ಅಗ್ರಹಾರ, ಬೆಂಗಳೂರು – 560 100. ದೂರವಾಣಿ : 080–2573 1611.
ಸಂಖ್ಯೆ : ಕೇ.ಕಾ.ಬೆಂ./ವಾಹನ ಹರಾಜು/9996/2022-23   ದಿನಾಂಕ : 16-09-2022

"ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ"

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು ರವರ ಸಂಸ್ಥೆಗೆ ಸೇರಿದ ಈ ಕೆಳಕಂಡ ವಾಹನಗಳನ್ನು ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ದಿನಾಂಕ : 01–10–2022 ರಂದು ಏರ್ಪಡಿಸಲಾಗಿದೆ. ಆಸಕ್ತಿಯುಳ್ಳ ಸಾರ್ವಜನಿಕರು ಈ ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.
1) ವಾಹನ ಸಂಖ್ಯೆ : ಕೆ.ಎ.05 ಜಿ-6025, ಮಾರುತಿ ಓಮ್ನಿ, ಇ.ಎಂ.ಡಿ. ಶೇಖರಣೆ : ರೂ. 625/. 2) ವಾಹನ ಸಂಖ್ಯೆ : ಕೆ.ಎ.01 ಜಿ-8251, ಮಹೀಂದ್ರ ಆಂಬ್ಯುಲೆನ್ಸ್, ಇ.ಎಂ.ಡಿ. ಶೇಖರಣೆ : ರೂ. 675/-. 3) ವಾಹನ ಸಂಖ್ಯೆ : ಕೆ.ಎ.01 ಜಿ-3253, ಹೆಚ್.ಎಂ.ಟಿ. ಟ್ರ್ಯಾಕ್ಟರ್, ಇ.ಎಂ.ಡಿ. ಶೇಖರಣೆ : ರೂ. 900/-. 4) ವಾಹನ ಸಂಖ್ಯೆ : ಕೆ.ಎ.01 ಜಿ-8288, ಟಾಟಾ ಮಿನಿ ಬಸ್, ಇ.ಎಂ.ಡಿ. ಶೇಖರಣೆ : ರೂ. 7,500/-. 5) ವಾಹನ ಸಂಖ್ಯೆ : ಕೆ.ಎ.01 ಜಿ-8311, ಟಾಟಾ ವಾಟರ್ ಟ್ಯಾಂಕರ್, ಇ.ಎಂ.ಡಿ. ಶೇಖರಣೆ : ರೂ. 3,750/-. 6) ವಾಹನ ಸಂಖ್ಯೆ : ಕೆ.ಎ.02 ಜಿ-83, ಯಮಹ ಆರ್.ಎಕ್ಸ್ ಮೋಟರ್ ಸೈಕಲ್, ಇ.ಎಂ.ಡಿ. ಶೇಖರಣೆ : ರೂ. 150/-. 7) ವಾಹನ ಸಂಖ್ಯೆ : ಎಂಇಇ-1123, ಬಜಾಜ್, ಇ.ಎಂ.ಡಿ. ಶೇಖರಣೆ : ರೂ. 335/-.
ವಿಕ್ರಯದ ಮಾದರಿ : ಟೆಂಡರ್ ಕಂ ಬಹಿರಂಗ ಹರಾಜು. ಟೆಂಡರ್‌ಗಳನ್ನು ಸ್ವೀಕರಿಸುವ ಸ್ಥಳ : ಮುಖ್ಯ ಅಧೀಕ್ಷಕರ ಕಛೇರಿ, ಕೇಂದ್ರ ಕಾರಾಗೃಹ, ಎಲೆಕ್ಟ್ರಾನಿಕ್ ಸಿಟಿ (ಅಂಚೆ), ಪರಪ್ಪನ ಅಗ್ರಹಾರ, ಬೆಂಗಳೂರು – 100. ಹರಾಜಿನ ದಿನಾಂಕ ಮತ್ತು ವೇಳೆ : 01–10–2022 ರ ಬೆಳಗ್ಗೆ 11.00 ಗಂಟೆ. ಟೆಂಡರ್ ಕಂ ಬಹಿರಂಗ ಹರಾಜು ನಡೆಯುವ ಸ್ಥಳ : ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು ರವರ ಕಛೇರಿಯ ಆವರಣ.

ಸಹಿ/– ಪಿ. ಎಸ್. ರಮೇಶ್
ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಬೆಂಗಳೂರು.
ವಾಸಾಇ/ಬೆಂ.ನ./2371/ಮಣಿಪಾಲ್/2022–23

ಪೌಷ್ಟಿಕ ಆಹಾರ ಸೇವಿಸಿ
ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂ: ಬೆಂಅಪ್ರಾ/ಕಾಅ(ಉ)/ಟೆ-02/2022-23   ದಿನಾಂಕ : 19.09.2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಉತ್ತರ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು :- **Balance Work for Construction of Sports Complex and other Improvement Works in BDA CA Site No.3(P) (Play Ground) of OMBR Layout, Sarvagna Nagar.** ಅಂದಾಜು ಮೊತ್ತ ರೂ.931.40 ಲಕ್ಷಗಳು. ಹಾಗೂ EMD ಮೊತ್ತ ರೂ.15.00 ಲಕ್ಷಗಳು.
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಬಂದ ಟೆಂಡರ್‌ಗಳನ್ನು ಮಾತ್ರ ಸ್ವೀಕರಿಸಲಾಗುವುದು. ಅಧಿಸೂಚನೆಯ ಪೂರ್ಣ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ www.eproc.karnataka.gov.in ಗೆ ಲಾಗ್ ಇನ್ ಆಗಿ ದಿನಾಂಕ:22.09.2022 ರಂದು 16.00 ಗಂಟೆಯ ನಂತರ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29.09.2022 ರಂದು 17.00 ಗಂಟೆಗೆ ಮುಕ್ತಾಯವಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಮೊಬೈಲ್ ಸಂಖ್ಯೆ: 9148170170 & 9663863446ಕ್ಕೆ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
BDA/PRO/TN/17/2022-23   ಉತ್ತರ ವಿಭಾಗ, ಬೆಂ.ಅ.ಪ್ರಾ, ಬೆಂಗಳೂರು

‘ಉಳ್ಳೇರಹಳ್ಳಿ ಪ್ರಕರಣ; ಕ್ಷಮೆ ಇರಕೂಡದು’

ಮಾಲೂರು (ಕೋಲಾರ ಜಿಲ್ಲೆ): ‘ಉಳ್ಳೇರಹಳ್ಳಿಯಲ್ಲಿ ಪರಿಶಿಷ್ಟ ಕುಟುಂಬದ ಮೇಲೆ ದೌರ್ಜನ್ಯವೆಸಗಿ, ಅಮಾಯಕ ಬಾಲಕನ ಮನಸ್ಸನ್ನು ಘಾಸಿ ಮಾಡಿರುವವರಿಗೆ ಕ್ಷಮೆ ಎಂಬುದು ಇರಕೂಡದು’ ಎಂದು ಶಾಸಕ ಎಸ್.ಸುರೇಶ್ ಕುಮಾರ್ ಹೇಳಿದ್ದಾರೆ.

ಗ್ರಾಮ ಹಾಗೂ ಶಾಲೆಗೆ ಭೇಟಿ ನೀಡಿ ಕುಟುಂಬ ಹಾಗೂ ಬಾಲಕನಿಗೆ ಸಾಂತ್ವನ ಹೇಳಿರುವುದನ್ನು ತಮ್ಮ ಫೇಸ್‌ಬುಕ್ ಪುಟದಲ್ಲಿ ಅವರು ಹಾಕಿಕೊಂಡಿದ್ದಾರೆ.

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ.: VRDP_Addl Loopline
ದಿನಾಂಕ: 21.09.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ವರದಾಪುರ ನಿಲ್ದಾಣ: ಹೆಚ್ಚುವರಿ ಲೂಪ್ ಲೈನ್ ಅನ್ನು ಒದಗಿಸುವ ಕೆಲಸ (ರಸ್ತೆ – 05) 750ಮೀ. ಸಿಎಸ್‌ಎಲ್ ನೊಂದಿಗೆ.	ರೂ. 3,51,74,010.71

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.10.2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಸಿಗ್ನಲ್ ಮತ್ತು ದೂರಸಂಪರ್ಕ ಇಂಜಿನಿಯರ್, ಯೋಜನೆಗಳು, ಬೆಂಗಳೂರು
PUB/385/AAD/PRB/SWR/2022-23
S.W.Railways SWRRLY SWRRLY

ಬಿಬಿಎಂಪಿ: ಕಳಪೆ ರಸ್ತೆ ಕಾಮಗಾರಿಯ ದೂರು
ಇಬ್ಬರು ಅಧಿಕಾರಿಗಳ ಅಮಾನತು


ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯೂ ಬಿಇಎಲ್ ರಸ್ತೆಯಲ್ಲಿ ಕಳಪೆ ಕಾಮಗಾರಿ ನಡೆದಿದ್ದು, ಬಿಬಿಎಂಪಿಯ ಇಬ್ಬರು ಎಂಜಿನಿಯರ್‌ಗಳನ್ನು ಅಮಾನತು ಮಾಡಲಾಗಿದೆ.

ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಂ.ಸಿ.ಕೃಷ್ಣೇಗೌಡ ಹಾಗೂ ಬಿಬಿಎಂಪಿ ರಸ್ತೆ ಅಭಿವೃದ್ಧಿ ವಿಭಾಗದ (ಪಶ್ಚಿಮ ವಿಭಾಗ) ವಿಷಕಂಠ ಮೂರ್ತಿ ಅವರನ್ನು ಅಮಾನತು ಮಾಡಲಾಗಿದೆ.

ಕಳೆದ ತಿಂಗಳು ನಡೆದಿದ್ದ ಇಲಾಖೆಗಳ ಆಂತರಿಕ ಸಮನ್ವಯ ಸಮಿತಿ ಸಭೆಯಲ್ಲಿ ಸಂಚಾರ ಪೊಲೀಸರು ಕಳಪೆ ಕಾಮಗಾರಿ ನಡೆದಿರುವ ಬಗ್ಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ ಅವರು ಅಮಾನತು ಆದೇಶ ಹೊರಡಿಸಿದ್ದಾರೆ.

ರಸ್ತೆ ಪರಿಶೀಲನೆ ವೇಳೆ ಲೋಪ ಕಂಡುಬಂದಿತ್ತು. ಮೂಲಸೌಕರ್ಯ-ದಿಂದ ಕೆಲವು ಸೂಚನೆ ನೀಡಿದ್ದರೂ ಅಧಿಕಾರಿಗಳು ಪಾಲನೆ ಮಾಡಿರಲಿಲ್ಲ. ಕಳಪೆ ಕಾಮಗಾರಿಯ ದೂರನ್ನು ಗಂಭೀರವಾಗಿ ಪರಿಗಣಿಸದ ಕಾರಣಕ್ಕೆ ಅಮಾನತುಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಜ್ಞಾನಗಂಗ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗ, ಕರುನಾಡು ಹಣತೆ ಕವಿ ಬಳಗ ಮತ್ತು ಸಾಂಸ್ಕೃತಿಕ ಘಟಕ ಚಿತ್ರದುರ್ಗದ ಸಹಯೋಗದಲ್ಲಿ ಆಯೋಜಿಸಿದ್ದ ‘ಕರುನಾಡು ಕವಿ–ಕಲಾವಿದರ ಸಮ್ಮೇಳನ–2022’ರಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 150 ಸಾಧಕರಿಗೆ ‘ಕರುನಾಡು ಸೇವಾ ರತ್ನ ಪ್ರಶಸ್ತಿ’ ಪ್ರದಾನ ಮಾಡಲಾಯಿತು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

K.L.V EDUCATION & Rural Development Seva Trust (R) Bangalore Requires OFFICE ADMINISTATOR cum ACCOUNTANT-(Male) BCom/MCom and COMPUTER LECTURER: M.Sc B.Ed with 0-3 years of experience. Contact: 9606281522 for more details send your CV to info@klveducation.org

COMMUNITY CENTRE (R)
COMMUNITY INSTITUTE OF COMMERCE & MANAGEMENT STUDIES
Affiliated to BENGALURU CITY UNIVERSITY
#2/1, 9th Cross, 9th Main, II Block, Jayanagar, Bangalore-560011.
Website: www.cicms.in Phone: 080 26565151
REQUIRE FACULTIES FOR BCA
Interested candidates may send their detailed CVs along with photocopies of Marks Card / Certificates of Work experience etc., to the above address by post or email to info.ccims@gmail.com within 15 days from the date of notification.
NOTE: Application should possess Bengaluru City University prescribed qualification and experience. SC/ST candidates preferred as per norms. Salary as per norms.
Sd/- Secretary

SRI JAGAJYOTHI BASAVESHWARA SAHAKARA SANGHA (N)
SJBBS PUBLIC SCHOOL (ICSE)
2nd Block, Rajajinagar, Bengaluru - 560 010.
REQUIRES
Trained Graduates / Post Graduates for English, Hindi, Biology, History, Civics & Geography, Art & Craft, Yoga, Librarian, Computer Teacher and Peon-10th Pass or Fail
The Candidates should have good command over written and spoken English and Basic Computer skills.
Attend walk-in-Interview on 01-10-2022, at 10.00 am with testimonials
Contact No.: 080-2332 2455

HARWARD Pre-University College
www.harwardinstitutions.com
Dasanapura, Tumkur Road, Bangalore North - 562123
WANTED Lecturer
Commerce (M.Com with Accounts and Taxation)
Economics
Computer Science
English
Administrator (Exp in Education institutions)
Front Office Receptionist
Walk in interview Regularly @ 10:30 am to 3:00 pm
Please send CV to infoharwardints@gmail.com
Ph:9880112833, 7892734523

SECAB SCHOOL, Kadirenahalli, Bangalore-70 Require K.G., Primary TEACHERS for English, Social, Mathematics. Contact: 99160-87586/ 42136268

WANTED HEAD Mistress, Hindi, Social Science, English, Computer Teachers. Primary, High School. J.P.Nagar. 9845042249/ 080-26590773.

ENGLISH, SOCIAL SCIENCE, PHYSICAL EDUCATION and NURSERY with NTT TEACHERS for reputed CBSE school in Bangalore. 9449835744, 9535601743. Walk-in interview.

GURUKULA INTERNATIONAL School Requires Nursery Co-Ordinator, Computer Teachers for High School and Lady Accountant with Kannada Typing. 9th Cross, Near Magadi Road, Metro Station Bangalore-23. 7829338292, 7676676629

WANTED ENGLISH Medium Lady TEACHERS (NTT TRAINED With computer knowledge) for Carmel Garden high_school Nandini layout Bangalore-96. Phone: 9739437454/ 9945050690.

Multiple Vacancy

REQUIRED, TEAMLEADER, & FieldExecutive For BankLoan collection. direct recruitment to company. Contact: 9620206756, 9620200756.

INDIAN RED CROSS SOCIETY
Karnataka State Branch
(Constituted Under Act XV of 1920)
No.26, 1st Floor, Red Cross Bhavan, Race Course Road, Bengaluru-560001, Phone: 080 - 22264205 / 22268435
Requires
Following posts on contratual basis
1) Blood Centre Medical Officer (M/F)- one post
2) Second Divisional Assistant - two posts
3) Junior Accountant –one post
For more details please visit our website www.redcrosskarnataka.org
S/d- General Secretary

OPPORTUNITY of Career & Income for Retired Officials, Bankers, Teachers, CAs, Professionals, Homemakers. Call: 8095301555

REQUIRED EXPERIENCED Part/ Full time with 3-5 yrs Experience AUTOCAD Mechanical & Electrical Designer & HR Executive. Mail detailed Resume to enerrgymonitors@gmail.com : 9019478277

Walk-in

HIRING for Store Manager, Asst. Store Manager, Sales Executive, Watch Technician and Cashier for Just In Time, Contact- 9900445787, E-Mail- blr@justintime.in

General

NEW BRANCH Hiring looking for Entrepreneurs to associate with leading MNC. Income upto 2 lac p.m. Rewards & Recognition. Contact:- 9845408460/ 9481379064

WANTED HOUSEWIFE, Retired, Self-Employed and Business people for Part time job opportunity. Contact:- 8217042937.

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

Marketing & Sales

WANTED COUNTER Sales Executives (M/F) for Two Wheeler Showroom Koramanagala, JPNagar, Rajajinagar. Salary + Incentives. 9945083900, 9731028676.

Engg/ Production Technical

CREDENCE ENGINEERING SERVICES, BENGALURU. Wanted Surveyors with Total Station/Auto-Cad knowledge and 5 - 7 Years Experience. Email: info@credenceind.in Contact: Anil Kumar Mob:9341255749

Security & Detectives

WANTED EXPERIENCED Business Development Manager (2) Female Telecaller for a Security Agency in Bangalore Contact: 9880287553, 9886200053, 9886200080

INDIA'S BEST Financial Brand offers a Revolutionary opportunity for Senior Citizens, Retd, VRS, NRI & Housewives. Limited seats only. 9591583662/ 9972169164.

EDUCATIONAL

Tuitions

SCHOOL & Colleges Can Contact For Rescue Mission Now at Your Door Step Best Home Tuitions ANY Maths/ Physics/ Chemistry/ French/ Hindi/ English/ Civil/ Aero nautical/ Mechanical/ Electrical & Electronics (All Subjects At All and Different Levels from 1st To 12th Standard BSC/ BE (PCM), CBSE/ ICSE/ ISC (PCM) Also IIT, JEE , Main & Advance In All Major Areas of Bangalore Including Towards Peenya, Kengeri, & Yelahanka, & Metro Routes From Mahalaxmi Layout, Big/ Special Push Given For Maths, Instant Results to follow Special Cash Returns/ Incentives Given for Those Who Sincerely Study & Prove So Through Out The Academic Year with Built in Safety Measures For All Tuitions Assured Marathon Sessions and Value for Money Most Friendly Tuitions Enough Seats Available By T.S.Shivashankar, PHD (USA) (Maths and Physics) Educated In USA, Brazil, Canada, England, France, Germany, Holland, Greece & Russia, (Many Times Over) Also Educated In Kendriya Vidyalaya I.I.T Kanpur (Twice) (1981, 12th Standard Pass out from K.V. I.I.T Kanpur) Father Former, Professor, Aero Nautical Department I.I.T Kanpur Come From Industry into Academics in 2 Related Fields Civil & Aeronautical (Koyna Dam Maharashtra & HAL Bangalore) Structural Engg, T.S.Shivashankar, International Scientist & Prodigy, Local Boy living in Mahalaxmi Layout Contact: 9743095715

COMMUNITY CENTRE (R)
COMMUNITY CENTRE SENIOR ENGLISH PRIMARY SCHOOL & COMMUNITY CENTRE HIGH SCHOOL
(Recognised by Government of Karnataka)
#2/1, 9th Cross, 9th Main, 2nd Block, Jayanagar, Bengaluru - 560011.
Phone: 080-26562966 Website: www.communitycentreschools.org
REQUIRE FACULTIES FOR PHYSICAL EDUCATION, HINDI & COMPUTER
(Qualification & Experience as per Education department norms).
Application open for CLERK (B.Com with Computer Knowledge)
Interested candidates may send their detailed CVs along with photocopies of Marks Card / Certificates of Work experience etc., to the above address by post or email to communitycentreenglishprimary@gmail.com within 15 days from the date of notification.
Sd/- Secretary

REAL ESTATE SELLING

Flat

Rajarajeshwari Nagar

2 BHK fully furnished Flat No.109 1st Floor for SALE in Rajarajeshwarinagar, Bengaluru Vasthu Hillview apartment Phase-1, ready to move in north facing balcony east. Call: 9739150042, 9986021243

Sites

Vishweshwariah Layout

VISHVESHWARIAH LAYOUT, BDA, Sixth block, 4000 sqft, East facing (2) Vishweshwaraya layout, First block, BDA Sixth block on 100 ft road. North facing. 2400 sqft. (3) Mysore Paper Mills Employees HBCSL, Malathalli, East Facing, 40X60 Semi-Commercial site.All are excellent location. Full cheque payment. Immediate Settlement. Contact: 9986690694

BUSINESS

Business to Business

Business

ARE YOU Hunger for Money? Earn unlimited income if you are Graduate and age in between 35- 65 yrs Ideal for House wife's, Retired & Self Employed. Part-time/ Full-Time. Contact: 9986585550

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

Hotel

REQUIRED FOR Radiant Resort in Bangalore, ExecutiveHousekeeper, Housekeeping supervisor, Lady GRE, Lady Receptionist, Indian cook, Senior captain, Waiters, Garden mestri. Call: 09986770784, 8095988877.

Wanted

WANTED LADY Telecaller with Good Communication Skills for Office at Konanakunte, Kanakapura Road. Contact ELAN: 9980883950

RENTAL PROPERTIES

Accommodation Available

Industrial And Factory

FOR RENT Industrial Commercial Office Warehouse 20000/ 25000/ 35000 Sqft. Yeshwanthpur, Sunkadakatte, Makali, Nagarabhavi. NAIK: 9141326819

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

COMMUNITY CENTRE (R)
COMMUNITY INSTITUTE OF MANAGEMENT STUDIES
Affiliated to Bengaluru City University, Approved by AICTE, New Delhi
#2/1, 9th Cross, 9th Main, 2nd Block, Jayanagar, Bengaluru - 560011
Website: www.cimsbschool.org Ph: 080 26557851
REQUIRE **MCA** FACULTIES FOR PROFESSOR / ASSOCIATE PROFESSOR / ASSISTANT PROFESSOR
Interested candidates may send their detailed CVs along with photocopies of Marks Card / Certificates of Work experience etc., to the above address by post or email to cimsbangalore@gmail.com within 15 days from the date of notification
Note: Application should possess AICTE prescribed qualification and experience. SC/ST candidates preferred as per norms. Salary as per norms
Sd/- Secretary

WE ARRANGE MORTGAGE, Housing & Purchaseloans on A-B & E Khata,CMC and Panchayat Khatas, from Schedule Bank. Jyothi8971377299.

DOCUMENT LOST
I have lost the original General Power of Attorney dated 24.02.1997 executed by Sri. D. Mahananda in favour of Sri. Lakshmana and Sale Deed dated 03.03.2005 in respect of Survey No.87/4 situated at Bettakote Village, Channarayapatna Hobli, Devanahalli Taluk, Bangalore Rural District purchased by Sri. A.S. Raja S/o. Ananthasiddappa from Sri. D. Mahananda S/o. Doddappayanna through GPA holder Sri. Lakshmana under Sale deed registered as document No.5218/2004-05, Book-I, Pages 1 to 9, stored in C.D. No. DNHD 41, dated 09.03.2005, same is registered in the Office of the Sub-Registrar, Devanahalli. I have lodged a Police Complaint vide Lost Report No. 0343945/2022, and Serial No.343945 dated 27.09.2022. This Notice is hereby given for the information of General Public that If anybody finds I kindly request you to deliver the same to **Sri. A.S. Raja,** No.1684, Kamakshamma Layout, Yelahanka Old Town, Bangalore Bangalore – 560 064.
27.09.2022 Mob: 94482 44030

PUBLIC NOTICE

PUBLIC NOTICE
I, Mr. Lingaraju L intends to purchase the immovable property more fully described in the schedule hereunder written and hereinafter referred to as the “Schedule Property” from its current owner Sri. Prakash P.G, was allotted by the Bangalore Development Authority (“BDA” for short). The BDA has executed an Absolute Sale Deed dated 10/05/2005, registered as Document No. BDA-1-01795-2005-06 of Book-I, Stored in C. D. No. BDAD88, registered at the office of Additional District Registrar, Bengaluru Urban District.
Any person/s, firms, societies, institutions, entity (corporate or otherwise) claiming to have any right, title, interest, benefit, claim or demand in, or to, the Schedule Property and/or any part thereof, by way of sale, exchange, gift, lease, tenancy, license, assignment, mortgage, charge, lien, trust, family arrangement/ settlement, encumbrance, inheritance, bequest, easement, possession, maintenance, development rights, order/ decree/ judgment of any Court, agreement, understanding or otherwise howsoever, to intimate the same, together with true copies of all documentary evidence/proof in support thereof, to the undersigned, at the address given below, within 10 days from the date of publication of this notice, failing which, any such claim/s in, to or on the Schedule Property or any part thereof shall be deemed to have been waived for all intents and purposes and the same would not be binding on me and I will proceed with acquiring the Schedule Property.
SCHEDULE
All that piece and parcel of vacant land bearing Site No.1262, BDA Khata – BDA/SOUTH/BSK6- 2/1262/16-17 dated- 30-1-2017, Block-II BSK 6th Stage, measuring East to West (18.60+18.30)/2 meters, North to South 12 meters, total 221.40 Sq. Meters, bounded by: **East By :** Private Property **West By :** Road, **North By :** Site bearing No. 1261, **South By :** Site bearing No. 1263
Lingaraju L
Address: 498/20 33rd ‘A’ Main, M.G Layout, J.P Nagar, 6th phase, Bangalore - 560 078
Email- pratheeklingaraju@gmail.com
Mobile : 95913 28441
Place : Bangalore -Date: 28.09.2022

MATRIMONIAL

Grooms Wanted

Others

WANTED BRIDEGROOM
For BRIDE 34, FAIR, REDDY, 5"3', HYDERABAD BASED, M.D GM I YR, IN PVT MEDICAL COLLEGE BANGLORE. GROOM WHO STUDIES PG OR PRACTICES(PG) OR OTHER AFFLUENT PROFESSIONAL IN AROUND BANGALORE MAY SEND DETAILS WITH LATEST PHOTOS TO WHATSAPP 9949593585 OR venkatmula@yahoo.co.in

PUBLIC NOTICE Notice is hereby given to public at large that the undersigned Advocates are investigating the title of the owners detailed below (‘Owners’) in respect of the properties described against their names in the Schedule below (“Schedule Properties”). The Owners have represented that they are the absolute owners of the respective properties shown against their name in the Schedule below and no other person has any manner of right, title or interest thereon.
All persons having or claiming any form of right, title, claim, demand or interest in the Schedule Properties or any objection/s of any manner whatsoever therein are hereby called upon to notify the undersigned with supporting documents within 15 (Fifteen) days from the date of this notice. If no such claim is received, it would be deemed that the said Owners have a clear and marketable title to the parcels of the Schedule Properties and that no person has any claim over the Schedule Properties and/or claim/s if any, will be deemed to have been waived.
SCHEDULE
All the properties described below are situated at Devarahalli Village, Maralwadi Hobli, Kanakapura Taluk, Ramanagara District and bounded on its:

Owners	Survey Nos.	Extent: Acres	Guntas	Kharab	Boundaries: East by	West by	North by	South by
M/s. Surabhi Organic Plantations Private Limited	106	1	20	6	Survey Nos. 107 and 109	Govt. Land	Govt. Land	Survey No. 169
	108	3	00	10				
	107	0	37	18	Survey Nos. 172, 110 and 178 and Govt.Land	Survey Nos. 106 and 108 and Govt. Land	Survey Nos. 108, 172, 110 and 112 and Govt. Land	Survey No. 169 and Govt. Land
	109	5	30	15				
	111	2	30	6				
	177	5	10	4				
S. Malini Mohan	110/2	1	1		Gangadhar's land	Gangadhar's land	Gangadhar's land	pathway
	169	11	33	20	Survey Nos.107,109 and Government Land	Govt. Land	Govt. Land	Govt. land
K. Sandhya Dilip	105		3		Survey No. 105 and Govt Land	Survey No. 112 and Private Property	Survey No. 105 and Govt. Road	Remaining portion of Survey No.105
	112/1		10.5		Ramachandra Rao's and Yelava Gowda's land	Remaining portion of Survey No. 112	Land of Late Nanjunde Gowda	Survey No. 177
	110/1	1	4		Gajalakshamma's Property	Gajalakshamma's Property	Govt. Road	Gajalakshamma's Property

G. Ravichandra, Advocate, No. 88, 23rd Cross, 3rd Block (East) Jayanagar, Bangalore – 560 011 **Ph. 9845149728**

AUTOMOTIVE

Four Wheelers Selling

Tata

USED YELLOW BOARD VEHICLES FOR SALE,TATA WINGER AND TATA INDICA FOR SALE. BULK SALE. CONTACT FOR MORE INFORMATION:9945506175/ 9880468881

PERSONAL

Change of Name

CHANGE OF NAME
I, **PRAKASHA KIKIKKERI VENKATA-RAMANA SETTY** Residing at 589/A 1st Block, 3rd Stage, 3rd Cross, Basaveshwara Nagar, Bengaluru-560079 have changed my name to **PRAKASH KIKKERI VENKATARA-MANA SETTY** vide affidavit dated 27/09/2022, before notary L. Gopalakrishna, Bengaluru. Henceforth I shall be called **PRAKASH KIKKERI VENKATARAMANA SETTY** only.

I,_MAHITA NAGARAJ, Ganapathy Apartments Lakshmi_Road, Shanthinagar, Bengaluru-560027. have_renounced my_marital`name of`Mahita Fernandez, and_shall henceforth be known as`MAHITA NAGARAJ`only vide affidavit dated`27th October 2017.Sworn to before M.Rajendra, Notary, Bengaluru

I, SUDHA GIRISH, residing at Bengaluru-61 have changed my name as SUDHA JAGANNATH vide affidavit dated 27/9/2022 before-Notary P.C.Ramaiah, Bengaluru

I, ADI HEMANTH KUMAR S/o Late Masti Gowda R/a No. 8/1 Masthi Nilaya 2nd Main 4th Cross K.N. Extension, Yeshwanthpura, Bengaluru North, Po: Yeshwanthpura, Bengaluru- 560022, I have changed my Name to Hemanthakumar M vide affidavit Dated 21.09.2022 before VI Addl, Chief Metropolitan Magistrate, Bangalore.

I, MAHESHWARI Tejas W/O Sri Tejas Jayaraman, R/At 7035, Prestige Garden Bay, IVRI Road, Near CRPF, Avalahalli, Yelahanka, Bangalore 560064 have changed my Name to Maheshwari Raman Tejas Vide Affidavit dated 27.09.2022 Sworn Before Notary G.B. Turamari.

I, JYOTI BILGOJI R/o, #203, Siri Habitat, Pearl Garden Layout, Vajarahalli, Bengaluru-62 have changed my name as JYOTI NAGAPPA BILGOJI vide affidavit dated 17/09/2022 before Notary Jayappa. A, Bangalore

I, VIDYA Y M residing at Vinaya, 1283, 8th Cross, 1st Phase, J.P.Nagara, Bangalore-560078 have changed my name to VIDYA AITHAL vide affidavit dated 27.09.2022 sworn before notary H.S.Dharma Prasad, Bangalore.

I, YATHEESWARAIAH S, residing at Sankalapura, Yadavanahalli post, Arasikere, Hassan-573103, have changed my name as YATHISWARAIAH S, vide affidavit dated 27/9/2022 before Notary P.C.Ramaiah, Bangalore

WE, FRANCIS Joseph and Simi Anna Sabu R/a#004, GF, Divya Panchami, 4th Main Thayappa Garden, Bilekahalli, Bangalore-560076 declare that in the Birth Certificate our Minor Son's name is mentioned as ZACHARY ANNA FRANCIS instead of ZACHARY SIMI FRANCIS (DOB 15-09-2018) Henceforth Known as ZACHARY SIMI FRANCIS Only vide Affidavit Dated 23-03-2022 Before Notary Mahesha.J.J Bengaluru

I, RADHIKA N, D/o Narendran Sambamurti Aged 50 Residing at No. 404 Adarsh Manor, Shankar Mutt Road, 3rd Cross, Basavanagudi South, Bengaluru Karnataka-560004, Have Changed My Name to RADHIKA SAMBAMURTI vide Affidavit Dated: 15-09-2022 Sworn Before Notary P. Vijayakumar Bangalore-560011

I, T.R. NALINI W/o T.N.S. Raghavan Aged 58 Residing at No.317, 59th Cross, 3rd Block, Rajajinagar, Bangalore North, Bangalore Karnataka-560010 Have Changed My Name to NALINI RAGHAVAN vide Affidavit Dated: 15-09-2022 Sworn Before Notary P. Vijayakumar Bangalore- 560011

I, NAVEED PASHA S/o Mohammed Althaf R/o 6th Cross, Melekote Road, Behind Dana Palace, DanaNagar, Tumkur- 572101 Have Changed My Name to MOHAMMED NAVEED vide Affidavit Dated 26-09-2022 Before Notary M. ShafiqAhamed, Tumkur.

Lost

LOST
Publication is directed by District Consumer Dispute Redressal Commission in CC 24/2019. The original Reg. Sale Deed dated: 07.08.1997, belonging to Smt. Saroja P. Rao was lost while in the custody of the Branch.
Sd/- Branch Manager
Bank of Baroda, Magadi Branch

PROPERTY CORNER

anantya
FOR SALE
ANANTYA VILLAMENT
SARJAPUR-ATTIBELE ROAD
Spacious 4 BHK Villament, SBA 5040 Sqft with UDS of 2300 Sqft. Designed by award winning Architects. Next to Indus International School and in the close proximity world class Azim Premji University.
Serious Buyers / Brokers Welcome
88678 97716

DH ಪ್ರಜಾವಾಣಿ
BOOK YOUR CLASSIFIEDS ADVERTISEMENT
DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150
CD Per Sqcm	Single Col	Double Col	Multi Col	
	535	500	515	

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*
For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in   www.dhclassifieds.com

ಸಾಫ್ಟ್‌ವೇರ್ ಕಂಪನಿ ವ್ಯವಸ್ಥಾಪಕರ ಪುತ್ರನ ಅಪಹರಣ

₹ 15 ಲಕ್ಷ ಸುಲಿಗೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಕಂಪನಿ ವ್ಯವಸ್ಥಾಪಕರ 14 ವರ್ಷದ ಪುತ್ರನನ್ನು ಅಪಹರಿಸಿ ₹ 15 ಲಕ್ಷ ಸುಲಿಗೆ ಮಾಡಿದ್ದ ಇಬ್ಬರು ಅಪಹರಣಕಾರರನ್ನು ಸಂಪಿಗೆಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆ ಗುಡಿಬಂಡೆಯ ಸುನಿಲ್‌ಕುಮಾರ್ (23) ಹಾಗೂ ಮಂಡಿಕಲ್‌ನ ವೈ.ವಿ.ನಾಗೇಶ ಬಂಧಿತರು.


ನಾಗೇಶ್


ಸುನಿಲ್

‘ಸೆ.2ರಂದು ಮಾನ್ಯತಾ ಟೆಕ್‌ಪಾರ್ಕ್‌ನ ಮಾನ್ಯತಾ ರೆಸಿಡೆನ್ಸಿಯಲ್ಲಿ ನೆಲೆಸಿದ್ದ ಎಂ.ಡಿ ಒಬ್ಬರ ಪುತ್ರನನ್ನು ಸಿನಿಮೀಯ ಶೈಲಿಯಲ್ಲಿ ಅಪಹರಣ ಮಾಡಲಾಗಿತ್ತು. ಮನೆಯವರನ್ನು ಬೆದರಿಸಿ, ಎಂ.ಡಿ ಅವರು ಎದುರು ನಿಲುಗಡೆ ಮಾಡಿದ್ದ ಕಾರಿನ ಕೀಯನ್ನೇ ತೆಗೆದುಕೊಂಡು, ಆ ಕಾರಿನಲ್ಲೇ ಬಾಲಕನನ್ನು ಅಪಹರಿಸಿದ್ದರು. ತುಮಕೂರು ರಸ್ತೆಯ ದಾಬಸ್‌ಪೇಟೆಯಿಂದ ಕರೆ ಮಾಡಿ, ₹ 15 ಲಕ್ಷಕ್ಕೆ ಬೇಡಿಕೆಯಿಟ್ಟಿದ್ದರು. ಹಣ ಕೊಡದಿದ್ದರೆ ಮಗನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಗಳು ತಾವಿದ್ದ ಸ್ಥಳವಾದ ದಾಬಸ್‌ಪೇಟೆಗೆ ಕರೆಸಿಕೊಂಡು, ₹ 15 ಲಕ್ಷ ಸುಲಿಗೆ ಮಾಡಿದ್ದರು. ಬಾಲಕನನ್ನು ಪೋಷಕರಿಗೆ ಹಸ್ತಾಂತರಿಸಿ, ಪರಾರಿಯಾಗಿದ್ದರು.

ಅಪರಾಧ ಸುದ್ದಿ

‘ಆರೋಪಿಗಳ ಪತ್ತೆಗೆ ಈಶಾನ್ಯ ವಿಭಾಗದ ಡಿಸಿಪಿ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಸಿಸಿಟಿವಿ ದೃಶ್ಯ ಹಾಗೂ ಮೊಬೈಲ್ ಕರೆಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು. ಸುಲಿಗೆ ಮಾಡಿದ್ದ ಹಣದಲ್ಲಿ ಆರೋಪಿಗಳು ಒಂದೂವರೆ ಲಕ್ಷದ ಕೆಟಿಎಂ ಬೈಕ್, ಕೆನಾನ್ ಡಿಜಿಟಲ್ ಕ್ಯಾಮೆರಾ ಖರೀದಿಸಿದ್ದರು. ಬಂಧಿತರಿಂದ ಪ್ಯಾಷನ್ ಪ್ರೊ ಬೈಕ್, ₹ 9 ಲಕ್ಷ ನಗದು ಹಾಗೂ ಬಾಲಕನ ಅಪಹರಣಕ್ಕೆ ಬಳಸಿದ್ದ ಕ್ರೆಟಾ ಕಾರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ಹೇಳಿವೆ.

ಕೆಲಸಕ್ಕಿದ್ದ ಮನೆಯಲ್ಲಿ ಕಳ್ಳತನ: ಮಹಿಳೆ ಸೆರೆ

ಬೆಂಗಳೂರು: ಅನ್ನಪೂರ್ಣೇಶ್ವರಿ ನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಉಮಾದೇವಿ (43) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

‘ಶಿವಮೊಗ್ಗ ವೆಂಕಟೇಶನಗರದ ಉಮಾದೇವಿ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ವೃದ್ಧರೊಬ್ಬರ ಆರೈಕೆ ಮಾಡುವ ಕೆಲಸಕ್ಕೆ ಸೇರಿದ್ದರು. ಇವರಿಂದ ₹ 5 ಲಕ್ಷ ನಗದು, 230 ಗ್ರಾಂ ಚಿನ್ನಾಭರಣ ಹಾಗೂ 750 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಅಪರ್ಣಾ ಎಂಬುವರು, ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದ ತಮ್ಮ ತಂದೆಯವರ ಆರೈಕೆಗೆಂದು ಉಮಾದೇವಿ ಅವರನ್ನು ನೇಮಿಸಿಕೊಂಡಿದ್ದರು. ಚೆನ್ನಾಗಿ ಕೆಲಸ ಮಾಡುತ್ತಿದ್ದ ಉಮಾದೇವಿ, ಮನೆಯವರ ವಿಶ್ವಾಸ ಗಳಿಸಿದ್ದರು. ಸೆ. 21ರಂದು ನಗದು ಹಾಗೂ ಆಭರಣ ಕದ್ದುಕೊಂಡು ಪರಾರಿಯಾಗಿದ್ದರು’ ಎಂದೂ ತಿಳಿಸಿದರು.

ಬಿಬಿಎಂಪಿ ಎದುರು ಶವವಿಟ್ಟು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ರುಕ್ಮಿಣಿನಗರ ಮುಖ್ಯರಸ್ತೆಯಲ್ಲಿ ತೆರೆದ ರಾಜಕಾಲುವೆಗೆ ಜಾರಿ ಬಿದ್ದು ಮೃತಪಟ್ಟಿದ್ದ ವೆಂಕಟೇಶ್ ಅವರ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ನೇತೃತ್ವದಲ್ಲಿ ದಾಸರಹಳ್ಳಿ ವಲಯ ಬಿಬಿಎಂಪಿ ಕಚೇರಿ ಎದುರು ಮೃತದೇಹ ಇಟ್ಟು ಪ್ರತಿಭಟನೆ ನಡೆಸಲಾಯಿತು.


ಬಿಬಿಎಂಪಿ ವಲಯ ಕಚೇರಿ ಎದುರು ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಕಬ್ಬಾಳು ಗ್ರಾಮದ ವೆಂಕಟೇಶ್ ಅವರ ಸಾವಿಗೆ ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ ಎಂದು ಆಪಾದಿಸಿದರು.

ಮೂರು ತಿಂಗಳ ಹಿಂದೆ ರಾಜಕಾಲುವೆ ಹೂಳು ತೆಗೆಯುವ ವೇಳೆ ಚಪ್ಪಡಿ ತೆಗೆಯಲಾಗಿತ್ತು. ಆದರೆ, ನಂತರ ಕಾಮಗಾರಿ ಮುಗಿದ ಮೇಲೆ ಚಪ್ಪಡಿ ಹಾಕದೇ ಬಿಬಿಎಂಪಿ ನಿರ್ಲಕ್ಷ್ಯ ವಹಿಸಿದ್ದರಿಂದ ಈ ಅವಘಡ ಸಂಭವಿಸಿದೆ ಎಂದು ಪ್ರತಿಭಟಿಸಿದರು.


ಬಿಬಿಎಂಪಿ ಅಧಿಕಾರಿಗಳಾಗಲಿ, ಸ್ಥಳೀಯ ಶಾಸಕರಾಗಲಿ ವಿಷಯ ತಿಳಿಸಿದ್ದರೂ ಸ್ಥಳಕ್ಕೆ ಬಾರದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಬಿಬಿಎಂಪಿ ಮೂಲಕ ಪರಿಹಾರ ನೀಡಬೇಕು ಎಂದು ಎಎಪಿ ಮುಖಂಡರು ಆಗ್ರಹಿಸಿದರು.

ಸುಮಾರು 2 ಗಂಟೆಯ ನಂತರ ಸ್ಥಳಕ್ಕೆ ಬಂದ ಪಾಲಿಕೆ ಅಧಿಕಾರಿಯೊಬ್ಬರು ಪ್ರತಿಭಟನಕಾರರ ಮನವೊಲಿಸಿ ₹ 10 ಸಾವಿರ ನೀಡಿ, ಮುಂದೆ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಇದಕ್ಕೆ ಒಪ್ಪಿದ ಪ್ರತಿಭಟನಕಾರರು ಪರಿಹಾರ ನೀಡದಿದ್ದರೆ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜೆಡಿಎಸ್: ಗಂಗಾಧರಮೂರ್ತಿ, ರಮೇಶ ಗೌಡ ನೇಮಕ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಎಲ್. ಗಂಗಾಧರಮೂರ್ತಿ ಅವರನ್ನು ನೇಮಕ ಮಾಡಲಾಗಿದೆ.


ಗಂಗಾಧರ ಮೂರ್ತಿ


ಎಚ್‌.ಎಂ. ರಮೇಶಗೌಡ

ವಿಧಾನ ಪರಿಷತ್ತಿನ ಮಾಜಿ ಸದಸ್ಯ ಎಚ್. ಎಂ. ರಮೇಶಗೌಡ ಅವರನ್ನು ರಾಜ್ಯ ವಕ್ತಾರರಾಗಿ ನೇಮಕ ಮಾಡಲಾಗಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಈ ಆದೇಶ ಹೊರಡಿಸಿದ್ದಾರೆ.

₹ 7.80 ಕೋಟಿ ಮೌಲ್ಯದ ಡ್ರಗ್ಸ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಸಿಂತಪಲ್ಲಿ ಹಾಗೂ ಅರಕ್ಕು ಎಂಬ ಅರಣ್ಯ ಪ್ರದೇಶದಿಂದ ಮಾದಕ ವಸ್ತುಗಳನ್ನು ತಂದು ನಗರದಲ್ಲಿ ಮಾರುತ್ತಿದ್ದ ವಿದೇಶಿ ಡ್ರಗ್ಸ್ ಪೆಡ್ಲರ್ ಸೇರಿ ಐವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.


ವಿದೇಶಿ ಪ್ರಜೆ


ದೇವಿ


ಪುಷ್ಪಾ


ಪೂರ್ಣಿಮಾ

ಪುಷ್ಪಾ, ವಿಜಯಾ, ದೇವಿ ಹಾಗೂ ಪೂರ್ಣಿಮಾ ಬಂಧಿತರು. ಇವರಿಂದ ಡ್ರಗ್ಸ್ ಖರೀದಿಸುತ್ತಿದ್ದ ವಿದೇಶಿ ಪ್ರಜೆಯನ್ನು ಬಂಧಿಸಲಾಗಿದೆ.

8 ಕೆ.ಜಿ. ಹ್ಯಾಶಿಶ್ ಆಯಿಲ್, 10 ಕೆ.ಜಿ. ಗಾಂಜಾ ಹಾಗೂ 1 ಕೆ.ಜಿ. 4 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಜಪ್ತಿ ಮಾಡಲಾಗಿದೆ. ಜಪ್ತಿ ಮಾಡಿರುವ ಮಾದಕ ವಸ್ತುಗಳ ಮೌಲ್ಯ ₹ 7.80 ಕೋಟಿ ಆಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಶಾಂತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಬಂದು ಬೆಂಗಳೂರಿನ ಆಟೊ ನಿಲ್ದಾಣವೊಂದರಲ್ಲಿ ವಿದೇಶಿ ಪ್ರಜೆಗೆ ಡ್ರಗ್ಸ್ ಪೂರೈಸುತ್ತಿದ್ದರು ಎಂದು ಮೂಲಗಳು ಹೇಳಿವೆ.

ಪ್ರಕರಣದ ಪ್ರಮುಖ ರೂವಾರಿ ಆಂಧ್ರಪ್ರದೇಶದ ವ್ಯಕ್ತಿಯಾಗಿದ್ದಾನೆ. ಆತನ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಅರಕ್ಕು ಹಾಗೂ ಸಿಂತಪಲ್ಲಿ ಎಂಬಲ್ಲಿ ಅಡಗಿಕೊಂಡು ಹ್ಯಾಶಿಶ್ ಆಯಿಲ್ ಅನ್ನು ತಯಾರಿಸಿ ಬೆಂಗಳೂರು, ಹೈದರಾಬಾದ್, ಕೊಚ್ಚಿನ್, ಚೆನ್ನೈ ಹಾಗೂ ಮುಂಬೈ ಸೇರಿ ವಿವಿಧ ಮಹಾನಗರಗಳಿಗೆ ಪೂರೈಸುತ್ತಿದ್ದಾನೆ ಎಂದು ಮೂಲಗಳು ಹೇಳಿವೆ.


ಸೇಂಟ್ ಜೋಸೆಫ್ ಕಾನೂನು ಕಾಲೇಜಿನಲ್ಲಿ ನಡೆದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ವಿಜೇತರಾದ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜಿನ ವಿದ್ಯಾರ್ಥಿಗಳಾದ ಫೈಯ್ಸನ್ ಅಹಮದ್, ಎಸ್‌.ಪಿ.ಪವನ್‌ಗೌಡ, ಎಂ.ಪಿ.ಶಿವಪ್ರಕಾಶ್ ಅವರಿಗೆ ಟ್ರೋಫಿ, ₹ 50 ಸಾವಿರ ನಗದು ವಿತರಿಸಲಾಯಿತು. ಕುಲಪತಿಗಳಾದ ಪ್ರೊ.ಎಸ್‌.ಎಂ.ಜಯಕರ, ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ.ಸುರೇಶ್ ವಿ. ನಾಡಗೌಡ, ಪ್ರೊ.ವಿ. ಸುದೇಶ್, ಪ್ರೊ.ಎನ್‌.ದಶರಥ್, ಡಾ.ಎನ್‌. ಸತೀಶ್ ಗೌಡ ಇದ್ದಾರೆ

‘ಸಿಎಂ ಜತೆ ಚರ್ಚಿಸಿ ಸಾಹಿತ್ಯ ಸಮ್ಮೇಳನ ದಿನಾಂಕ ನಿಗದಿ’

ಹಾವೇರಿ: ‘ಕನ್ನಡ ಸಾಹಿತ್ಯ ಸಮ್ಮೇಳನದ ದಿನಾಂಕ ಘೋಷಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವರು, ಸಾಹಿತ್ಯ ಪರಿಷತ್ ಅಧ್ಯಕ್ಷರು, ಕೃಷಿ ಸಚಿವರು ಮುಂದಿನ ವಾರ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ನಿರ್ಣಯ ಕೈಗೊಳ್ಳುತ್ತೇವೆ’ ಎಂದು ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ಹೇಳಿದರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ಸಾಹಿತ್ಯ ಸಮ್ಮೇಳನವನ್ನು ಮುಂದೂಡುವ ಯೋಚನೆ ಮಾಡಿಲ್ಲ. ಇದ್ದ ಸಮಯದಲ್ಲಿ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವೇ ಎನ್ನುವ ಚರ್ಚೆ ಆಗಬೇಕಿದೆ. ಸಮ್ಮೇಳನಕ್ಕೆ ಚ್ಯುತಿ ಆಗದಂತೆ ಮಾಡುವುದು ಮೊದಲ ಆದ್ಯತೆ, ಸಮ್ಮೇಳನಕ್ಕೆ ವಸತಿ ಸಮಸ್ಯೆ ದೊಡ್ಡದಿದೆ. ಹತ್ತು ದಿನ ಮುಂದಕ್ಕೆ ಹೋದರೆ ದೊಡ್ಡ ಮಾತಲ್ಲ, ಅತಿವೃಷ್ಟಿಯಿಂದಾಗಿ ಸಭೆ ನಿಗದಿ ಮಾಡಲು ಆಗಿಲ್ಲ’ ಎಂದರು.

ನರಸಿಂಹಮೂರ್ತಿಗೆ ಅಮೆರಿಕ ಸಂಸ್ಥೆಯ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಶೋಧಕ ಡಾ. ನರಸಿಂಹಮೂರ್ತಿ ಅವರು ಈ ವರ್ಷದ ‘ಫಾರ್ಮಸಿಟಿಕಲ್ ಗ್ಲೋಬಲ್ ಹೆಲ್ತ್ ಅವಾರ್ಡ್’ಗೆ ಭಾಜನರಾಗಿದ್ದಾರೆ.

ನಗರದಲ್ಲಿ ನೆಲೆಸಿರುವ ಅವರು ಅಮೆರಿಕದಲ್ಲಿ ಚರ್ಮದ ಆರೋಗ್ಯಕ್ಕೆ ಸಂಬಂಧಿಸಿ ಔಷಧ ಸಂಶೋಧನೆಗೆ ಸಂಬಂಧಿಸಿದ ಸೇವೆ ಒದಗಿಸುವ ಕಂಪನಿಯನ್ನು ಮುನ್ನಡೆಸುತ್ತಿದ್ದಾರೆ. ಅಮೆರಿಕದ ಔಷಧ ವಿಜ್ಞಾನಿಗಳ ಸಂಸ್ಥೆ ಈ ಪುರಸ್ಕಾರ ಘೋಷಿಸಿದೆ.



ನರಸಿಂಹಮೂರ್ತಿ ಅವರದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ. ನಗರದ ಎಂ.ಎಸ್. ರಾಮಯ್ಯ ಲೇಔಟ್‌ನಲ್ಲಿ ನೆಲೆಸಿದ್ದಾರೆ.

‘ದಿವಂಗತ ಅಬ್ದುಲ್ ಕಲಾಂ ಅವರೇ ನನಗೆ ದೊಡ್ಡ ಸ್ಫೂರ್ತಿ. ಔಷಧ ಸಂಶೋಧನೆಯ ಬಗ್ಗೆ ಆಸಕ್ತಿ ಇರುವವರು, ಔಷಧ ವಿಜ್ಞಾನಿ ಆಗಬೇಕು ಎಂಬ ಕನಸು ಹೊತ್ತವರು ನನ್ನನ್ನು ಸಂಪರ್ಕಿಸಿದರೆ ಮಾರ್ಗದರ್ಶನ ನೀಡುತ್ತೇನೆ’ ಎಂದು ಪ್ರತಿಕ್ರಿಯಿಸಿದರು.

ಸಿಸಿಬಿ ಹೆಸರಿನಲ್ಲಿ ಹಣ ವಸೂಲಿ: ಫೈರ್‌ಮನ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಸಿಬಿ ಅಧಿಕಾರಿಗಳ ಹೆಸರಿನಲ್ಲಿ ಜನರನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ ಆರೋಪದಡಿ ಫೈರ್‌ಮನ್ ಆನಂದ್ (34) ಅವರನ್ನು ಕೊಡಿಗೇಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತ ಆನಂದ್, ಅಥಣಿಯ ಅಗ್ನಿಶಾಮಕ ದಳದ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ. ಇವರ ವಿರುದ್ಧ ಸ್ಪಾ ಆ್ಯಂಡ್ ಸಲೂನ್ ಒಂದರ ಮಾಲೀಕ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆನಂದ್‌ನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಈ ಹಿಂದೆ ಪೀಣ್ಯ ಅಗ್ನಿಶಾಮಕ ದಳದಲ್ಲಿ ಕೆಲಸ ಮಾಡುತ್ತಿದ್ದ ಆನಂದ್, ಅಧಿಕಾರಿಗಳ ಹೆಸರಿನಲ್ಲಿ ಹಣ ಸುಲಿಗೆ ಮಾಡುತ್ತಿದ್ದ. ಇದೇ ಪ್ರಕರಣದಲ್ಲಿ ಈತನನ್ನು ಅಮಾನತು ಮಾಡಲಾಗಿತ್ತು. ನಿಗದಿತ ಕಾಲಾವಧಿ ಬಳಿಕ ಅಮಾನತು ಹಿಂಪಡೆದು, ಅಥಣಿ ಠಾಣೆಗೆ ನಿಯೋಜಿಸಲಾಗಿತ್ತು. ಆಗಾಗ ಬೆಂಗಳೂರಿಗೆ ಬರುತ್ತಿದ್ದ ಆರೋಪಿ, ಜನರನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ’ ಎಂದೂ ತಿಳಿಸಿದರು.


ಆನಂದ್

₹ 20 ಸಾವಿರ ವಸೂಲಿ: ‘ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯ ಸ್ಪಾ ಆ್ಯಂಡ್ ಸಲೂನ್‌ಗೆ ಇತ್ತೀಚೆಗೆ ಹೋಗಿದ್ದ ಆರೋಪಿ ಆನಂದ್, ಸಿಸಿಬಿ ಅಧಿಕಾರಿಗಳ ಆಪ್ತನೆಂದು ಹೇಳಿಕೊಂಡಿದ್ದ. ಮಳಿಗೆ ಮೇಲೆ ದಾಳಿ ಮಾಡಿಸುವುದಾಗಿ ಬೆದರಿಸಿ ₹ 20 ಸಾವಿರ ವಸೂಲಿ ಮಾಡಿದ್ದ. ಪ್ರತಿ ತಿಂಗಳು ಹಣ ನೀಡುವಂತೆ ಎಚ್ಚರಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಹಣ ನೀಡಿದ್ದ ಸ್ಪಾ ಆ್ಯಂಡ್ ಸಲೂನ್ ಮಾಲೀಕರು, ಆರೋಪಿ ಬಗ್ಗೆ ಪೊಲೀಸರ ಬಳಿ ವಿಚಾರಿಸಿದ್ದರು. ಆನಂದ್ ಎಂಬುವವರು ಸಿಸಿಬಿಯಲ್ಲಿ ಇಲ್ಲವೆಂಬುದು ಗೊತ್ತಾಗಿತ್ತು. ಅವಾಗಲೇ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಸಮೇತ ಠಾಣೆಗೆ ದೂರು ನೀಡಿದ್ದರು’ ಎಂದೂ ವಿವರಿಸಿದರು.

ಪೊಲೀಸರ ಹಲ್ಲೆಯಿಂದ ಮಗ ಸಾವು: ತಾಯಿ ಆರೋಪ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ಸೊಂಡೆಕೊಪ್ಪ ಗ್ರಾಮದ ನಿವಾಸಿ ಬಲರಾಮ್ (35) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಪೊಲೀಸರು ಹಲ್ಲೆ ನಡೆಸಿದ್ದ ಆರೋಪ ಕೇಳಿಬಂದಿದೆ.


ಬಲರಾಮ್

‘ಮಾದನಾಯಕನಹಳ್ಳಿ ಠಾಣೆಯ ಎಎಸ್‌ಐ ವಿಜಯ ಕುಮಾರ್ ಹಾಗೂ ಕಾನ್‌ಸ್ಟೆಬಲ್ ಜನಾರ್ದನ್ ಅವರು ಮಗ ಬಲರಾಮ್‌ನ ಮರ್ಮಾಂಗಕ್ಕೆ ಲಾಠಿಯಿಂದ ಹೊಡೆದಿದ್ದಾರೆ. ಇದರಿಂದ ತೀವ್ರ ಗಾಯಗೊಂಡು ಮಗ ಮೃತಪಟ್ಟಿದ್ದಾನೆ. ಮಗನ ಸಾವಿಗೆ ಪೊಲೀಸರೇ ಕಾರಣ’ ಎಂದು ತಾಯಿ ಸುಧಾ ಆರೋಪಿಸಿದ್ದಾರೆ.

‘ಮಗ ಬಲರಾಮ್ ಸೆ. 19ರಂದು ಸೊಂಡೆಗೊಪ್ಪ ಗ್ರಾಮದ ದೇವಸ್ಥಾನಕ್ಕೆ ಹೋಗಿ, ಅಲ್ಲಿಂದ ಮನೆಗೆ ವಾಪಸು ಬರುತ್ತಿದ್ದ. ಮಾರ್ಗಮಧ್ಯೆ ಬಾರ್‌ವೊಂದರ ಮುಂದೆ ಗಲಾಟೆ ನಡೆಯುತ್ತಿತ್ತು. ಸ್ಥಳದಲ್ಲಿ ಪೊಲೀಸರು ಲಾಠಿ ಬೀಸಿದ್ದರು. ತನ್ನ ಪಾಡಿಗೆ ರಸ್ತೆಯಲ್ಲಿ ಹೊರಟಿದ್ದ ಬಲರಾಮ್‌ಗೂ ಲಾಠಿಯಿಂದ ಥಳಿಸಿದ್ದರು. ಮರ್ಮಾಂಗಕ್ಕೂ ಹೊಡೆದಿದ್ದರು.’

‘ಸ್ಥಳದಲ್ಲೇ ಕುಸಿದು ಬಿದ್ದಿದ್ದ ಬಲರಾಮ್‌ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಸೆ. 24ರಂದು ತೀರಿಕೊಂಡ’ ಎಂದು ಹೇಳಿದ್ದಾರೆ.

‘ಮರ್ಮಾಂಗಕ್ಕೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಬಲರಾಮ್ ಮೃತಪಟ್ಟಿರುವುದಾಗಿ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ. ಹೀಗಾಗಿ, ಪೊಲೀಸರ ಮೇಲೆಯೇ ಅನುಮಾನವಿದೆ. ಮಗನ ಸಾವಿಗೆ ಕಾರಣವಾದ ಪೊಲೀಸರನ್ನು ಬಂಧಿಸಿ, ನ್ಯಾಯ ಒದಗಿಸಬೇಕು’ ಎಂದೂ ತಾಯಿ ಆಗ್ರಹಿಸಿದ್ದಾರೆ. ಈ ಬಗ್ಗೆ ಪೊಲೀಸರಿಗೂ ದೂರು ನೀಡಿದ್ದು, ಪ್ರಕರಣ ಮಾತ್ರ ದಾಖಲಾಗಿಲ್ಲ.

ಕಲ್ಲುಗಳನ್ನು ಬಳಸಿ ನಿರ್ಮಿಸಿರುವ ಸೇತುವೆ, ಅಕ್ಟೋಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣ

ಕಬ್ಬನ್ ಉದ್ಯಾನದಲ್ಲಿ ಜಾಗಿಂಗ್ ಪಥ

• ಖಲೀಲಅಹ್ಮದ ಶೇಖ



ಉದ್ಯಾನದಲ್ಲಿ ನಿರ್ಮಿಸಿರುವ ಸೇತುವೆ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಬೆಂಗಳೂರು: ಪ್ರೇಮಿಗಳ ನೆಚ್ಚಿನ ತಾಣ, ವಾಯುವಿಹಾರಿಗಳ ಸ್ವರ್ಗ ಕಬ್ಬನ್ ಉದ್ಯಾನದಲ್ಲಿ ನೂತನ ಜಾಗಿಂಗ್ ಪಥ, ಸೈಕಲ್ ಟ್ರ್ಯಾಕ್, 'ಕಮಲದ ಕೊಳ'ದ ನವೀಕರಣ ಕಾಮಗಾರಿ ಭರದಿಂದ ಸಾಗಿದೆ. ಅಕ್ಟೋಬರ್ ಅಂತ್ಯದೊಳಗೆ ಉದ್ಯಾನ ಹೊಸ ರೂಪ ತಾಳಲಿದೆ.

'ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ₹24 ಕೋಟಿ ಅನುದಾನದಲ್ಲಿ ಕಬ್ಬನ್ ಉದ್ಯಾನದ ವಿವಿಧ ನವೀಕರಣ ಕಾಮಗಾರಿಗಳು ಅಂತಿಮ ಹಂತ ತಲುಪಿವೆ. ಉದ್ಯಾನದ ಒಳಗಡೆ ಇರುವ 8 ಕಿ.ಮೀ. ಪಾದಚಾರಿ ಮಾರ್ಗದ ದುರಸ್ತಿ ಕಾರ್ಯ ನಡೆಯುತ್ತಿದೆ. ಹೊಸಕೋಟೆ ಗ್ರಾವೆಲ್ ಬಳಸಿ 4 ಕಿ.ಮೀ. ಜಾಗಿಂಗ್ ಪಾಥ್ ಮಾಡಲಾಗುತ್ತಿದೆ' ಎಂದು ತೋಟಗಾರಿಕೆ ಇಲಾಖೆಯ (ಕಬ್ಬನ್ ಉದ್ಯಾನ) ಉಪನಿರ್ದೇಶಕ ಎಚ್.ಟಿ. ಬಾಲಕೃಷ್ಣ ಮಾಹಿತಿ ನೀಡಿದರು.

ಸ್ಮಾರ್ಟ್‌ಸಿಟಿ ಯೋಜನೆ ಅಡಿಯಲ್ಲಿ ಎರಡು ಹಂತಗಳಲ್ಲಿ ಕಾಮಗಾರಿ ಕೈಗೊಳ್ಳಲಾಗಿತ್ತು. 2022ರ ಮಾರ್ಚ್‌ನಲ್ಲಿ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಆದರೆ ಕಾರಣಾಂತರಗಳಿಂದ ಅದು ಸಾಧ್ಯವಾಗಿಲ್ಲ. ಅಕ್ಟೋಬರ್ ಅಂತ್ಯದೊಳಗೆ ಕಬ್ಬನ್ ಉದ್ಯಾನ ಹೊಸ ರೂಪ ಪಡೆದುಕೊಳ್ಳಲಿದೆ. ತಾವರೆ ಕೊಳ ಪುನರುಜ್ಜೀವನ, ಮಳೆ ನೀರು ಸಂಗ್ರಹಿಸಲು ಅಚ್ಚುಕಟ್ಟು ಪ್ರದೇಶದ ಮರು ಅಭಿವೃದ್ಧಿ, ಹೊಸ ಬೇಲಿಯನ್ನು ಇಲ್ಲಿಯೂ ಅಳವಡಿಸಲಾಗುತ್ತಿದೆ.

ಉದ್ಯಾನದಲ್ಲಿ ಕಾಂಕ್ರಿಟೀಕರಣಕ್ಕೆ ಅವಕಾಶವಿಲ್ಲ. ಆದ್ದರಿಂದ ಕಲ್ಲುಗಳನ್ನು ಬಳಸಿಕೊಂಡು ತಾವರೆ ಕೊಳ ಮತ್ತು ಸೇತುವೆಗಳನ್ನು ಆಕರ್ಷಕವಾಗಿ ನಿರ್ಮಿಸಲಾಗಿದೆ.

ಎಚ್.ಟಿ. ಬಾಲಕೃಷ್ಣ, ತೋಟಗಾರಿಕೆ ಇಲಾಖೆಯ (ಕಬ್ಬನ್ ಉದ್ಯಾನ) ಉಪನಿರ್ದೇಶಕ

ಉದ್ಯಾನದಲ್ಲಿರುವ ನಾಲ್ಕು ಕಾರಂಜಿಗಳಿಗೆ ಜೀವ ತುಂಬಲಾಗುತ್ತಿದೆ. ಹೊಸದಾಗಿ 300 ಬೆಂಚ್‌ಗಳನ್ನು ಅಳವಡಿಸಲಾಗುತ್ತಿದ್ದು, ಈಗಾಗಲೇ 200 ಬೆಂಚ್‌ಗಳನ್ನು ಅಳವಡಿಸಲಾಗಿದೆ. 200 ವಿವಿಧ ಆಲಂಕಾರಿಕ ಕಸದ ಬುಟ್ಟಿಗಳನ್ನು ಅಳವಡಿಸಲಾಗುವುದು. ಉದ್ಯಾನದ ಬಂಡೆ ಭಾಗದಲ್ಲಿ 18 ಎಕರೆ ಪ್ರದೇಶದಲ್ಲಿ ನೂತನವಾಗಿ ಹುಲ್ಲುಹಾಸನ್ನು ಬೆಳೆಸಲಾಗಿದೆ. ಉದ್ಯಾನದಲ್ಲಿ ಈಗಾಗಲೇ ಶೇಕಡ 65 ಭಾಗ ನೀರಾವರಿ ಮತ್ತು ಪೈಪ್‌ಲೈನ್ ಅಳವಡಿಸಲಾಗಿತ್ತು. ಈ ಯೋಜನೆ ಅಡಿಯಲ್ಲಿ ಶೇಕಡ 35ರಷ್ಟು ಪ್ರದೇಶದಲ್ಲಿ ಪೈಪ್‌ಲೈನ್ ಅಳಡಿಸಲಾಗಿದೆ. ಕರಗದ ಕುಂಟೆ ಪುನಶ್ಚೇತನಗೊಳಿಸಲಾಗಿದೆ ಎಂದು ತಿಳಿಸಿದರು.


'ಉದ್ಯಾನದಲ್ಲಿ ಅಕ್ರಮ ಕ್ಯಾಂಟೀನ್'

ಕಬ್ಬನ್ ಉದ್ಯಾನದಲ್ಲಿ ನಾನ್ ಗೆಜೆಟೆಡ್ ಆಫೀಸರ್ಸ್ ಅಸೋಸಿಯೇಷನ್ಸ್ (ಎನ್‌ಜಿಒಎಸ್) ಕಟ್ಟಡದಲ್ಲಿ ಅಕ್ರಮವಾಗಿ ಕ್ಯಾಂಟೀನ್ ನಿರ್ಮಿಸಲಾಗುತ್ತಿದೆ. ಇದಕ್ಕೆ ಇಲಾಖೆಯ ಕೆಳ ಹಂತದ ಅಧಿಕಾರಿಗಳು ಸಹಕಾರ ನೀಡುತ್ತಿದ್ದಾರೆ ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ ಆರೋಪಿಸಿದರು.

ಉದ್ಯಾನದಲ್ಲಿ ಜಾಗಿಂಗ್ ಪಾಥ್, ಪಾದಚಾರಿ ಮಾರ್ಗ ದುರಸ್ತಿಗೊಳಿಸಲಿ. ಇದರಿಂದ ನಡಿಗೆದಾರರಿಗೆ ಯಾವುದೇ ರೀತಿಯ ತೊಂದರೆ ಇಲ್ಲ. ಆದರೆ ಸೈಕ್ಲಿಂಗ್ ಟ್ರ್ಯಾಕ್ ಮಾಡುವುದು ವ್ಯರ್ಥ. ಮಾಡಿದರೂ ಅದಕ್ಕೆ ಕಠಿಣ ನಿಯಮಗಳನ್ನು ರೂಪಿಸಬೇಕು. ನೂತನವಾಗಿ ನಿರ್ಮಿಸಿರುವ ಹುಲ್ಲುಹಾಸಿನಲ್ಲಿ ಸೈಕ್ಲಿಂಗ್ ಮಾಡಿದರೆ ಉದ್ಯಾನದ ಸೌಂದರ್ಯಕ್ಕೆ ಧಕ್ಕೆಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮಾಸ್ತಿ ಪುರಸ್ಕಾರಕ್ಕೆ ಗಜಾನನ ಶರ್ಮ, ಮಲ್ಲಿಕಾರ್ಜುನ, ದಾದಾಪೀರ್ ಆಯ್ಕೆ

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಹಿರೇಮಠ



ಗಜಾನನ ಶರ್ಮ



ದಾದಾಪೀರ್ ಜೈಮನ್

ಬೆಂಗಳೂರು: 'ಮಾಸ್ತಿ ಟ್ರಸ್ಟ್' ನೀಡುವ 2022ನೇ ಸಾಲಿನ ಮಾಸ್ತಿ ಕಾದಂಬರಿ ಪುರಸ್ಕಾರಕ್ಕೆ ಬೆಂಗಳೂರಿನ ಡಾ. ಗಜಾನನ ಶರ್ಮ ಮತ್ತು ಧಾರವಾಡದ ಮಲ್ಲಿಕಾರ್ಜುನ ಹಿರೇಮಠ ಹಾಗೂ ಮಾಸ್ತಿ ಕಥಾ ಪುರಸ್ಕಾರಕ್ಕೆ ದಾದಾಪೀರ್ ಜೈಮನ್ ಆಯ್ಕೆಯಾಗಿದ್ದಾರೆ.

ಕನ್ನಡದ ಕತೆಗಾರ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 131ನೇ ವರ್ಷದ ಸಂಸ್ಮರಣೆ ಪ್ರಯುಕ್ತ ಟ್ರಸ್ಟ್, ಸ್ಪರ್ಧೆ ಆಯೋಜಿಸಿತ್ತು.

ಮಾಸ್ತಿ ಕಾದಂಬರಿ ಪುರಸ್ಕಾರಕ್ಕೆ ಆಯ್ಕೆಯಾದ ಡಾ. ಗಜಾನನ ಶರ್ಮ ಅವರ 'ಚೆನ್ನ ಭೈರಾದೇವಿ' ಕೃತಿಯನ್ನು ಅಂಕಿತ ಪುಸ್ತಕ ಪ್ರಕಾಶನವು ಪ್ರಕಟಿಸಿದೆ. ಮಲ್ಲಿಕಾರ್ಜುನ ಹಿರೇಮಠ ಅವರ 'ಹಾವಳಿ' ಕಾದಂಬರಿಯನ್ನು ಧಾರವಾಡದ ಮನೋಹರ ಗ್ರಂಥಮಾಲಾ ಪ್ರಕಟಿಸಿದೆ. ಆಯ್ಕೆ ಸಮಿತಿ ಮುಂದೆ ಒಟ್ಟು 25 ಕೃತಿಗಳು ಬಂದಿದ್ದವು.

ದಾದಾಪೀರ್ ಜೈಮನ್ ಅವರ 'ನೀಲ ಕುರಿಂಜಿ' ಕೃತಿಯನ್ನು ರಾಯಚೂರು ಜಿಲ್ಲೆಯ ಮಾನ್ವಿಯ ವೈಷ್ಣವಿ ಪ್ರಕಾಶನ ಪ್ರಕಟಿಸಿದೆ. ಕಥಾ ಪುರಸ್ಕಾರಕ್ಕೆ 40 ಕೃತಿಗಳು ಬಂದಿದ್ದವು.

ಲೇಖಕರಿಗೆ ತಲಾ ₹ 25 ಸಾವಿರ ಹಾಗೂ ಪ್ರಕಾಶಕರಿಗೆ ತಲಾ ₹ 10 ಸಾವಿರ ನಗದು ಬಹುಮಾನವನ್ನು ಪುರಸ್ಕಾರ ಒಳಗೊಂಡಿದೆ.

ಈಶ್ವರಚಂದ್ರ, ಡಾ.ಎಂ.ಎಸ್. ಆಶಾದೇವಿ, ವಿಜಯಶಂಕರ, ಎಚ್. ದಂಡಪ್ಪ, ಚ.ಹ. ರಘುನಾಥ, ಡಾ. ಚಿಂತಾಮಣಿ ಕೊಡ್ಲೆಕೆರೆ, ಮಾವಿನಕೆರೆ ರಂಗನಾಥನ್ ಅವರು ಸ್ಪರ್ಧೆಯ ತೀರ್ಪುಗಾರರಾಗಿದ್ದರು.

ಮಾಸ್ತಿ ಪುರಸ್ಕಾರ ಸಮಾರಂಭವನ್ನು ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ತಿಳಿಸಿದ್ದಾರೆ.

ಭಾಗ್ಯಜ್ಯೋತಿಗೆ 'ವಿಭಾ ಸಾಹಿತ್ಯ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ




ಹುಬ್ಬಳ್ಳಿ: ಕನ್ನಡದ ಕವಯತ್ರಿ ವಿಭಾ ಅವರ ನೆನಪಿನಲ್ಲಿ ನೀಡಲಾಗುವ 2022ನೇ ಸಾಲಿನ 'ವಿಭಾ ಸಾಹಿತ್ಯ ಪ್ರಶಸ್ತಿ'ಗೆ ಧಾರವಾಡ ಜಿಲ್ಲೆಯ ಗುಡಗೇರಿಯ ಭಾಗ್ಯಜ್ಯೋತಿ ಹಿರೇಮಠ ಅವರ 'ಬಿದಿರ ಬಿನ್ನಹ' ಕವನ ಸಂಕಲನ ಆಯ್ಕೆ ಆಗಿದೆ.

ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಫಲಕವನ್ನು ಒಳಗೊಂಡಿದೆ ಎಂದು 'ವಿಭಾ ಸಾಹಿತ್ಯ ಪ್ರಶಸ್ತಿ –2022'ರ ಸಂಚಾಲಕರಾದ ಸುನಂದಾ, ಪ್ರಕಾಶ ಕಡಮೆ ತಿಳಿಸಿದ್ದಾರೆ.

'ಸಮಕಾಲೀನ ವಿಚಾರಗಳ ಕಲಾತ್ಮಕ ಅಭಿವ್ಯಕ್ತಿ, ಬುದ್ಧ, ಗಾಂಧಿ, ಬಸವ, ಅಕ್ಕ ಇವರನ್ನು ನೇರವಾಗಿ ಹೆಸರಿಸದೆ ಅವರ ತಾತ್ವಿಕತೆಯನ್ನು ಮಾತ್ರ ಕಾವ್ಯವಾಗಿ ಕಟ್ಟುವ ಕಲೆಯನ್ನು ಮೈಗೂಡಿಸಿಕೊಂಡ ಬಗೆಗಾಗಿ 'ಬಿದಿರ ಬಿನ್ನಹ' ಆಯ್ಕೆ ಮಾಡಲಾಗಿದೆ' ಎಂದು ತೀರ್ಪುಗಾರರಾದ ಸ.ಉಷಾ ಮತ್ತು ಕೇಶವ ಮಳಗಿ ಹೇಳಿದ್ದಾರೆ.

ವೆಂಕಟೇಶಮೂರ್ತಿಗೆ 'ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ'



ಬೆಂಗಳೂರು: ಮೈಕೊ ಕನ್ನಡ ಬಳಗದ ವತಿಯಿಂದ ನೀಡಲಾಗುವ 'ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ'ಗೆ ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ₹1 ಲಕ್ಷ ನಗದು ಒಳಗೊಂಡಿದೆ. ಅಕ್ಟೋಬರ್ 2ರಂದು ಆನಂದ ರಾವ್ ವೃತ್ತದಲ್ಲಿರುವ ಜಗದ್ಗುರು ರೇಣುಕಾಚಾರ್ಯ ಕಾಲೇಜಿನ ಎಸ್.ಜೆ.ಆರ್.ಸಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶ ಮೂರ್ತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬಾಷ್ ವಾಣಿಜ್ಯ ಅಧಿಕಾರಿಗಳಾದ ಎಚ್.ಬಿ. ತೋಂಟೇಶ್, ಕಾರ್ಮಿಕ ಸಂಘದ ಅಧ್ಯಕ್ಷ ವಿ.ಜೆ.ಕೆ. ನಾಯರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಭಾರತೀಯ ಸ್ವಚ್ಛತಾ ಲೀಗ್: ಕಾರವಾರ ನಗರಸಭೆಗೆ ಪ್ರಶಸ್ತಿ

ಕಾರವಾರ: ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ 'ಸ್ವಚ್ಛ ಭಾರತ ಲೀಗ್' ವಿಶೇಷ ಪುರಸ್ಕಾರಕ್ಕೆ ಕಾರವಾರ ನಗರಸಭೆ ಪಾತ್ರವಾಗಿದೆ. 50 ಸಾವಿರದಿಂದ 1 ಲಕ್ಷ ಜನಸಂಖ್ಯೆಯ ನಗರಗಳ ವಿಭಾಗದಲ್ಲಿ ಪ್ರಶಸ್ತಿಗೆ ಆಯ್ಕೆಯಾಗಿದೆ.

'ಸ್ವಚ್ಛ ಭಾರತ ಅಭಿಯಾನ'ದ ಅಡಿಯಲ್ಲಿ ನಡೆದ ಈ ಸ್ಪರ್ಧೆಯಲ್ಲಿ, ದೇಶದ 1,850ಕ್ಕೂ ಅಧಿಕ ನಗರ ಮತ್ತು ಸ್ಥಳೀಯ ಸಂಸ್ಥೆಗಳು ಭಾಗವಹಿಸಿದ್ದವು. 'ತ್ಯಾಜ್ಯ ಮುಕ್ತ ನಗರ' ಪರಿಕಲ್ಪನೆಯನ್ನು ಸಾಕಾರಗೊಳಿಸಲು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುವ ನಗರಗಳನ್ನು ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

3 ಲಕ್ಷದಿಂದ 10 ಲಕ್ಷದ ಒಳಗೆ ಜನಸಂಖ್ಯೆಯಿರುವ ನಗರಗಳ ಪೈಕಿ ಮಂಗಳೂರು ಮಹಾನಗರ ಪಾಲಿಕೆಯು ಪ್ರಶಸ್ತಿಗೆ ಭಾಜನವಾಗಿದೆ. ಅಂತೆಯೇ 15 ಸಾವಿರದಿಂದ 25 ಸಾವಿರಗಳ ಒಳಗಿನ ಜನಸಂಖ್ಯೆಯ ಪಟ್ಟಣಗಳಿಗೆ 'ವಿಶೇಷ ಉಲ್ಲೇಖ ಪ್ರಶಸ್ತಿ'ಗೆ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಆಯ್ಕೆಯಾಗಿದೆ. 3 ಲಕ್ಷದಿಂದ 10 ಲಕ್ಷ ಜನಸಂಖ್ಯೆಯ ಮಹಾನಗರಗಳ ಪೈಕಿ ಮೈಸೂರು ಗೌರವಕ್ಕೆ ಪಾತ್ರವಾಗಿದೆ.

ನವದೆಹಲಿಯ ತಲ್‌ಕಟೋರಾ ಮೈದಾನದಲ್ಲಿ ಸೆ.30ರಂದು ನಡೆಯಲಿರುವ 'ಸ್ವಚ್ಛ ನಗರ ಸಂವಾದ ಮತ್ತು ತಂತ್ರಜ್ಞಾನ ಪ್ರದರ್ಶನ'ದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕೇಂದ್ರ ಸರ್ಕಾರದ 'ಸ್ವಚ್ಛ ಭಾರತ ಅಭಿಯಾನ'ದ ಜಂಟಿ ನಿರ್ದೇಶಕಿ (ನಗರ ವಿಭಾಗ) ರೂಪಾ ಮಿಶ್ರಾ ತಿಳಿಸಿದ್ದಾರೆ.

ಹಗರಣ ಮುಚ್ಚಿಡಲು ದಾಳಿಯೇ: ಎಚ್.ಡಿ. ಕುಮಾರಸ್ವಾಮಿ ಪ್ರಶ್ನೆ

ಬೆಂಗಳೂರು: ಸರ್ಕಾರದ ಹಗರಣಗಳನ್ನು ಮುಚ್ಚಿಡಲು ಪಿಎಫ್‌ಐ ಸಂಘಟನೆ ಮೇಲೆ ರಾಜ್ಯ ಪೊಲೀಸರು ದಾಳಿ ನಡೆಸಿದ್ದಾರೆಯೇ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

ರಾಜ್ಯ ಸರ್ಕಾರದ ಹಗರಣ, ಅಕ್ರಮಗಳಿಂದ ಜನರು ರೋಸಿ ಹೋಗಿದ್ದಾರೆ. ನೈಜ ಸಂಗತಿ ಬಿಚ್ಚಿಡದಿದ್ದರೆ, ಹಗರಣ ಮುಚ್ಚಿಡಲು ಪಿಎಫ್‌ಐ ಮೇಲೆ ನಡೆದಿರುವ ದಾಳಿ ಎಂದೇ ಭಾವಿಸಬೇಕಾಗುತ್ತದೆ. ದಾಳಿಯ ವಾಸ್ತವಾಂಶವನ್ನು ರಾಜ್ಯದ ಜನರ ಮುಂದೆ ಬಹಿರಂಗಪಡಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯ ಪೊಲೀಸರು ನಡೆಸಿದ ದಾಳಿಯಲ್ಲಿ ಜಿಲ್ಲಾ ಘಟಕದ ಅಧ್ಯಕ್ಷರ ಬಂಧನವಾಗಿದೆ. ಮಧ್ಯರಾತ್ರಿ ಕಾರ್ಯಾಚರಣೆಗೆ ಸರ್ಕಾರದ ಆದೇಶವಿತ್ತೇ? ಪೊಲೀಸರ ಮಾಹಿತಿ ಆಧಾರದ ದಾಳಿಯೇ? ಇಂತಹ ದಾಳಿಗಳಿಂದ ಸಮಾಜದ ಮೇಲೆ ಅತಂಕ, ಭಯ ಸೃಷ್ಟಿಸಬಾರದು. ಸಂಘಟನೆಗಳ ಆರ್ಥಿಕ ಶಕ್ತಿ ಕುರಿತೂ ತನಿಖೆ ಮಾಡಬೇಕು ಎಂದು ಒತ್ತಾಯಿಸಿದರು.

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ತಿಗಳ ನೌಕರರ ವೃತ್ತಿಪರರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2021–22ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಶೇಕಡ 90ರಷ್ಟು ಮತ್ತು ಪಿಯುಸಿಯಲ್ಲಿ ಶೇಕಡ 85ರಷ್ಟು ಅಂಕಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅಂತಿಮ ವರ್ಷದ ಐ.ಟಿ.ಐ, ಡಿಪ್ಲೊಮಾ, ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿ.ಸಿ.ಎ, ಬಿ.ಬಿ.ಎಂ, ಪದವಿ ಪರೀಕ್ಷೆಗಳಲ್ಲಿ ಶೇ 60ರಷ್ಟು ಅಂಕಗಳಿಸಿದವರು ಅಕ್ಟೋಬರ್ 30ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 9448034613/9036060974 .

ಸಚಿವ ಮುರುಗೇಶ ನಿರಾಣಿ ಮನೆಗೆ ಸಿದ್ದರಾಮಯ್ಯ ಭೇಟಿ

ಬಾಗಲಕೋಟೆ: ಮುಧೋಳದಲ್ಲಿರುವ ಸಚಿವ ಮುರುಗೇಶ ನಿರಾಣಿಯವರ ನಿವಾಸಕ್ಕೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಂಗಳವಾರ ಭೇಟಿ ನೀಡುವ ಮೂಲಕ ರಾಜಕೀಯ ವಲಯದಲ್ಲಿ ಅಚ್ಚರಿ ಮೂಡಿಸಿದ್ದಾರೆ.

ಮಾಜಿ ಸಚಿವ ಆರ್.ಬಿ. ತಿಮ್ಮಾಪುರ ಅವರ ಜನ್ಮ ದಿನ ಕಾರ್ಯಕ್ರಮಕ್ಕೆ ಬಂದಿದ್ದ ಅವರು ನಿರಾಣಿ ನಿವಾಸದ ಬಳಿ ಇರುವ ಹೆಲಿಪ್ಯಾಡ್‌ನಲ್ಲಿ ಇಳಿದಿದ್ದರು. ಕಾರ್ಯಕ್ರಮಕ್ಕೆ ತೆರಳುವ ಮುನ್ನ ನಿರಾಣಿ ಮನೆಗೆ ಹೋದರು. ಆದರೆ ಸಚಿವ ನಿರಾಣಿ ಇರಲಿಲ್ಲ.

ಇದಕ್ಕೂ ಮುನ್ನ ಜಮಖಂಡಿಯಲ್ಲಿ ನಡೆದ ಸಿದ್ದು ನ್ಯಾಮಗೌಡರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಹಾಗೂ ನಿರಾಣಿ ಅವರ ಸಹೋದರ ಸಂಗಮೇಶ ನಿರಾಣಿ ಇಬ್ಬರೂ ಪಾಲ್ಗೊಂಡಿದ್ದರು. ಸಮಾರಂಭದಲ್ಲಿದ್ದ ಸಂಗಮೇಶ ಅವರು ಅರ್ಧದಲ್ಲಿಯೇ ಕಾರ್ಯಕ್ರಮದಿಂದ ಎದ್ದು ಬಂದಿದ್ದರು. 2018ರಲ್ಲಿ ಜಮಖಂಡಿಯಿಂದ ಬಿಜೆಪಿ ಟಿಕೆಟ್ ದೊರೆಯದ ಕಾರಣ ಸಂಗಮೇಶ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಈ ಬಾರಿ ತೇರದಾಳ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಕಾಂಗ್ರೆಸ್‌ಗೆ ಸೇರ್ಪಡೆಯಾಗಿ ಸ್ಪರ್ಧಿಸಬಹುದೇ ಎಂಬ ಚರ್ಚೆ ಕ್ಷೇತ್ರದಲ್ಲಿ ನಡೆದಿದೆ.

ನೈಟಿಂಗೇಲ್ಸ್ ವೈದ್ಯಕೀಯ ಟ್ರಸ್ಟ್ ಆರಂಭಿಸಿರುವ ನಿರಂತರ ಆರೈಕೆ ಕೇಂದ್ರ

ಮರೆವಿನ ಕಾಯಿಲೆ: ಚಿಕಿತ್ಸೆಗೆ 'ಡೆಮ್‌ಕ್ಲಿನಿಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಕಸ್ತೂರಿ ನಗರದ ನೈಟಿಂಗೇಲ್ಸ್ ವೈದ್ಯಕೀಯ ಟ್ರಸ್ಟ್, ಮರೆವಿನ ಕಾಯಿಲೆಯ ಚಿಕಿತ್ಸೆಗಾಗಿ ನಿರಂತರ ಆರೈಕೆ ಕೇಂದ್ರ 'ಡೆಮ್‌ಕ್ಲಿನಿಕ್' ಆರಂಭಿಸಿದೆ.

ಕೇಂದ್ರದಲ್ಲಿ ನೋಂದಣಿಯಾಗುವ ರೋಗಿಗಳ ರೋಗವನ್ನು ಖಚಿತವಾಗಿ ಪತ್ತೆ ಹಚ್ಚುವುದು, ಪತ್ತೆ ಹಚ್ಚಿದ ನಂತರ ಸೂಕ್ತ ಚಿಕಿತ್ಸೆ ನೀಡಿ, ನಿರಂತರ ಆರೈಕೆಯ ವ್ಯವಸ್ಥೆ ಇದೆ. ಮರೆವಿನ ಕಾಯಿಲೆ ಸಮಸ್ಯೆ ಇರುವವರಿಗೆ, ಅವರ ಕುಟುಂಬದವರಿಗೆ ಕಾಯಿಲೆ ಕುರಿತು ಸೂಕ್ತ ಮಾಹಿತಿ ಒದಗಿಸುವುದು, ರೋಗಿಯ ನಡವಳಿಕೆ ಹಾಗೂ ಸಾಮಾಜಿಕ ಅಗತ್ಯಗಳ ಕುರಿತು ತಿಳಿವಳಿಕೆ ಮೂಡಿಸುವ ಕೆಲಸವನ್ನೂ ಈ ಕೇಂದ್ರ ಮಾಡಲಿದೆ.

ಮುಖ್ಯಾಂಶಗಳು

- **ರೋಗಿ ಹಾಗೂ ಅವರ ಕುಟುಂಬದವರಿಗೆ ಕಾಯಿಲೆ ಕುರಿತ ಮಾಹಿತಿ**
- **ರೋಗವನ್ನು ಖಚಿತವಾಗಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಲಿರುವ ಕೇಂದ್ರ**

ವಿಶ್ವ ಮರೆವಿನ ತಿಂಗಳ (ಅಲ್ಜೈಮರ್ಸ್) ಆಚರಣೆಯ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡೆಮ್‌ಕ್ಲಿನಿಕ್ ಉದ್ಘಾಟಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಯೋಜನಾ ನಿರ್ದೇಶಕ ಡಾ.ಶ್ರೀನಿವಾಸ್, ದೇಶದಲ್ಲಿ 60 ವರ್ಷದ ಮೇಲಿನ 53 ಲಕ್ಷ ಜನರು ಮರೆವಿನ ಕಾಯಿಲೆಯಿಂದ ಬಳಲುತ್ತಿದ್ದಾರೆ. ಮುಂದಿನ 15 ವರ್ಷಗಳಲ್ಲಿ ಈ ಸಂಖ್ಯೆ ದ್ವಿಗುಣಗೊಳ್ಳುವ ಸಾಧ್ಯತೆ ಇದೆ. ಮರೆವು ನರಶಮನಕಾರಿ ಕಾಯಿಲೆ, ಪೀಡಿತ ವ್ಯಕ್ತಿ ಹಾಗೂ ಆರೈಕೆ ಮಾಡುವವರು ಸಾಕಷ್ಟು ಸಮಸ್ಯೆ ಎದುರಿಸಬೇಕಾಗುತ್ತದೆ. ಈ ಕಾಯಿಲೆಗೆ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಆರೋಗ್ಯ ಸಮಸ್ಯೆಯಿಂದ ಬಳಲುವವರು, ಅಂಗವಿಕಲರು ಸಾಕಷ್ಟು ಸಮಸ್ಯೆ ಅನುಭವಿಸುತ್ತಾರೆ. ನಿರಂತರ ಆರೈಕೆ, ಕಾಳಜಿ ಅಗತ್ಯ ಎಂದರು.

ವ್ಯವಸ್ಥಾಪಕ ಟ್ರಸ್ಟಿ ಡಾ.ರಾಧಾ ಎಸ್. ಮೂರ್ತಿ ಮಾತನಾಡಿ, ನೈಟಿಂಗೇಲ್ಸ್ ವೈದ್ಯಕೀಯ ಟ್ರಸ್ಟ್ ಆರಂಭಿಸಿರುವ ಡೆಮ್‌ಕ್ಲಿನಿಕ್ ಮರೆವಿನ ಕಾಯಿಲೆಯಿಂದ ಬಳಲುತ್ತಿರುವವರಿಗೆ ವರದಾನವಾಗಲಿದೆ. ಹೆಸರು ನೋಂದಾಯಿಸಲು www.demclinic.com ಸಂಪರ್ಕಿಸಬಹುದು ಎಂದರು.

‘ನಾನು ಏನೇ ಆಗಿದ್ದರೂ ನಿಮ್ಮ ಸೇವೆಗಾಗಿ’


ದ್ರೌಪದಿ ಮುರ್ಮು

ಬೆಂಗಳೂರು: ‘ನಾನು ಏನೇ ಆಗಿದ್ದರೂ ನಿಮ್ಮ ಸೇವೆಗಾಗಿ’ ಎಂದು ರಾಜ್ಯ ಸರ್ಕಾರದ ‘ಪೌರ ಸನ್ಮಾನ’ ಸ್ವೀಕರಿಸಿದ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ದ್ರೌಪದಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಸತ್ಕರಿಸಿದರು.

ನಾಗರಿಕರ ಪರವಾಗಿ ವಿವಿಧ ಕ್ಷೇತ್ರಗಳ ಸಾಧಕರಾದ ಇಸ್ಕಾನ್ ಮುಖ್ಯಸ್ಥ ಮಧು ಪಂಡಿತದಾಸ, ಸಾಹಿತಿ ಚಂದ್ರಶೇಖರ ಕಂಬಾರ, ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ, ಉದ್ಯಮಿಗಳಾದ ಕಿರಣ್ ಮಜುಂದಾರ್ ಷಾ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಮಂಜಮ್ಮ ಜೋಗತಿ ಗೌರವಿಸಿದರು.

‘ತಾಯಿ ಭುವನೇಶ್ವರಿಗೆ ಹಾಗೂ ಸಮಸ್ತ ಕನ್ನಡಿಗರಿಗೆ ಹೃದಯಪೂರ್ವಕ ನಮಸ್ಕಾರಗಳು’ ಎಂದು ಕನ್ನಡದಲ್ಲಿ ಹೇಳುತ್ತಲೇ ಭಾಷಣ ಆರಂಭಿಸಿದ ರಾಷ್ಟ್ರಪತಿ, ಕರ್ನಾಟಕದ ಪರಂಪರೆ, ವಿವಿಧ ಕ್ಷೇತ್ರಗಳಲ್ಲಿ ನೀಡಿದ ಕೊಡುಗೆಯನ್ನು ಸ್ಮರಿಸಿದರು. ಕನ್ನಡಿಗರ ಪ್ರೀತಿ, ಹೃದಯ ವೈಶಾಲ್ಯ, ತೋರಿದ ಅಭಿಮಾನ, ಸತ್ಕಾರ, ಕನ್ನಡಿಗರ ಮೃದು ಸ್ವಭಾವ, ಶಾಂತಿಪ್ರಿಯತೆ, ಉದಾರ ಮನೋಭಾವನೆಯನ್ನು ಪ್ರಶಂಸಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಬುಡಕಟ್ಟು ಜನಾಂಗದ ಮಹಿಳೆಯೊಬ್ಬರು ರಾಷ್ಟ್ರದ ಉನ್ನತ ಹುದ್ದೆ ಗೇರಿರುವುದು ಪ್ರಜಾಪ್ರಭುತ್ವದ ವೈಶಿಷ್ಟ್ಯ’ ಎಂದರು. ‘ದ್ರೌಪದಿ ಮುರ್ಮು ಅವರು ಪ್ರಜಾಪ್ರಭುತ್ವದ ಘನತೆ ಎತ್ತಿಹಿಡಿದಿದ್ದಾರೆ. ಎಲ್ಲ ವಿಚಾರಗಳನ್ನು ತಿಳಿದುಕೊಂಡಿದ್ದರೂ ಪ್ರದರ್ಶಿಸದೇ ಇರುವ ಅವರ ಮುಗ್ಧತೆ, ಆತ್ಮಸಾಕ್ಷಿಯಾಗಿ ನಡೆದುಕೊಳ್ಳುವ ಗುಣ ಮಾದರಿ’ ಎಂದರು.

‘ಹಿಂದುಳಿದ ಮತ್ತು ದುರ್ಬಲ ವರ್ಗಗಳ ಜೀವನವನ್ನು ಸುಧಾರಿಸುವುದು, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬಲಪಡಿಸುವ ಕೆಲಸದಲ್ಲಿ ತೊಡಗಿರುವ ದ್ರೌಪದಿ ಮುರ್ಮು ಅವರು ಸರಳತೆ, ವಿನಮ್ರತೆಯ ಪ್ರತೀಕವಾಗಿದ್ದಾರೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ವಿಧಾನ ಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಪರಿಷತ್ ಸಭಾಪತಿ ರಘುನಾಥ ರಾವ್ ಮಲ್ಕಾಪುರೆ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಎ. ನಾರಾಯಣಸ್ವಾಮಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಇದ್ದರು.

243 ವಾರ್ಡ್‌ಗಳ ಪಟ್ಟಿ: ಒಬಿಸಿಗೆ ರಾಜಕೀಯ ಮೀಸಲು ನಿಗದಿ ಜಿಜ್ಞಾಸೆ

ಬಿಬಿಎಂಪಿ: ಮುಂದುವರಿದ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಗೆ ಸಿದ್ಧಪಡಿಸಲಾಗಿರುವ 243 ವಾರ್ಡ್‌ಗಳ ಮೀಸಲು ಪಟ್ಟಿಯಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ರಾಜಕೀಯ ಮೀಸಲು ಕಲ್ಪಿಸಿಲ್ಲ ಮತ್ತು ಈಗ ನಿಗದಪಡಿಸಲಾಗಿರುವ ಒಬಿಸಿ ಮೀಸಲಿಗೆ ಜನಸಂಖ್ಯೆಯ ಆಧಾರಗಳೇನು ಎಂಬ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳಿಲ್ಲ’ ಎಂಬ ಅರ್ಜಿದಾರರ ಆಕ್ಷೇಪಣೆ ಮುಂದುವರಿದ ಹಿನ್ನೆಲೆಯಲ್ಲಿ ಈ ಕುರಿತ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಬುಧವಾರಕ್ಕೆ (ಸೆ.28) ಮುಂದೂಡಿದೆ.

ಈಜಿಪುರದ ಕೆ.ಮಹದೇವ, ಕಮ್ಮನಹಳ್ಳಿಯ ಪಳನಿ ದಯಾಳನ್,


ಹೈಕೋರ್ಟ್

ದೊಡ್ಡಬಾಣಸವಾಡಿಯ ವಿ.ಶ್ರೀನಿವಾಸ್ ಮತ್ತು ನಾಗನಾಥಪುರದ ಕೆ. ಚಂದ್ರಶೇಖರ್ ಸೇರಿ ಎಂಟು ಜನರ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲರಾದ ಜಯಕುಮಾರ್

ಅರ್ಜಿದಾರರ ವಾದ

- ಚುನಾವಣಾ ಆಯೋಗ ಟ್ರಿಪಲ್ ಟೆಸ್ಟ್ ಮಾನದಂಡ ಅನುಸರಿಸಿಲ್ಲ
- ಹೊಸದಾಗಿ ಒಬಿಸಿಗಳ ಸರ್ವೆ ನಡೆಸಲು ನಿರ್ದೇಶಿಸಬೇಕು

ಎಸ್.ಪಾಟೀಲ್, ಎ.ಎಸ್.ಪೊನ್ನಣ್ಣ ಮತ್ತು ಸಂದೀಪ್ ಪಾಟೀಲ್, ಜಯಾ ಮೊವಿಲ್ ವಾದ ಮಂಡಿಸಿ, ‘ಇತರೆ ಹಿಂದುಳಿದ ವರ್ಗಕ್ಕೆ (ಒಬಿಸಿ) ರಾಜಕೀಯ ಮೀಸಲು ನಿಗದಿಗೆ ಸರ್ವೆ ನಡೆಸಿಲ್ಲ. ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಚುನಾವಣಾ ಆಯೋಗ ಟ್ರಿಪಲ್ ಟೆಸ್ಟ್ ಮಾನದಂಡ ಅನುಸರಿಸಿಲ್ಲ. ಹಾಗಾಗಿ, ಒಬಿಸಿ ಆಯೋಗದ ವರದಿಯಂತೆ ಮೀಸಲು ಪರಿಗಣಿಸಬಾರದು. ಹೊಸದಾಗಿ ಒಬಿಸಿಗಳ ಸರ್ವೆ ನಡೆಸಲು ನಿರ್ದೇಶಿಸಬೇಕು’ ಎಂದು ಕೋರಿದರು.

‘ವಿಧಾನಸಭಾ ಕ್ಷೇತ್ರವಾರು ವಿರೋಧ ಪಕ್ಷಗಳ ಶಾಸಕರಿರುವ ಕ್ಷೇತ್ರಗಳಲ್ಲಿ ಮಹಿಳಾ ಮೀಸಲು ಹೆಚ್ಚಳ ಮಾಡಲಾಗಿದೆ. ಆಡಳಿತಾರೂಢ ಪಕ್ಷದ ಶಾಸಕರು ಇರುವ ಕಡೆ ಸಾಮಾನ್ಯ ಕ್ಷೇತ್ರಗಳನ್ನು ಹೆಚ್ಚಿಸಲಾಗಿದೆ. ಇದು ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ವಿರುದ್ಧವಾಗಿದೆ. ಇಂತಹ ತಾರತಮ್ಯದಿಂದ ಅಂತಿಮವಾಗಿ ಶ್ರೀಸಾಮಾನ್ಯ ಬಳಲುತ್ತಾನೆ’ ಎಂದು ಆಕ್ಷೇಪಿಸಿದರು.

ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ, ‘ಟ್ರಿಪಲ್ ಟೆಸ್ಟ್ ಆಧಾರದಲ್ಲಿ ಮೀಸಲಾತಿ ನಿಗದಿಪಡಿಸಿ ವರದಿ ಪಡೆಯಲು ಸಮಯಬೇಕಾಗುತ್ತದೆ. ಹೀಗೇ ಕಾಲ ತಳ್ಳುತ್ತಾ ಹೋದರೆ ಇದು ಎಂದೂ ಮುಗಿಯದ ಕಥೆಯಾಗುತ್ತದೆ. ಒಂದು ವೇಳೆ ಮೀಸಲು ಮರು ರೂಪಿಸಲು ನಿರ್ದೇಶನ ನೀಡಿದರೆ ಒಂದು ವಾರ ಮಾತ್ರವೇ ಸಮಯ ನೀಡಬೇಕು. ನಾವು ಕೇಂದ್ರ ಚುನಾವಣಾ ಆಯೋಗಕ್ಕೆ ಎಲೆಕ್ಟ್ರಾನಿಕ್ ಮತಯಂತ್ರಗಳನ್ನು (ಇವಿಎಂ) ಮರಳಿಸಬೇಕಿದೆ. ಹಾಗಾಗಿ, ಮೀಸಲು ಮರುರೂಪಿಸಲು ಹೆಚ್ಚಿನ ಸಮಯ ನೀಡಬಾರದು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸರ್ಕಾರಕ್ಕೆ ಚುನಾವಣೆ ನಡೆಸಲು ಮನಸ್ಸಿದ್ದಂತಿಲ್ಲ. ಈ ರೀತಿಯ ತಾರತಮ್ಯ ಸಲ್ಲದು’ ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣೆ ಮುಂದೂಡಿತು.



ಶ್ವಾಸಕೋಶಕ್ಕೆ ಸಂಬಂಧಿಸಿದ ಹೊಸ ಮಾದರಿಯ ಚಿಕಿತ್ಸಾ ವಿಧಾನದ ಉದ್ಘಾಟನಾ ಸಮಾರಂಭದಲ್ಲಿ ಉದಯ್, ಡಾ.ಮನೀಶ್, ರವೀಂದ್ರ ಮೆಹ್ತಾ, ಡಾ.ಗೋವಿಂದಯ್ಯ ಯತೀಶ್ ಹಾಜರಿದ್ದರು

ಅಪೋಲೊ ಆಸ್ಪತ್ರೆಯಲ್ಲಿ ಹೊಸ ಮಾದರಿ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರದ ಅಪೋಲೊ ಆಸ್ಪತ್ರೆಯಲ್ಲಿ ಶ್ವಾಸಕೋಶಕ್ಕೆ ಸಂಬಂಧಿಸಿದಂತೆ ಹೊಸ ಮಾದರಿಯ ಚಿಕಿತ್ಸಾ ವಿಧಾನಗಳನ್ನು ಮೊದಲ ಬಾರಿಗೆ ಪರಿಚಯಿಸಲಾಗಿದೆ. ಇಲ್ಲಿನ ಪಲ್ಮನಾಲಜಿ ವಿಭಾಗದಲ್ಲಿ ಹಳೇ ರೋಗಗಳಿಗೆ ಹೊಸ ಪರಿಹಾರ ಕಂಡುಹಿಡಿಯಲಾಗಿದೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಉಸಿರಾಟದ ಸಮಸ್ಯೆಗಳಿಗೆ ಹಲವು ಕಾರಣಗಳಿವೆ. ನೈಜ ಕಾರಣವನ್ನು ಪತ್ತೆಹಚ್ಚಿ, ಚಿಕಿತ್ಸೆ ನೀಡಲಾಗುವುದು. ‘ಥರ್ಮೋಪ್ಲಾಸ್ಟಿ’ ಹಾಗೂ ‘ಇಂಟರ್ ವೇಪರ್ ಥೆರಪಿ’ ಎಂಬ ಹೊಸ ಮಾದರಿಯ ಚಿಕಿತ್ಸೆ ಲಭ್ಯ ಇದೆ. ಈ ಚಿಕಿತ್ಸಾ ವಿಧಾನ ಭಾರತದ ಕೆಲವು ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿದೆ ಎಂದು ಹೇಳಿದೆ.

‘ಎಲ್ಲ ಸೇವೆಗಳನ್ನು ಸಮನ್ವಯ ಮಾಡುವುದೇ ನಮ್ಮ ಗುರಿ. ಚಿಕಿತ್ಸೆಗೆ ಸಂಬಂಧಿಸಿದ ತಂತ್ರಜ್ಞಾನವನ್ನು ಉನ್ನತ ಮಟ್ಟಕ್ಕೆ ಏರಿಸಲಾಗಿದೆ. ರೋಗಿಗಳಿಗೆ ಅತ್ಯುತ್ತಮ ಸೇವೆ ನೀಡುವುದೇ ಆಸ್ಪತ್ರೆಯ ಮೊದಲ ಆದ್ಯತೆಯಾಗಿದೆ’ ಎಂದು ಶ್ವಾಸಕೋಶ ವಿಭಾಗದ ಮುಖ್ಯಸ್ಥ ಡಾ.ರವೀಂದ್ರ ಎಂ. ಮೆಹ್ತಾ ಅವರು ತಿಳಿಸಿದ್ದಾರೆ.

ಸಿ.ಎಂ ಬೆಂಬಲಕ್ಕೆ ಲಿಂಗಾಯತ ಮಠಾಧೀಶರು

ಮುಖ್ಯಮಂತ್ರಿ ಹಾಡಿ ಹೊಗಳಿದ ಸ್ವಾಮೀಜಿಗಳು • ‘ಪೇಸಿಎಂ’ ಅಭಿಯಾನ ನಿಲ್ಲಿಸಲು ತಾಕೀತು

ಪ್ರಜಾವಾಣಿ ವಾರ್ತೆ

ತುಮಕೂರು: ಮುಖ್ಯಮಂತ್ರಿ ವಿರುದ್ಧ ವಿರೋಧ ಪಕ್ಷಗಳಿಂದ ವ್ಯಕ್ತವಾಗುತ್ತಿರುವ ಟೀಕೆಗಳನ್ನು ಖಂಡಿಸಿರುವ ವೀರಶೈವ, ಲಿಂಗಾಯತ ಮಠಾಧೀಶರು ಬಸವರಾಜ ಬೊಮ್ಮಾಯಿ ಅವರ ಬೆಂಬಲಕ್ಕೆ ನಿಂತಿದ್ದಾರೆ.

ತಿಪಟೂರಿನ ಷಡಕ್ಷರ ಮಠದ ರುದ್ರಮುನಿ ಸ್ವಾಮೀಜಿ ನೇತೃತ್ವದಲ್ಲಿ ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿದ ಜಿಲ್ಲೆಯ ವಿವಿಧ ಮಠಾಧೀಶರು, ಮುಖ್ಯಮಂತ್ರಿ ಅವರನ್ನು ಹಾಡಿ ಹೊಗಳಿದರು. ಬೊಮ್ಮಾಯಿ ಪರ ಒಂದಾಗಿ ನಿಲ್ಲುವುದಾಗಿ ಘೋಷಿಸಿದರು.

‘ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ, ಎಲ್ಲರೂ ತಪ್ಪು ಮಾಡುತ್ತಾರೆ. ಆದರೆ, ಅಂತಹ ತಪ್ಪುಗಳು ಪುನರಾವರ್ತನೆ ಆಗದಂತೆ ನೋಡಿಕೊಳ್ಳಬೇಕು. ಬೊಮ್ಮಾಯಿ ನೇತೃತ್ವದ ಸರ್ಕಾರ ಉತ್ತಮ ಆಡಳಿತ ನಡೆಸುತ್ತಿದ್ದು, ಅವರಿಗೆ ಅಡ್ಡಗಾಲು ಹಾಕುವ ಕೆಲಸವನ್ನು ಯಾರೂ ಮಾಡಬಾರದು’ ಎಂದು ವಿರೋಧ ಪಕ್ಷದ ನಾಯಕರ ವಿರುದ್ಧ ಕಿಡಿಕಾರಿದರು.

‘ಇತ್ತೀಚಿನ ಬೆಳವಣಿಗೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚ್ಚರಿ ಮೂಡಿಸುತ್ತವೆ. ರಾಜ್ಯದ ಸಂಸ್ಕೃತಿ ಹರಾಜು ಹಾಕುವ, ಪರಂಪರೆ ಹಾಳು ಮಾಡುವ, ಕೆಟ್ಟ ಹೆಸರು ತರುವ ಕೆಲಸ ನಡೆಯುತ್ತಿದೆ. ಜಗತ್ತಿನ ಜನರು ರಾಜ್ಯದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದಾರೆ. ಇಂತಹ ಸಮಯದಲ್ಲಿ ವೈಯಕ್ತಿಕ ಹಿತಕ್ಕಾಗಿ ರಾಜ್ಯದ ಜನರ ಮರ್ಯಾದೆ ಹಾಳು ಮಾಡುವ, ಗೌರವಕ್ಕೆ ಧಕ್ಕೆ ತರುವ ಕೆಲಸವಾಗುತ್ತಿದೆ’ ಎಂದು ರುದ್ರಮುನಿ ಸ್ವಾಮೀಜಿ ಆರೋಪಿಸಿದರು.

ರಾಜಕೀಯ ವ್ಯವಸ್ಥೆಯಲ್ಲಿ ಅರಾಜಕತೆ ಸೃಷ್ಟಿ ಮಾಡುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ವ್ಯಕ್ತಿಯ ತೇಜೋವಧೆ ಮಾಡುವುದು ನಿರಂತರವಾಗಿ ಸಾಗಿದೆ. ಜನರಿಂದ ಆಯ್ಕೆಯಾದವರು ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಜನಪ್ರತಿನಿಧಿಗಳ ನಡವಳಿಕೆಗಳು ಸಮಾಜಕ್ಕೆ ಶೋಭೆ ತರುವಂತಹದಲ್ಲ ಎಂದರು.

‘ಪೇಸಿಎಂ’ ನಿಲ್ಲಿಸಿ: ಜನಪ್ರತಿನಿಧಿಗಳು ಜನರ ನಾಡಿಮಿಡಿತ ಅರಿತು ಕೆಲಸ ಮಾಡಬೇಕು. ಒಬ್ಬರ ಮೇಲೆ ಮತ್ತೊಬ್ಬರು ಕೆಸರು ಎರಚುವ ಕೆಲಸ ನಿಲ್ಲಬೇಕು. ಮುಖ್ಯಮಂತ್ರಿಗೆ ತಮ್ಮದೇ ಆದ ಗೌರವ, ಘನತೆ ಇರುತ್ತದೆ. ಅವರ ವ್ಯಕ್ತಿತ್ವ ಹಾಳು ಮಾಡುವ, ಗೌರವಕ್ಕೆ ಮಸಿ ಬಳಿಯುವ ಕೆಲಸ ಮಾಡಬಾರದು ಎಂದರು.

‘ಪೇಸಿಎಂ’ ಎಂಬ ಟೀಕೆಯನ್ನು ತುಂಬಾ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ. ಇದು ಇಲ್ಲಿಗೆ ನಿಲ್ಲಬೇಕು. ಮುಂದೆ ಬಹಳಷ್ಟು ಜನ ಮುಖ್ಯಮಂತ್ರಿ ಆಗಬೇಕು ಎಂಬ ಆಕಾಂಕ್ಷೆ ಇಟ್ಟುಕೊಂಡಿದ್ದಾರೆ. ಅವರ ಕಾಲದಲ್ಲೂ ಇಂತಹ ಘಟನೆಗಳು ಆಗುವುದು ಬೇಡ ಎಂದರು.

ತಮ್ಮಡಿಹಳ್ಳಿ ಮಠದ ಸಿದ್ಧಲಿಂಗ ದೇಶಿಕೇಂದ್ರ ಸ್ವಾಮೀಜಿ, ಮಾದಿಹಳ್ಳಿ ಹಿರೇಮಠದ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ತಂಗನಹಳ್ಳಿ ಮಠದ ಬಸವ ಮಹಾಲಿಂಗ ಸ್ವಾಮೀಜಿ, ಡಿ. ಕಲ್ಕೆರೆ ಅಲ್ಲಮಪ್ರಭು ಮಠದ ತಿಪ್ಪೇರುದ್ರ ಸ್ವಾಮೀಜಿ, ಮೃತ್ಯುಂಜಯ ಸ್ವಾಮೀಜಿ, ಶಶಿಶೇಖರ ಸಿದ್ದಬಸವ ಸ್ವಾಮೀಜಿ, ಪ್ರಭುಲಿಂಗ ಸ್ವಾಮೀಜಿ ಉಪಸ್ಥಿತರಿದ್ದರು.

ಉತ್ತಮ ಆಡಳಿತ: ಸಮರ್ಥನೆ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸ್ವಾಮೀಜಿಗಳು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ನೂರಕ್ಕೆ ನೂರರಷ್ಟು ಅಂಕ ನೀಡಿದರು. ಬೊಮ್ಮಾಯಿ ಉತ್ತಮ ಆಡಳಿತ ನಡೆಸುತ್ತಿದ್ದಾರೆ ಎಂದರು.

ಸರ್ಕಾರಿ ಹುದ್ದೆಗಳ ಭರ್ತಿಯಲ್ಲಿ ಅಕ್ರಮ, ಶೇ 40ರಷ್ಟು ಕಮಿಷನ್ ಆರೋಪ, ಹಲವಾರು ಇಲಾಖೆಗಳ ನೇಮಕಾತಿಗಳಲ್ಲಿ ಭ್ರಷ್ಟಾಚಾರ ಸೇರಿದಂತೆ ಹಲವು ರೀತಿಯಲ್ಲಿ ಅಕ್ರಮಗಳು ನಡೆಯುತ್ತಿದ್ದರೂ ಸ್ವಾಮೀಜಿಗಳು ಏಕೆ ಮಾತನಾಡುತ್ತಿಲ್ಲ ಎಂಬ ಪತ್ರಕರ್ತರ ಪ್ರಶ್ನೆಗೆ ಸ್ವಾಮೀಜಿಗಳು ಉತ್ತರ ನೀಡಲಿಲ್ಲ.

ಬೊಮ್ಮಾಯಿ ಯಾವುದೇ ಫಲಾಪೇಕ್ಷೆ ಇಲ್ಲದೆ, ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇನ್ನಷ್ಟು ಸಹಕಾರ ಮಾಡಿದರೆ, ರಾಜ್ಯದ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಹೇಳಿದರು.

ಮುಖ್ಯಮಂತ್ರಿ, ಸಚಿವರು ಕಮಿಷನ್ ಪಡೆದಿದ್ದರೆ ಅವರ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಲಿ. ಅದನ್ನು ಬಿಟ್ಟು ಕತ್ತಲಲ್ಲಿ ಗುಂಡು ಹೊಡೆಯುವ ಕೆಲಸ ಮಾಡಬಾರದು ಎಂದು ಹೇಳಿದರು.

‘ಸಿ.ಎಂ ಕುರ್ಚಿ ಮೇಲೆ ಎಲ್ಲರ ಕಣ್ಣು’

ಚುನಾವಣೆ ಹತ್ತಿರ ಬರುತ್ತಿದ್ದಂತೆ ಎಲ್ಲರು ಮುಖ್ಯಮಂತ್ರಿ ಕುರ್ಚಿಯ ಮೇಲೆ ಆಸೆ ಪಡುತ್ತಿದ್ದಾರೆ. ಸರ್ಕಾರ ಮತ್ತು ವಿರೋಧ ಪಕ್ಷಗಳು ಸಾಮಾನ್ಯ ಜನರ ಗೋಳು ಅರಿಯಲಿ. ಪ್ರತಿ ಸರ್ಕಾರದಲ್ಲಿ ಹಗರಣಗಳು ನಡೆದಿವೆ. ಕೇವಲ ಚುನಾವಣೆಯ ದೃಷ್ಟಿಯಿಂದ ಮಾತನಾಡುವುದನ್ನು ನಿಲ್ಲಿಸಿ, ಸತ್ಯ ನುಡಿಯಬೇಕು ಎಂದು ಜ್ಞಾನಾನಂದಪುರಿ ಸ್ವಾಮೀಜಿ ಹೇಳಿದರು.

ಯೋಗ ಸಂಸ್ಥೆಗೆ ಜಮೀನು: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನ ಭಾರತಿ ಆವರಣದಲ್ಲಿ ಯೋಗ ವಿಜ್ಞಾನ ಅಂತರ ವಿಶ್ವವಿದ್ಯಾಲಯ ಕೇಂದ್ರಕ್ಕೆ 15 ಎಕರೆ ಜಮೀನು ನೀಡಿರುವ ಬಗ್ಗೆ ಸಮಿತಿ ರಚಿಸಲು ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ನಿರ್ಧರಿಸಿದೆ.

ಸಿಂಡಿಕೇಟ್ ಸದಸ್ಯರಾದ ಪ್ರೊ. ಟಿ.ವಿ. ರಾಜು ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಈ ಸಂಸ್ಥೆಗೆ ನೀಡಿರುವ ಜಾಗದಲ್ಲಿ ರಕ್ತ ಚಂದನ, ಶ್ರೀಗಂಧ ಹಾಗೂ ಅತಿ ವಿರಳವಾದ ಸಸ್ಯಪ್ರಭೇದ ಒಳಗೊಂಡಂತೆ ಲಕ್ಷಾಂತರ ಮರ–ಗಿಡಗಳು ಇರುವುದರಿಂದ ವೈಜ್ಞಾನಿಕ ವರದಿ ಸಲ್ಲಿಸಲು ಸಮಿತಿ ರಚಿಸಲು ಸಿಂಡಿಕೇಟ್ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

‘ಕ್ಯಾನ್ಸರ್‌ಪೀಡಿತ ಮಕ್ಕಳಲ್ಲಿ ಭರವಸೆ ಮೂಡಿಸಲು ಯತ್ನ’

ಬೆಂಗಳೂರು: ಕ್ಯಾನ್ಸರ್ ಪೀಡಿತ ಮಕ್ಕಳಲ್ಲಿ ಭರವಸೆ, ಧೈರ್ಯ ತುಂಬುವ ಉದ್ದೇಶದಿಂದ ಮಾರತ್‌ಹಳ್ಳಿಯ ‘ರೈನ್‌ಬೋ’ ಮಕ್ಕಳ ಆಸ್ಪತ್ರೆ ವತಿಯಿಂದ ‘ಹೋಪ್–ದಿ ಲಿಟ್ಲ್ ವಾರಿಯರ್ಸ್ ಸಪೋರ್ಟ್ ಗ್ರೂಪ್’ ಆರಂಭಿಸಲಾಗಿದೆ.

ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಟಿ ಹರಿಣಿ ಅವರು ಈ ವಿಶಿಷ್ಟ ವೇದಿಕೆ ಉದ್ಘಾಟಿಸಿದರು.

ಆಸ್ಪತ್ರೆಯ ‘ಇಂಟೆನ್ಸಿವ್ ಕೇರ್’ ಸೇವಾ ವಿಭಾಗದ ಮಕ್ಕಳ ತಜ್ಞ ಡಾ. ರಕ್ಷಯ್ ಶೆಟ್ಟಿ ಮಾತನಾಡಿ, ‘ಕ್ಯಾನ್ಸರ್ ವಿರುದ್ಧ ಹೋರಾಟ ನಡೆಸಿ ಬದುಕುಳಿದವರು ಮತ್ತು ಅವರ ಕುಟುಂಬಗಳ ಸಂಘರ್ಷದ ಸ್ಫೂರ್ತಿ, ಭರವಸೆಯ ಕಥೆಗಳನ್ನು ಹಂಚಿಕೊಳ್ಳಲು ಈ ವೇದಿಕೆ ಅವಕಾಶ ಒದಗಿಸುತ್ತಿದೆ’ ಎಂದರು.

ಆಸ್ಪತ್ರೆ ಉಪಾಧ್ಯಕ್ಷ ಪಿ.ನಿತ್ಯಾನಂದ ಮಾತನಾಡಿ, ‘ಕ್ಯಾನ್ಸರ್ ರೋಗಿಗಳೊಂದಿಗೆ ನಾವು ಬೆಂಬಲವಾಗಿ ಗಟ್ಟಿಯಾಗಿ ನಿಲ್ಲಲು ಈ ವಿಶಿಷ್ಟ ಕಾರ್ಯಯೋಜನೆ ರೂಪಿಸಿದ್ದೇವೆ. ಕ್ಯಾನ್ಸರ್ ವಿರುದ್ಧ ಹೋರಾಟದಲ್ಲಿ ನಮ್ಮಿಂದಾಗುವ ಸಹಾಯ ಮತ್ತು ರೋಗಿಗಳಲ್ಲಿ ಜೀವನೋತ್ಸಾಹ ತುಂಬಿ ಪ್ರೇರೇಪಿಸುವ ಮೂಲಕ ಅವರ ಆರೈಕೆ ಮಾಡುವವರ ಜೊತೆ ನಾವು ದೃಢವಾಗಿ ನಿಲ್ಲಬೇಕಿದೆ’ ಎಂದರು.



ಟ್ರೋಫಿಯೊಂದಿಗೆ ಸಂಭ್ರಮಿಸಿದ ಡಿಎಸ್– ಮ್ಯಾಕ್ಸ್ ಸ್ವತಂತ್ರ ತಂಡ

ಕ್ರಿಕೆಟ್: ಡಿಎಸ್ ಮ್ಯಾಕ್ಸ್ ಸ್ವತಂತ್ರ ತಂಡಕ್ಕೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಎಸ್– ಮ್ಯಾಕ್ಸ್ ಸ್ವತಂತ್ರ ತಂಡವು ಚೊಚ್ಚಲ ಡಿಎಸ್– ಮ್ಯಾಕ್ಸ್ ಕ್ರಿಕೆಟ್ ಲೀಗ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ.

16 ತಂಡಗಳು ಭಾಗವಹಿಸಿದ್ದ ಟೂರ್ನಿಯು ಎರಡು ವಾರಾಂತ್ಯದ (ಸೆಪ್ಟೆಂಬರ್ 17–18 ಮತ್ತು 24–25) ದಿನಗಳಲ್ಲಿ ಎಸ್. ಮೇದಿಹಳ್ಳಿಯಲ್ಲಿ ನಡೆದಿತ್ತು. ಫೈನಲ್‌ನಲ್ಲಿ ಡಿಎಸ್–ಮ್ಯಾಕ್ಸ್ ಸ್ವತಂತ್ರ ತಂಡವು ಡಿಎಸ್ –ಮ್ಯಾಕ್ಸ್ ಸಂಕಲ್ಪ ತಂಡವನ್ನು ಮಣಿಸಿತು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್, ಪಿಲ್ಲರ್ ಫೈವ್, ಆರ್‌ಡಿ ಟಿಎಂಟಿ, ಶಶಾಂಕ್ ಇನ್‌ಫ್ರಾ ಪ್ರಾಜೆಕ್ಟ್, ಪ್ರೆಸಿಡೆಂಟ್ ಟಿಎಂಟಿ, ಟಿಜೆಎಸ್‌ಬಿ ಸಹಕಾರಿ ಬ್ಯಾಂಕ್, ಕ್ರಿಶ್ ವಿ. ಟೂರ್ನಿಯ ಪ್ರಾಯೋಜಕತ್ವ ವಹಿಸಿಕೊಂಡಿದ್ದವು.

ಬುರ್ಖಾ ಧರಿಸುತ್ತಿಲ್ಲ ಎಂದು ಪತ್ನಿ ಕೊಲೆ

ಮುಂಬೈ: ಬುರ್ಖಾ ಧರಿಸುವುದು ಸೇರಿದಂತೆ ಮುಸ್ಲಿಂ ಆಚರಣೆ ಪಾಲಿಸಲು ಒಪ್ಪದ ಅಂತರಧರ್ಮೀಯ ಪತ್ನಿಯನ್ನು ಟ್ಯಾಕ್ಸಿ ಚಾಲಕನೊಬ್ಬ ಸೋಮವಾರ ರಾತ್ರಿ ಇಲ್ಲಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ.

ರೂಪಾಲಿ ಅಲಿಯಾಸ್ ಝಾರಾ ಕೊಲೆಯಾದವರು. ಈಕೆಯ ಪತಿ ಇಕ್ಬಾಲ್ ಶೇಖ್‌ನನ್ನು ಪೊಲೀಸರು ಬಂಧಿಸಿದ್ದು, ಕೊಲೆ ಪ್ರಕರಣ ದಾಖಲಿಸಿದ್ದಾರೆ. ವಿವಾಹವಾದ ನಂತರ ಮಹಿಳೆ ಹೆಸರು ಬದಲಿಸಿಕೊಂಡಿದ್ದರು ಎಂದು ಎನ್‌ಡಿಟಿವಿ ವರದಿ ಮಾಡಿದೆ.

‘ದಂಪತಿ ಇತ್ತೀಚಿನ ವರ್ಷಗಳಲ್ಲಿ ಪ್ರತ್ಯೇಕವಾಗಿ ವಾಸವಿದ್ದರು. ಮಗ ಯಾರ ಜೊತೆಗಿರಬೇಕು ಎಂದು ವಾಗ್ವಾದವಾಗಿತ್ತು. ಪತ್ನಿ ಮುಸ್ಲಿಂ ಸಂಪ್ರದಾಯ ಪಾಲಿಸುತ್ತಿಲ್ಲ ಎಂಬ ಕೋಪವೂ ಇತ್ತು. ಆದ್ದರಿಂದ ಕೊಲೆ ಮಾಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

100 ದಿನದಲ್ಲಿ 5 ಕೋಟಿ ಆರೋಗ್ಯ ಕಾರ್ಡ್: ಸುಧಾಕರ್

ಮೈಸೂರು: ‘ಆಯುಷ್ಮಾನ್ ಭಾರತ್ ಹಾಗೂ ಆರೋಗ್ಯ ಕರ್ನಾಟಕ ಯೋಜನೆಯಡಿ 100 ದಿನಗಳಲ್ಲಿ ರಾಜ್ಯದ 5 ಕೋಟಿ ಜನರಿಗೆ ಆರೋಗ್ಯ ಕಾರ್ಡ್ ನೀಡಲು ನಿರ್ಧರಿಸಲಾಗಿದೆ’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಇಲ್ಲಿನ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿ ದಸರಾ ಪ್ರಯುಕ್ತ ಏರ್ಪಡಿಸಿದ್ದ ವೈದ್ಯಕೀಯ ವಸ್ತು ಪ್ರದರ್ಶನಕ್ಕೆ ಮಂಗಳವಾರ ಚಾಲನೆ ನೀಡಿ ಮಾತನಾಡಿದ ಅವರು, ‘15 ದಿನಗಳಲ್ಲಿ 85 ಲಕ್ಷ ಜನರಿಗೆ ಕಾರ್ಡ್ ವಿತರಿಸಲಾಗಿದೆ. ಒಮ್ಮೆ ಕಾರ್ಡ್ ಮಾಡಿಸಿದರೆ ಮೂರು ವರ್ಷಗಳವರೆಗೂ ಆರೋಗ್ಯ ಸೌಲಭ್ಯ ದೊರೆಯಲಿದ್ದು, ₹ 5 ಲಕ್ಷ ಚಿಕಿತ್ಸಾ ವೆಚ್ಚ ಭರಿಸಲಾಗುತ್ತದೆ. ಖಾಸಗಿ ಆಸ್ಪತ್ರೆಗಳಲ್ಲೂ ಚಿಕಿತ್ಸೆ ಪಡೆಯಬಹುದು’ ಎಂದರು.

‘ರಾಜ್ಯದ ಗ್ರಾಮೀಣ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇಲ್ಲ. ಕೊರೊನಾ ಕಾಲದಲ್ಲಿ ಕಲಿತ ಪಾಠದಿಂದಾಗಿ ಆರೋಗ್ಯ ಇಲಾಖೆಯಲ್ಲಿ ಸುಧಾರಣೆ ತರಲಾಗಿದೆ’ ಎಂದರು.

ಯುದ್ಧದ ಯುಗವಲ್ಲ –ಮೋದಿ ಮಾತಿಗೆ ಸಮ್ಮತವಿಲ್ಲ: ಅಮೆರಿಕ

ವಾಷಿಂಗ್ಟನ್ (ಪಿಟಿಐ): ‘ಇದು, ಯುದ್ಧ ನಡೆಸುವ ಯುಗವಲ್ಲ’ ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಹೇಳಿರುವುದನ್ನು ಅಮೆರಿಕ ಒಪ್ಪುವುದಿಲ್ಲ ಎಂದು ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಹೇಳಿದ್ದಾರೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಜೊತೆಗೂಡಿ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಈ ಮಾತು ಹೇಳಿರುವ ಅವರು, ‘ರಾಜತಾಂತ್ರಿಕ ಮಾರ್ಗದಿಂದ ಉಕ್ರೇನ್ ಜೊತೆಗಿನ ಸಂಘರ್ಷ ತಪ್ಪಿಸಲು ಅಮೆರಿಕ ಎಲ್ಲ ರೀತಿಯಲ್ಲಿ ಯತ್ನಿಸಿತ್ತು’ ಎಂದಿದ್ದಾರೆ.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಭಾರತದ ಪ್ರಧಾನಿ ಮಾತನ್ನು ನಿಜವಾಗಿ ಅನುಮೋದಿಸಲು ನಾನು ಬಯಸುತ್ತೇನೆ. ವಾಸ್ತವವಾಗಿ ಅವರು ಈಗಿನ ಸಂದರ್ಭವನ್ನು ಹೇಳಿದ್ದಾರೆ. ಅದರಾಚೆಗೆ ನಾವು ಹೆಚ್ಚಿನದನ್ನು ಒಪ್ಪುವುದಿಲ್ಲ ಎಂದರು.

ಈ ತಿಂಗಳ ಆರಂಭದಲ್ಲಿ ಶಾಂಘೈ ಸಹಕಾರ ಸಂಘಟನೆ ಶೃಂಗಸಭೆಯ ವೇಳೆ ಮೋದಿ ಅವರು, ‘ಪ್ರಜಾಪ್ರಭುತ್ವ, ಸಂಧಾನ ಮತ್ತು ರಾಜತಾಂತ್ರಿಕತೆ’ಯ ಮಹತ್ವ ಪ್ರತಿಪಾದಿಸಿದ್ದರು. ಪುಟಿನ್ ಅವರ ಜೊತೆಗಿನ ಭೇಟಿಯಲ್ಲಿ ‘ಇದು, ಯುದ್ಧದ ಯುಗವಲ್ಲ’ ಎಂದಿದ್ದರು.

‘ಪಾಕ್‌ಗೆ ಶಸ್ತ್ರಾಸ್ತ್ರ ಮಾರಾಟ ಸಮರ್ಥನೆ’: ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಮಾರಾಟ ಮಾಡುವ ಅಮೆರಿಕದ ಕ್ರಮವನ್ನು ಬ್ಲಿಂಕೆನ್ ಸಮರ್ಥಿಸಿಕೊಂಡರು. ಪಾಕ್‌ಗೆ ಎಫ್–16 ಯುದ್ಧವಿಮಾನ ಒದಗಿಸುವ ಕ್ರಮಕ್ಕೆ ಭಾರತ ಆಕ್ಷೇಪಿಸಿತ್ತು.

ಪಾಕಿಸ್ತಾನಕ್ಕೆ ಎಫ್–16 ಯುದ್ಧ ವಿಮಾನಗಳನ್ನು ಮಾರುವ ₹36.77 ಕೋಟಿ (450 ಮಿಲಿಯನ್‌ಡಾಲರ್) ಮೊತ್ತದ ವಹಿವಾಟಿಗೆ ಅಮೆರಿಕ ಕಳೆದ ಸೆಪ್ಟೆಂಬರ್‌ನಲ್ಲಿ ಅನುಮೋದನೆ ನೀಡಿತ್ತು.

ಇಂಧನ ದರ ಏರಿಕೆಯಿಂದ ಪ್ರಗತಿಗೆ ಪೆಟ್ಟು: ಎಸ್.ಜೈಶಂಕರ್

‘ಭಾರತ ಸದ್ಯ ₹1.63 ಲಕ್ಷ (2 ಸಾವಿರ ಡಾಲರ್) ತಲಾ ಆದಾಯವುಳ್ಳ ಆರ್ಥಿಕತೆ ದೇಶ. ಈಗ ಉಕ್ರೇನ್–ರಷ್ಯಾ ಯುದ್ಧದಿಂದ ಇಂಧನ ದರ ಏರುತ್ತಿರುವುದು ಭಾರತಕ್ಕೆ ತೊಡಕಾಗಿದೆ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಧನದ ಅಗತ್ಯವನ್ನು ಹೇಗೆ ಈಡೇರಿಸಿಕೊಳ್ಳಬೇಕು ಎಂಬುದೇ ಅಭಿವೃದ್ಧಿಶೀಲ ರಾಷ್ಟ್ರಗಳ ಈಗಿನ ಚಿಂತೆಯಾಗಿದೆ ಎಂದರು.

‘ಉಕ್ರೇನ್–ರಷ್ಯಾ ಯುದ್ಧವು ಯಾರೊಬ್ಬರ ಹಿತಾಸಕ್ತಿಯ ಪರವಾಗಿ ಇಲ್ಲ ಎಂಬುದು ಭಾರತದ ಸ್ಪಷ್ಟ ನಿಲುವು’ ಎಂದೂ ಪ್ರತಿಪಾದಿಸಿದರು.

ಅಶಿಸ್ತು: ಗೆಹಲೋತ್ ನಿಷ್ಠ ಮೂವರಿಗೆ ನೋಟಿಸ್

ಒಂದನೇ ಪುಟದಿಂದ...

ವೀಕ್ಷಕರು ಮಾಡಿದ್ದ ಶಿಫಾರಸು ಆಧರಿಸಿ ನೋಟಿಸ್ ನೀಡಿದ್ದು, ವೀಕ್ಷಕರ ವರದಿಯಲ್ಲಿ ಇದ್ದ ಅಂಶಗಳನ್ನು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ. ಗೆಹಲೋತ್ ಅವರ ಬಗ್ಗೆ ವರದಿಯಲ್ಲಿ ಏನನ್ನೂ ಹೇಳಿಲ್ಲ. ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಜತೆಗೆ ಗೆಹಲೋತ್ ದೂರವಾಣಿ ಮೂಲಕ ಮಾತನಾಡಿದ್ದು, ಬಂಡಾಯದಲ್ಲಿ ತಮ್ಮ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ ಎನ್ನಲಾಗಿದೆ.

ಈ ಮಧ್ಯೆ ಗೆಹಲೋತ್ ಅವರು ಮಂಗಳವಾರ ಸಚಿವರು ಸೇರಿದಂತೆ 25ಕ್ಕೂ ಅಧಿಕ ಶಾಸಕರ ಜತೆಗೆ ಜೈಪುರದಲ್ಲಿ ಮಾತುಕತೆ ನಡೆಸಿದ್ದಾರೆ. ಬಂಡಾಯ ಚಟುವಟಿಕೆ ಮುಂದುವರಿಸಬೇಡಿ ಎಂದು ಈ ಸಭೆಯಲ್ಲಿ ಗೆಹಲೋತ್ ಅವರು ಹೇಳಿದ್ದಾರೆ ಎನ್ನಲಾಗಿದೆ.

ಅಭ್ಯರ್ಥಿಯ ಆಯ್ಕೆಗಾಗಿ ಪಕ್ಷದ ಹಿರಿಯ ಮುಖಂಡರು ತಕ್ಷಣವೇ ದೆಹಲಿಗೆ ಬರಬೇಕು ಎಂದು ಸೂಚನೆ ನೀಡಲಾಗಿದೆ.

ಗೆಹಲೋತ್ ಅವರ ಸ್ಪರ್ಧೆ ಸಾಧ್ಯವಿಲ್ಲ ಎಂದಾದರೆ, ಮಲ್ಲಿಕಾರ್ಜುನ ಖರ್ಗೆ, ಮುಕುಲ್ ವಾಸ್ನಿಕ್, ದಿಗ್ವಿಜಯ್ ಸಿಂಗ್, ಸುಶೀಲ್ ಕುಮಾರ್ ಶಿಂದೆ, ಕಮಲನಾಥ್ ಮತ್ತು ಕುಮಾರಿ ಶೆಲ್ಜಾ ಅವರಲ್ಲಿ ಒಬ್ಬರನ್ನು ಕಣಕ್ಕೆ ಇಳಿಸುವ ಬಗ್ಗೆ ಚಿಂತನೆ ನಡೆದಿದೆ ಎನ್ನಲಾಗಿದೆ. ಅಭ್ಯರ್ಥಿ ಆಯ್ಕೆಯು ಬುಧವಾರವೇ ಅಂತಿಮವಾಗುವ ಸಾಧ್ಯತೆ ಇದೆ.

ಗೆಹಲೋತ್ ಮಂಗಳವಾರ ದೆಹಲಿಗೆ ಭೇಟಿ ಕೊಡಬೇಕಿತ್ತು. ಅವರು ಜೈಪುರದಲ್ಲಿಯೇ ಇದ್ದರು. ಆದರೆ, ರಾಜಸ್ಥಾನ ಕಾಂಗ್ರೆಸ್‌ನ ಪ್ರಮುಖ ಮುಖಂಡ ಸಚಿನ್ ಪೈಲಟ್ ಅವರು ಮಂಗಳವಾರ ದೆಹಲಿ ತಲುಪಿದ್ದಾರೆ.

ತಮ್ಮ ಮೂರ್ಖತನದ ಅರಿವು ಗೆಹಲೋತ್ ಅವರಿಗೆ ಆಗಿದೆ ಎಂಬುದು ನಾಯಕತ್ವಕ್ಕೆ ಮನದಟ್ಟಾಗಿದೆ ಎಂದು ಮೂಲಗಳು ಹೇಳಿವೆ. ಆದರೆ, ಈ ಬಂಡಾಯದಲ್ಲಿ ತಮ್ಮ ಪಾತ್ರ ಇಲ್ಲ ಎಂದು ಗೆಹಲೋತ್ ಹೇಳಿದ್ದನ್ನು ಹೈಕಮಾಂಡ್ ನಂಬಿಲ್ಲ.

ರಾಜಿ ಸೂತ್ರ ಏರ್ಪಟ್ಟರೆ, ಗೆಹಲೋತ್ ನಿಷ್ಠರಲ್ಲಿ ಮೂರು–ನಾಲ್ಕು ಮುಖಂಡರಿಗೆ ಎಚ್ಚರಿಕೆ ನೀಡಿ ಸುಮ್ಮನಾಗುವ ಸಾಧ್ಯತೆ ಇದೆ.

ನೋಟಿಸ್‌ನಲ್ಲೇನಿದೆ?

‘ಬಹಿರಂಗ ಹೇಳಿಕೆ ನೀಡಿರುವುದರ ಜೊತೆಗೆ, ಪರ್ಯಾಯವಾಗಿ ಸಭೆ ನಡೆಸಿರುವುದು ಅಶಿಸ್ತು. ಶಾಸಕರು ಸಿಎಲ್‌ಪಿ ಸಭೆಗೆ ತೆರಳದಂತೆ ಒತ್ತಡ ಹೇರಿದ್ದೀರಿ. ಸಂಸದೀಯ ಸಚಿವರಾಗಿ ಅನಧಿಕೃತವಾಗಿ ಸಭೆ ನಡೆಸಿದ್ದರಿಂದ ಶಾಸಕರಿಗೆ ಗೊಂದಲವಾಯಿತು’ ಎಂದು ಧರಿವಾಲ್ ಅವರಿಗೆ ನೀಡಿದ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಮುಖ್ಯ ಸಚೇತಕ ಮಹೇಶ್ ಜೋಶಿ ಅವರಿಗೆ ನೀಡಿದ ನೋಟಿಸ್‌ನಲ್ಲಿ, ‘ನೀವು ಎರಡು ರೀತಿ ಅಶಿಸ್ತು ತೋರಿದ್ದೀರಿ. ಮೊದಲನೆಯದು ಸಿಎಲ್‌ಪಿ ಸಭೆಗೆ ಬಹಿಷ್ಕಾರ, ಎರಡನೆಯದು ಪಕ್ಷವು ನಿಯೋಜಿಸಿದ್ದ ವೀಕ್ಷಕರು ಸಿಎಲ್‌ಪಿ ಸಭೆಗಾಗಿ ಕಾಯುತ್ತಿರುವಾಗಲೇ ಪರ್ಯಾಯವಾಗಿ ಬೇರೊಂದು ಸಭೆ ನಡೆಸಿದ್ದೀರಿ’ ಎಂದು ತಿಳಿಸಲಾಗಿದೆ. ರಾಠೋಡ್ ಅವರಿಗೆ ನೀಡಿದ್ದ ನೋಟಿಸ್‌ನಲ್ಲಿ ‘ಪರ್ಯಾಯ ಸಭೆ ಆಯೋಜಿಸಲು ಅಗತ್ಯ ನೆರವು ನೀಡಿದ್ದೀರಿ’ ಎನ್ನಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಗೆಹಲೋತ್ ನಾಮಪತ್ರ ಸಲ್ಲಿಸಲಿದ್ದಾರೆ ಎಂಬ ಹಿನ್ನೆಲೆಯಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆಗೆ ಭಾನುವಾರ ಸಿಎಲ್‌ಪಿ ಸಭೆ ನಡೆಯಬೇಕಿತ್ತು. ಅದೇ ದಿನ ಧರಿವಾಲ್ ನಿವಾಸದ ಬಳಿ ಗೆಹಲೋತ್‌ಗೆ ನಿಷ್ಠರಾಗಿದ್ದ 90 ಶಾಸಕರು ಸಭೆ ಸೇರಿದ್ದರು. ಮುಖ್ಯಮಂತ್ರಿ ಸ್ಥಾನಕ್ಕೆ ಸಚಿನ್ ಪೈಲಟ್ ಆಯ್ಕೆ ಮಾಡಬಾರದು ಎಂದು ಒತ್ತಡ ಹೇರುವುದು ಸಭೆಯ ಉದ್ದೇಶವಾಗಿತ್ತು. ಅದೇ ದಿನ ವೀಕ್ಷಕರಾಗಿ ರಾಜ್ಯಕ್ಕೆ ಬಂದಿದ್ದ ಮಲ್ಲಿಕಾರ್ಜುನ ಖರ್ಗೆ, ಅಜಯ್ ಮಾಕನ್ ಅವರನ್ನೂ ಭೇಟಿಯಾಗಲು ಈ ಶಾಸಕರು ನಿರಾಕರಿಸಿದ್ದರು.

ನಾಮಪತ್ರ ಪಡೆದ ಬನ್ಸಾಲ್

ಕಾಂಗ್ರೆಸ್ ಪಕ್ಷದ ಖಜಾಂಚಿ ಪವನ್ ಬನ್ಸಾಲ್ ಅವರು ಅಧ್ಯಕ್ಷೀಯ ಚುನಾವಣೆಯ ಎರಡು ನಾಮಪತ್ರಗಳನ್ನು ತೆಗೆದುಕೊಂಡಿದ್ದಾರೆ. ಇದು, ನೆಹರೂ–ಗಾಂಧಿ ಕುಟುಂಬದ ಬೆಂಬಲಿತ ಅಭ್ಯರ್ಥಿ ಯಾರು ಎಂಬ ಕುತೂಹಲವನ್ನು ಹೆಚ್ಚಿಸಿದೆ. ರಾಜಸ್ಥಾನದಲ್ಲಿ ನಡೆದ ಬಂಡಾಯದಿಂದಾಗಿ ಅಶೋಕ್ ಗೆಹಲೋತ್ ಅವರು ಅಭ್ಯರ್ಥಿಯಾಗುವುದರ ಕುರಿತು ಇನ್ನೂ ಯಾವುದೇ ಸ್ಪಷ್ಟತೆ ಸಿಕ್ಕಿಲ್ಲ. ಆದರೆ ಸಾಧ್ಯತೆ ಕ್ಷೀಣವಾಗಿದೆ.

ನಗರದಲ್ಲಿ ಇಂದು

ಜಿಲ್ಲಾಮಟ್ಟದ ಕಬಡ್ಡಿ ಪಂದ್ಯಾವಳಿ ಉದ್ಘಾಟನಾ ಸಮಾರಂಭ: ಎಲ್.ಎ. ರವಿಸುಬ್ರಮಣ್ಯ, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿಗಳು: ಎ. ಆನಂದ್ ರಾಜ್, ಆಯೋಜನೆ: ಪದವಿ ಪೂರ್ವ ಶಿಕ್ಷಣ ಇಲಾಖೆ, ಪಿ.ಇ.ಎಸ್. ಪದವಿ ಪೂರ್ವ ಕಾಲೇಜು, ಸ್ಥಳ: ಶಂಕರ್‌ನಾಗ್ ಆಟದ ಮೈದಾನ, ವಿದ್ಯಾಪೀಠ ವೃತ್ತ, ಬೆಳಿಗ್ಗೆ 9.30

ರಜತ ಮಹೋತ್ಸವ, ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೊಥೆರಪಿ ಹಾಗೂ ಕೆಂಗಲ್ ಹನುಮಂತಯ್ಯ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೊಥೆರಪಿ ಪದವಿ ದಿನಾಚರಣೆ: ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಡಾ.ಸವಿತಾ ರವೀಂದ್ರ, ಆಯೋಜನೆ: ರಾಜ್ಯ ಒಕ್ಕಲಿಗರ ಸಂಘ, ಸ್ಥಳ: ಕುವೆಂಪು ಕಲಾಕ್ಷೇತ್ರ, ಬೆಳಿಗ್ಗೆ 10.30

ಹುಣಸಗಹಳ್ಳಿ ಜಯದೇವ ರಚಿಸಿರುವ ‘ಮಾತೃ ಮಹಿಮೆ’ ಚಿತ್ರಗಳ ಪ್ರದರ್ಶನ: ಉದ್ಘಾಟನೆ: ವೀರನಾರಾಯಣ ಪಾಂಡುರಂಗಿ, ಅತಿಥಿಗಳು: ಚಂದ್ರನಾಥ ಆಚಾರ್ಯ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ವಿಶ್ವ ರೇಬೀಸ್ ದಿನ: ಉದ್ಘಾಟನೆ: ಉಪಮನ್ಯು ಬಸು, ಅತಿಥಿಗಳು: ಸಲ್ಮಾ ಕೆ., ಕೆ.ಸಿ. ವೀರಣ್ಣ, ಉಪಸ್ಥಿತಿ: ಸಿಮ್ಮಿ ತಿವಾರಿ, ಅಧ್ಯಕ್ಷತೆ: ಡಾ.ಸತ್ಯನಾರಾಯಣ್ ಕೆ., ಆಯೋಜನೆ: ಪಶು ವೈದ್ಯಕೀಯ ಮತ್ತು ಹೈನುಗಾರಿಕೆ ಇಲಾಖೆ, ಸ್ಥಳ: ಕರ್ನಾಟಕ ಪಶು ವೈದ್ಯಕೀಯ ಪರಿಷತ್ ಸಭಾಂಗಣ, ಹೆಬ್ಬಾಳ, ಬೆಳಿಗ್ಗೆ 11.30

ವಿಶ್ವ ಪ್ರವಾಸೋದ್ಯಮ ದಿನಾಚರಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಪ್ರವಾಸೋದ್ಯಮ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಮಧ್ಯಾಹ್ನ 12.30

‘ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಕ್ಷೇತ್ರದಲ್ಲಿ ಸುಸ್ಥಿರತೆ ಮತ್ತು ಸ್ಥಿತಿಸ್ಥಾಪಕತ್ವದ ಸವಾಲುಗಳು’ ಕುರಿತು ವಿಚಾರಸಂಕಿರಣ: ಉದ್ಘಾಟನೆ: ಮನಮೋಹನ ಕಲಗಾಲ್, ಅತಿಥಿಗಳು: ಐಜಾಜ್ ಹುಸೇನ್, ಆಯೋಜನೆ ಮತ್ತು ಸ್ಥಳ: ದಯಾನಂದ್ ಕಾಲೇಜ್ ಆಫ್ ಎಂಜಿನಿಯರಿಂಗ್, ಸಂಜೆ 4.30

ನವೀಕೃತ ಇ.ಎಸ್.ವಿ. ಸಭಾಂಗಣ ಪ್ರವೇಶ ಸಮಾರಂಭ: ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5

ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಸಿ.ಎಸ್. ಷಡಾಕ್ಷರಿ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಸ್ಥಳ: ಕಬ್ಬನ್ ಉದ್ಯಾನ, ಸಂಜೆ 6

‘ಗುಂಡು ಬಳಗ’ ನಾಟಕ ಪ್ರದರ್ಶನ: ಉದ್ಘಾಟನೆ: ಮೊಹಮ್ಮದ್ ಮುನಾಫ್, ಅಧ್ಯಕ್ಷತೆ: ಶ್ರೀನಾಥ್, ಅತಿಥಿಗಳು: ಬಿ. ಶಾಂತಕುಮಾರ್, ನಿರ್ದೇಶನ: ಬೇಲೂರು ಕೃಷ್ಣಮೂರ್ತಿ, ಆಯೋಜನೆ: ಹರ್ಷ ಕಲಾವಿದರು, ಸ್ಥಳ: ಲಾಸ್ಯ ರಂಜನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6

ದಾಸವಾಣಿ-ಭರತನಾಟ್ಯ ಪ್ರದರ್ಶನ: ದಾಸವಾಣಿ: ಭೂಮಿಕಾ.ಎಸ್. ಕುಂದಗೋಡು, ಅನ್ವಿತಾ ಸಾವಿತ್ರಿ, ಭರತನಾಟ್ಯ ಪ್ರದರ್ಶನ: ದಿಯಾ ಉದಯ್ ಶೃಂಗೇರಿ, ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಿ ಅಮ್ಮನವರ ದೇವಸ್ಥಾನ, ಮಲ್ಲೇಶ್ವರ, ಸಂಜೆ 6

ನಾಟಕೋತ್ಸವದ ಉದ್ಘಾಟನೆ: ಅತಿಥಿಗಳು: ಶ್ರೀನಿವಾಸ.ಜಿ. ಕಪ್ಪಣ್ಣ, ವೀಣಾ ಶರ್ಮ, ಬಿ. ನೀಲಮ್ಮ, ದೇವನೂರ ಮಹಾದೇವ ಅವರ ಕಥಾಲೋಕ ನಾಟಕ ‘ಸಂಬಂಜ ಅನ್ನೋದು ದೊಡ್ದದು ಕನಾ’ ಪ್ರದರ್ಶನ: ಪ್ರಸ್ತುತಿ: ಜನಮನ ಸಾಂಸ್ಕೃತಿಕ ಸಂಘಟನೆ, ರಂಗರೂಪ: ರಾಜಪ್ಪ ದಳವಾಯಿ, ನಿರ್ದೇಶನ: ಎಚ್. ಜನಾರ್ದನ, ಆಯೋಜನೆ: ಭಾಗವತರು, ಸ್ಥಳ: ಸಮುಚ್ಚಯ ಸಭಾಂಗಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15, ಉದ್ಘಾಟನೆ: 6.30

ನವರಾತ್ರಿ ವಿಶೇಷ ಹೋಮ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಪ್ಲಾಟ್‌ಫಾರಂ ರಸ್ತೆ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30

ನವರಾತ್ರಿ ಉತ್ಸವ: ದೇವಿಗೆ ಮೀನಾಕ್ಷಿ ಅಲಂಕಾರ, ಭಜನೆ: ರಶ್ಮಿ ತಂಡದವರಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಸ್ಥಳ: ಕೃಷ್ಣರಾಜಪುರ, ಸಂಜೆ 6




ನವರಾತ್ರಿ ಸಂಗೀತ ನೃತ್ಯೋತ್ಸವ: ಪ್ರಸ್ತುತಿ: ನಾಟ್ಯಾಂತರಂಗ ಕಲಾವಿದರಿಂದ ಕಥಕ್ ಹಾಗೂ ಭರತನಾಟ್ಯ, ನಿರ್ದೇಶನ: ಶುಭಾ ಧನಂಜಯ್, ಸ್ಥಳ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30

ನವರಾತ್ರಿ ಉತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ಪ್ರಸ್ತುತಿ: ಸುಷ್ಮಾ ಸಂತೋಷ್ ಮತ್ತು ತಂಡದವರಿಂದ, ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ, ಸ್ಥಳ: ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ಶರನ್ನವರಾತ್ರಿ ಉತ್ಸವ: ದೇವಿಗೆ ನವಧಾನ್ಯ ಅಲಂಕಾರ, ಆಯೋಜನೆ: ಯಲ್ಲಮ್ಮದೇವಿ ದೇವಾಲಯ, ಸ್ಥಳ: ದೇಶದಪೇಟೆ ರಸ್ತೆ, ಯಲಹಂಕ

ಶರನ್ನವರಾತ್ರಿ ಉತ್ಸವ: ದೇವಿಗೆ ಉಮಾ ಮಹೇಶ್ವರಿ ಅಲಂಕಾರ, ಆಯೋಜನೆ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಸ್ಥಳ: ಚಿಕ್ಕದೇವಸಂದ್ರ, ಕೃಷ್ಣರಾಜಪುರ



ಏನೆಂದು ಹೆಸರಿಡಲಿ?

ಒಂದು ತಂತ್ರಜ್ಞಾನದ ಉತ್ಪತ್ತಿಗೆ 'ಶುಂಠಿ ಕಾಪಿ' ಎಂದೋ, 'ಏಲಕ್ಕಿ ಚಾ' ಎಂದೋ ಹೆಸರಿಟ್ಟರೆ ಯಾರಾದರೂ ನಕ್ಕಾರು. ಆದರೆ ಜಾವಾ ಎಂಬ ಪ್ರೋಗ್ರಾಮಿಂಗ್ ಭಾಷೆಯ ಹೆಸರು ಬಂದದ್ದು 'ಜಾವಾ' ಎಂಬ ಒಂದು ತರಹದ ಕಾಫಿಯಿಂದಲೇ!

ಶರತ್ ಭಟ್ ಸೇರಾಜೆ

'ಹೆಸರಲ್ಲೇನಿಲ್ಲ? ಸೃಷ್ಟಿ ಏನು, ಯಾರೂ ಮಾಡಬಹುದು. ಆದರೆ ಹೆಸರಿಡುವುದು ಮಾತ್ರ ಬಹು ದೊಡ್ಡ ಕೆಲಸ. 300 ಪುಟಗಳ ಪುಸ್ತಕವೊಂದನ್ನು ಮೂರೇ ರಾತ್ರಿಗಳಲ್ಲಿ ಬರೆದು ಮುಗಿಸಿದ ಸ್ಫೂರ್ತಿಯ ಮೂರ್ತಿಯೊಬ್ಬರು, ಆ ಗ್ರಂಥಕ್ಕೆ ಹೆಸರು ಹುಡುಕಲು ಮೂರು ತಿಂಗಳು ತಿಣಿಕಿ, ಕಡೆಗೆ 'ಮೂರುನೂರು ಪುಟಗಳು' ಎಂದೇ ಹೆಸರಿಕ್ಕಿದರಂತೆ, ರೈಲ್ವೆ ಗೈಡಿನಂತಹ ತಮ್ಮ ಹಿರಿ ಹೊತ್ತಗೆಗೆ' ಎಂಬ ಬೀಚಿಯವರ ಮಾತು ತಂತ್ರಜ್ಞಾನದ ಉತ್ಪನ್ನಗಳಿಗೂ ಎಷ್ಟೋ ಸಲ ಅನ್ವಯಿಸುವುದಿದೆ.

ಈಗ ಗೂಗಲ್ ಎಂಬ ಹೆಸರನ್ನೇ ತೆಗೆದುಕೊಳ್ಳಿ. ಇದು 'Googol' ಎಂಬ ಪದದ ಸ್ಪೆಲ್ಲಿಂಗ್ ಅನ್ನು ಬದಲಾಯಿಸಿ ಕಟ್ಟಲ್ಪಟ್ಟಿರುವ ಹೊಸ ಪದ. Googol ಪದವನ್ನು ನಾನು ನಿಜವಾಗಿಯೂ ಮೊದಲು ನೋಡಿದ್ದು ಶಕುಂತಲಾದೇವಿಯವರ ಪುಸ್ತಕವೊಂದರಲ್ಲಿ; ಏಕೆಂದರೆ ಒಂದರ ಮುಂದೆ ನೂರು ಸೊನ್ನೆಗಳನ್ನು ಸೇರಿಸಿದರೆ ಸಿಗುವ ಸಂಖ್ಯೆಗೆ Googol ಎಂದು ಹೆಸರು. ಇಂಥದ್ದೊಂದು ಮಾರುದ್ದದ ಸಂಖ್ಯೆ ಶಕುಂತಲಾದೇವಿಯವರ ಪುಸ್ತಕದಲ್ಲಲ್ಲದೆ ಮತ್ತೆಲ್ಲಿ ಸಿಗಬೇಕು? ಗಣಿತಪ್ರಿಯರಾಗಿದ್ದ ಗೂಗಲ್ಲಿನ ಸಂಸ್ಥಾಪಕರು ಅಷ್ಟು ದೊಡ್ಡ ಪ್ರಮಾಣದ ಮಾಹಿತಿ ನಮ್ಮಲ್ಲಿ ಸಿಗುತ್ತದೆ ಎಂಬರ್ಥ ಬರುವಂತೆ ತಮ್ಮ ಸಂಸ್ಥೆಗೆ ಆ ಹೆಸರನ್ನಿಟ್ಟರು. ಅಮೆರಿಕಾದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ವಿವರಗಳನ್ನು ತಿಳಿಸುವ ಕೈಪಿಡಿಯಂತಹ ಪುಸ್ತಕವನ್ನು ಎಲ್ಲರಿಗೂ ಕೊಡುತ್ತಿದ್ದರಂತೆ, ಅದರಲ್ಲಿ ವಿದ್ಯಾರ್ಥಿಯ ಚಿತ್ರ, ಒಂದಷ್ಟು ಪ್ರಾಥಮಿಕ ವಿವರಗಳು ಎಲ್ಲ ಇರುತ್ತಿದ್ದವು, ಆ ಪುಸ್ತಕಕ್ಕೆ ಇದ್ದ ಹೆಸರು - 'ಫೇಸ್ ಬುಕ್'. ಇಂಥ ಪುಸ್ತಕವೊಂದರ ಆನ್‌ಲೈನ್ ಆವೃತ್ತಿಯಾಗಿ ಬಂದದ್ದರಿಂದ ಆ ಜಾಲತಾಣಕ್ಕೂ ಅದೇ ಹೆಸರಿಡಲಾಯಿತು. 'ಹುಟ್ಟುಹೆಸರು ಸುಟ್ಟರೂ ಹೋಗದು' ಎಂಬ ಮಾತನ್ನು ನಾವಿನ್ನು ಚಾಲ್ತಿಗೆ ತರಬಹುದು.

'ವೈರಲ್ ಆಗುವುದು' ಎಂದರೆ 'ವೈರಸ್' ಎಂಬ ಸೂಕ್ಷ್ಮರೋಗಾಣು ಹಬ್ಬಿದಂತೆ ಹಬ್ಬುವುದು ಎಂದರ್ಥ. ಕೋವಿಡ್‌ನ ಕಾಲದಲ್ಲಿ ಬೇಕಾದರೆ ಈ ಉಪಮೆಯನ್ನು ಉಲ್ಟಾ ಮಾಡಿ, ಯುಟ್ಯೂಬಿನ ವಿಡಿಯೊವೊಂದು ವೈರಲ್ ಆಗುವಂತೆ ಕೋವಿಡ್ ರೋಗ ಹಬ್ಬಿತು ಎಂದಿದ್ದರೂ ನಡೆಯುತ್ತಿತ್ತೇನೋ! ಯಾವುದಾದರೂ ವಿಚಾರವೋ ಕಲ್ಪನೆಯೋ ಜನರಿಂದ ಜನರಿಗೆ ವೈರಲ್ ಆಗಿ ಹರಡುವುದನ್ನು ಸೂಚಿಸಲಿಕ್ಕೆ ಪ್ರಸಿದ್ಧ ವಿಚಾರವಾದಿ, ವಿಜ್ಞಾನಿ, ಲೇಖಕ ರಿಚರ್ಡ್ ಡಾಕಿನ್ಸ್ ಬಳಸಿದ ಪದ 'meme'. ಅದು ಹೇಗೋ ಬೇರೆಯೇ ಅರ್ಥಕ್ಕೆ ತಿರುಗಿ, ಈಗ ಆ ಪದದ ಮೂಲಾರ್ಥವನ್ನು ಯುವಜನತೆಗೆ ತಿಳಿಸಲಿಕ್ಕೆ ಯಾರಾದರೂ ಟ್ರಾಲ್ ಪೇಜಿನವರು ತಯಾರಿಸಿದ meme ಅನ್ನೇ ಬಳಸಬೇಕಾದೀತೋ ಏನೋ!

ನಮ್ಮಲ್ಲಿ ಮೊದಮೊದಲು ರೇಡಿಯೋ ಬಂದಾಗ, ಅದಕ್ಕೊಂದು ನಮ್ಮೂರಿನ ಪದ ಬೇಕಾಗಿತ್ತು. ಆಗ 'ಆಕಾಶವಾಣಿ' ಎಂಬ ಸುಂದರವಾದ ಪದವನ್ನು ಸೂಚಿಸಿದ್ದು ವಿದ್ವಾಂಸರಾಗಿದ್ದ ರಾಳ್ಳಪಲ್ಲಿ ಅನಂತ ಕೃಷ್ಣಶರ್ಮರು. ಎಷ್ಟೊಳ್ಳೆಯ ಹೆಸರು. ಪುರಾಣಗಳ ಅಶರೀರವಾಣಿಯ ಕಲ್ಪನೆಯನ್ನೂ ನೆನಪಿಗೆ ತರುವ ಹೆಸರು. ಛಾಯಾಗ್ರಹಣ ಎಂದರೆ ನೆರಳನ್ನು ಹಿಡಿದಿಡುವುದು ಎಂದು ಅರ್ಥ. ಬೆಳಕನ್ನೂ ನೆರಳನ್ನೂ ಹಿಡಿಯುವುದೇ ಕ್ಯಾಮೆರಾ ಹಿಡಿದವನ ಕೆಲಸ, ಆದ್ದರಿಂದ ಸಿನೆಮಾಟೋಗ್ರಫಿ ಎಂಬ ಪ್ರಯೋಗಕ್ಕಿಂತ 'ಛಾಯಾಗ್ರಹಣ'ವೇ ಅರ್ಥಪೂರ್ಣವಾದ ಸಂಜ್ಞೆ ಎಂದು ಛಾಯಾಗ್ರಾಹಕ ಜಿ. ಎಸ್. ಭಾಸ್ಕರ್ ಒಂದು ಸಲ ಹೇಳಿದ್ದರು. ಆದರೆ ಎಲ್ಲ ಹೆಸರುಗಳೂ ಹೀಗೆ ಅರ್ಥಪೂರ್ಣವಾಗಿರುತ್ತವೆ ಎಂದೇನಿಲ್ಲ.

ಒಂದು ತಂತ್ರಜ್ಞಾನದ ಉತ್ಪತ್ತಿಗೆ 'ಶುಂಠಿ ಕಾಪಿ' ಎಂದೋ, 'ಏಲಕ್ಕಿ ಚಾ' ಎಂದೋ ಹೆಸರಿಟ್ಟರೆ ಯಾರಾದರೂ ನಕ್ಕಾರು. ಆದರೆ ಜಾವಾ ಎಂಬ ಪ್ರೋಗ್ರಾಮಿಂಗ್ ಭಾಷೆಯ ಹೆಸರು ಬಂದದ್ದು 'ಜಾವಾ' ಎಂಬ ಒಂದು ತರಹದ ಕಾಫಿಯಿಂದಲೇ! ಜಾವಾದಂತೆ 'ಜಾವಾಸ್ಕ್ರಿಪ್ಟ್' ಅಂತಲೂ ಒಂದು ಪ್ರೋಗ್ರಾಮಿಂಗ್ ಭಾಷೆಯಿದೆ. ಇದಕ್ಕೆ ಮೊದಲು 'ECMAScript' ಎಂಬ ಹೆಸರಿಡುವ ಯೋಚನೆಯಿತ್ತಂತೆ; ಇದು ಚರ್ಮರೋಗವೊಂದರ ಹೆಸರಿನಂತಿದೆ, ಎಂದು ಅದರ ನಿರ್ಮಾತೃ ಗೇಲಿ ಮಾಡಿದ್ದ. ಹೇಗೂ ಜನಪ್ರಿಯವಾಗಿದ್ದ ಜಾವಾದಂತೆ ಕೇಳಿಸಲಿ ಎಂಬ ವ್ಯಾಪಾರೀ ತಂತ್ರದಿಂದ ಆಮೇಲೆ ಇದಕ್ಕೆ 'ಜಾವಾಸ್ಕ್ರಿಪ್ಟ್' ಎಂಬ ನಾಮಕರಣವಾಯಿತು; ನಿಜವಾಗಿ ಇದು ಜಾವಾದಿಂದ ಸಂಪೂರ್ಣ ಬೇರೆಯೇ ತರಹದ್ದಾದ ಭಾಷೆಯಾದರೂ! ಇನ್ನು 'ವೈಫೈ'ಗೆ ಹಾಗ್ಯಾಕೆ ಹೆಸರಿಟ್ಟರು ಎಂದು ಯಾರಾದರೂ ಕೇಳಿದರೆ, 'ಅಷ್ಟೂ ಗೊತ್ತಿಲ್ವೇ? ಅದು ವಯರ್ಲೆಸ್ ಫಿಡೆಲಿಟಿ ಎಂಬುದರ ಹ್ರಸ್ವರೂಪ' ಅಂದುಬಿಡುತ್ತಿದ್ದೆ ಒಂದು ಕಾಲದಲ್ಲಿ. ಅನಂತರ ಗೊತ್ತಾದ ವಿಷಯ ಏನೆಂದರೆ, ಇದು ಯಾವ ಅರ್ಥವೂ ಇಲ್ಲದ ಹೆಸರಾಗಿತ್ತು. 'IEEE 802' ಅಂತೇನೋ ವಿಜ್ಞಾನಿಗಳಿಗೆ ಮಾತ್ರ ಅರ್ಥ ಆಗಬಹುದಾದ ಹೆಸರಿಡುವ ಬದಲು ಏನಾದರೂ ಆಕರ್ಷಕವಾದ ನಾಮಧೇಯವೇ ಇರಲಿ ಎಂಬ ನಿಟ್ಟಿನಲ್ಲಿ ಯೋಚನೆ ಮಾಡಿದಾಗ ಹೊಳೆದದ್ದು 'ಹೈಫೈ' ಎಂಬುದಕ್ಕೆ ಪ್ರಾಸ ಸರಿಹೊಂದುವ ವೈಫೈ ಎಂಬ ಪದ. ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ, ಅಷ್ಟೇ!

'ಬ್ಲೂಟೂತ್' ಎಂದರೆ ನೀಲಿಬಣ್ಣದ ಹಲ್ಲು ಎಂಬರ್ಥವಲ್ಲವೇ? ಮತ್ತೆ ಬ್ಲೂಟೂತಿಗೆ ಯಾಕೆ ಆ ಅಭಿಧಾನ? ಬ್ಲೂಟೂತನ್ನು ವಿನ್ಯಾಸ ಮಾಡಿದ ಪುಣ್ಯಾತ್ಮ ಆ ಕಾಲದಲ್ಲಿ ವೈಕಿಂಗುಗಳ ಇತಿಹಾಸದ ಬಗ್ಗೆ ಯಾವುದೋ ಪುಸ್ತಕ ಓದುತ್ತಿದ್ದನಂತೆ. ಅದರಲ್ಲಿ ಹರಾಲ್ಡ್ ಎಂಬ ಹತ್ತನೆಯ ಶತಮಾನದ ರಾಜನೊಬ್ಬನ ಹೆಸರು ಬಂದಿತ್ತಂತೆ. ಅವನು ಯೂರೋಪಿನ ಒಂದಷ್ಟು ಭಾಗಗಳನ್ನು ಸಂಘಟಿಸಿ ಒಂದಾಗಿಸುವ ಕೆಲಸದಲ್ಲಿ ಯಶಸ್ವಿಯಾಗಿದ್ದನಂತೆ, ಆ ಆಸಾಮಿಗೆ ಇದ್ದ ಅಡ್ಡಹೆಸರೇ ಬ್ಲೂಟೂತ್! ಅದ್ಯಾಕೆ ಅಂಥ ಅಡ್ಡ ಹೆಸರೋ ದೇವರೇ ಬಲ್ಲ. 'ಅವನ ಒಂದು ಹಲ್ಲು ಹುಳುಕಾಗಿ ನೀಲಿಬಣ್ಣಕ್ಕೆ ತಿರುಗಿತ್ತಂತೆ'. 'ಅವನು ಸಿಕ್ಕಾಬಟ್ಟೆ ಬ್ಲೂಬೆರಿ ಹಣ್ಣುಗಳನ್ನು ತಿನ್ನುತ್ತಿದ್ದನಂತೆ' ಮುಂತಾದ ಕಥೆಗಳು ಅಂತರ್ಜಾಲದಲ್ಲಿ ಸಿಗುತ್ತವೆ. ನನಗಂತೂ ಇವೆರಡನ್ನೂ ನಂಬುವುದು ಕಷ್ಟ ಎನಿಸಿತು. ಏನೇ ಇದ್ದರೂ ಅವನಿಗೆ 'ಬ್ಲೂಟೂತ್' ಎಂಬ ಅಡ್ಡಹೆಸರಿದ್ದದ್ದಂತೂ ಹೌದು.

ಬೀಚಿಯವರು ಸರಿಯಾಗಿಯೇ ಹೇಳಿದ್ದರು: ಸೃಷ್ಟಿ ಏನು, ಯಾರೂ ಮಾಡಬಹುದು. ಆದರೆ ಹೆಸರಿಡುವುದು ಮಾತ್ರ ಬಹು ದೊಡ್ಡ ಕೆಲಸ! ❖



'ಮೌಸ್' ಎಂದರೆ ಇಲಿಯಲ್ಲವೇ?

ಲ್ಯಾಪ್ ಟಾಪಿನ ಪಕ್ಕದಲ್ಲಿ ಕೂತುಕೊಳ್ಳುವ ಉಪಕರಣಕ್ಕೇಕೆ ಈ ನಾಮ? ಅದು ನೋಡಲು ಆಕಾರದಲ್ಲಿ ಇಲಿಯಂತೆ ಕಾಣುತ್ತದೆ, ಅದರಿಂದ ಹೊರಡುವ ವಯರು ಬಾಲದಂತೆ ಗೋಚರಿಸುತ್ತದೆ ಎಂಬುದು ಒಂದು ವಿವರಣೆ. ಆದರೆ ಸ್ವಲ್ಪ ಸಂಶೋಧನೆ ಮಾಡಿದವರು ಬೇರೆಯೇ ಕಥೆ ಹೇಳುತ್ತಾರೆ. ಮೌಸನ್ನು ಮೂಲದಲ್ಲಿ ವಿನ್ಯಾಸ ಮಾಡಿದವರು ಅದಕ್ಕೆ ನಾಮಕರಣವೇ ಮಾಡಿರಲಿಲ್ಲವಂತೆ. ಮೌಸಿನ ಸೃಷ್ಟಿಕರ್ತರಲ್ಲಿ ಒಬ್ಬರ ಜೊತೆ ಕೆಲಸ ಮಾಡಿದ್ದ ರೋಜರ್ ಬೇಟ್ಸ್ ಎಂಬವರು ಹೇಳುವಂತೆ, ಆ ಕಾಲದಲ್ಲಿ, ಪರದೆಯಲ್ಲಿ ಓಡಾಡುವ ಕರ್ಸರಿಗೆ 'ಅಂಖಿ' ಎಂಬ ಹೆಸರಿತ್ತಂತೆ. ಅದು ಈ ಉಪಕರಣವನ್ನು ಓಡಿಸಿದಂತೆ ಕಾಣುತ್ತದಾದ್ದರಿಂದ ಇದನ್ನು 'ಮೌಸ್' ಎನ್ನಲಾಯಿತಂತೆ. ಹಾಗಾದರೆ, 'ಕರ್ಸರಿಗೆ ಅಂಖಿ ಎಂಬ ಹೆಸರೇಕೆ ಇತ್ತು' ಎಂಬ ಪ್ರಶ್ನೆಗೆ ಮಾತ್ರ, 'ಮರೆತುಹೋಗಿದೆ' ಎಂಬುದೇ ಅವರ ಉತ್ತರವಾಗಿದೆ!



ಬರುತ್ತಿದೆ 5ಜಿ...

ಅವಿನಾಶ್ ಬಿ.

5ನೇ ಪೀಳಿಗೆಯ ನೆಟ್‌ವರ್ಕ್ ತಂತ್ರಜ್ಞಾನ '5ಜಿ'ಗೆ ಭಾರತವು ಅಕ್ಟೋಬರ್ ತಿಂಗಳಾರಂಭದಲ್ಲಿ ತೆರೆದುಕೊಳ್ಳುತ್ತಿದೆ. 5ಜಿ ಬಂದರೆ ನಮ್ಮ ಹಳೆಯ ಫೋನನ್ನು ಏನು ಮಾಡುವುದು ಎಂಬ ಆತಂಕ ಒಂದೆಡೆಯಾದರೆ, 5ಜಿ ನೆಟ್‌ವರ್ಕ್ ಹೇಗೆ ಕೆಲಸ ಮಾಡಬಹುದು ಎಂಬ ಕುತೂಹಲ ಮತ್ತೊಂದು ಕಡೆ. ನಮ್ಮ ದೇಶದಲ್ಲಿ 5ಜಿ ಜಾಲವು ಸಾರ್ವಜನಿಕರಿಗೆ ಹಂತಹಂತವಾಗಿ ಲಭ್ಯವಾಗಲಿದೆ. ಈ ಹಂತದಲ್ಲಿ ಜನಸಾಮಾನ್ಯರಲ್ಲಿ ಇರಬಹುದಾದ ಸಂದೇಹಗಳಿಗೆ ಇಲ್ಲಿದೆ ಉತ್ತರ.

Mbps ಮತ್ತು MB ನಡುವಿನ ವ್ಯತ್ಯಾಸ

4ಜಿಯಿಂದ 5ಜಿಗೆ ಪ್ರಧಾನವಾಗಿ ಕಂಡುಬರುವ ವ್ಯತ್ಯಾಸವೆಂದರೆ ಇಂಟರ್ನೆಟ್ ವೇಗ. 4ಜಿ ಗರಿಷ್ಠ ವೇಗವು 100 ಎಂಬಿಪಿಎಸ್ (ಸೆಕೆಂಡಿಗೆ 10 ಮೆಗಾಬಿಟ್ಸ್) ಇದ್ದರೆ, 5ಜಿಯಲ್ಲಿ ಗರಿಷ್ಠ ವೇಗವು 20ಜಿಬಿಪಿಎಸ್ (ಸೆಕೆಂಡಿಗೆ 20 ಗಿಗಾಬಿಟ್ಸ್)ವರೆಗೂ ಇರಬಹುದು. ಇಲ್ಲಿ ಮೆಗಾಬಿಟ್ಸ್ ಮತ್ತು ಮೆಗಾಬೈಟ್ಸ್ ನಡುವೆ ದೊಡ್ಡ ವ್ಯತ್ಯಾಸ ಇದೆ ಎಂಬುದು ಬಹುತೇಕರಿಗೆ ತಿಳಿದಿಲ್ಲ. ಎರಡನ್ನೂ ಎಂಬಿಪಿಎಸ್ ಎಂದೇ ಕರೆಯುತ್ತಾರಾದರೂ, ಇಂಗ್ಲಿಷಿನಲ್ಲಿ ಬರೆಯುವಾಗ ಇದರ ವ್ಯತ್ಯಾಸ ತಿಳಿಯುತ್ತದೆ. Mbps ಎಂದರೆ ಮೆಗಾಬಿಟ್ಸ್ ಪರ್ ಸೆಕೆಂಡ್, MB ಎಂಬುದು ಮೆಗಾಬೈಟ್ಸ್‌ನ ಪೂರ್ಣರೂಪ (b ಹಾಗೂ B ವ್ಯತ್ಯಾಸ ಗಮನಿಸಿ). ಎಂಟು ಮೆಗಾಬಿಟ್‌ಗಳು (Mb) ಒಂದು MB ಗೆ ಸಮ. ಸಾಮಾನ್ಯವಾಗಿ ಇಂಟರ್ನೆಟ್ ವೇಗದ ಬಗ್ಗೆ ಮಾತನಾಡುವಾಗ ಎಂಬಿಪಿಎಸ್ ಅಂತಲೂ, ಯಾವುದೇ ಫೈಲ್‌ನ (ಡೇಟಾ, ಸ್ಟೋರೇಜ್) ಗಾತ್ರದ ಬಗ್ಗೆ ಮಾತನಾಡುವಾಗ ಮೆಗಾಬೈಟ್ (MB) ಎಂಬುದನ್ನು ಬಳಸಲಾಗುತ್ತದೆ. ಸೆಕೆಂಡಿಗೆ 1 ಎಂಬಿ (1 Mbps) ಎಂದರೆ ಅದು ವಾಸ್ತವವಾಗಿ ಸೆಕೆಂಡಿಗೆ 0.125 MB ಆಗಿರುತ್ತದೆ.

5ಜಿಯಲ್ಲೂ ಎರಡು ವೇಗ

ರಿಲಯನ್ಸ್ ಜಿಯೋ, ಭಾರ್ತಿ ಏರ್‌ಟೆಲ್, ವೊಡಾಫೋನ್-ಐಡಿಯಾ (ವಿಐ) ಕಂಪನಿಗಳು ಈಗಾಗಲೇ 5ಜಿ ಸ್ಪೆಕ್ಟ್ರಂಗಳಿಗೆ ಬಿಡ್ ಸಲ್ಲಿಸಿ ಖರೀದಿಸಿವೆ. 6 ಗಿಗಾಹರ್ಟ್ಸ್ (6GHz) ಗಿಂತ ಕಡಿಮೆ ಸಾಮರ್ಥ್ಯದ ತರಂಗಾಂತರದ ನೆಟ್‌ವರ್ಕ್, ಈಗಿರುವುದಕ್ಕಿಂತ ಎರಡು-ಮೂರು ಪಟ್ಟು ವೇಗದಲ್ಲಿ ಸಾಮಾನ್ಯ ಡೇಟಾ ವಿನಿಮಯ ಸೇವೆಗಾಗಿ ಲಭ್ಯವಿದ್ದರೆ, 26GHz ವರೆಗಿನ ತರಂಗಾಂತರದ ಎಂಎಂ ವೇವ್ ಹೆಸರಿನ ಸ್ಪೆಕ್ಟ್ರಂಗಳು ಈಗಿನ 4ಜಿಗಿಂತ 10ರಿಂದ 15 ಪಟ್ಟು ವೇಗದಲ್ಲಿ ಕೆಲಸ ಮಾಡಲಿದ್ದು, ಔದ್ಯಮಿಕ ವಲಯದ ಅನುಕೂಲತೆಗಳಿಗಾಗಿರುತ್ತವೆ. ಸದ್ಯಕ್ಕೆ ನಮಗೆ ಲಭ್ಯವಾಗುವುದು ಮೊದಲನೆಯದು.

ನಮ್ಮಲ್ಲಿರುವ ಫೋನ್ ಬದಲಾಯಿಸಬೇಕೇ?

ಎಲ್ಲ ಸ್ಮಾರ್ಟ್‌ಫೋನ್ ತಯಾರಕರೂ 5ಜಿ ಆಧಾರಿತ ಸ್ಮಾರ್ಟ್‌ಫೋನ್‌ಗಳನ್ನೇ ಈಗ ಮಾರುಕಟ್ಟೆಗೆ ಇಳಿಸಿದ್ದಾರೆ. ಹೀಗಾಗಿ ಇತ್ತೀಚೆಗೆ ಸಾಧನಗಳನ್ನು ಖರೀದಿಸಿದವರು ಈ ಬಗ್ಗೆ ಚಿಂತೆ ಮಾಡಬೇಕಿಲ್ಲ. ಆದರೆ, 4ಜಿ ಬೆಂಬಲಿಸುವ ಫೋನ್ ಉಳ್ಳವರು ಹೊಸ ಫೋನ್ ಖರೀದಿಸಬೇಕಾಗಬಹುದು, ಅದನ್ನೇ ಅಪ್‌ಗ್ರೇಡ್ ಮಾಡುವುದು ಸಾಧ್ಯವಿಲ್ಲ. ಅಥವಾ ಈ ಹಿಂದೆ 4ಜಿಯ ಸುಧಾರಿತ ಆವೃತ್ತಿ VoLTE ಬಂದಾಗ ಅದಕ್ಕೆ ಲಭ್ಯವಾಗಿದ್ದ ಆ್ಯಪ್‌ನಂತೆಯೇ ಮತ್ತೊಂದು ಆ್ಯಪ್ ಮೂಲಕವೂ ಸಂಪರ್ಕಿಸುವ ಸಾಧ್ಯತೆಗಳು ಕಡಿಮೆ. ಅದೇ ರೀತಿ, ಆಪರೇಟರ್‌ಗಳು 2ಜಿ, 3ಜಿ, 4ಜಿ ತಂತ್ರಜ್ಞಾನವನ್ನೂ ಮುಂದುವರಿಸಿದರೆ, ಅವರ ಫೋನ್‌ಗಳಲ್ಲಿ ಆ ತಂತ್ರಜ್ಞಾನದ ಮೂಲಕ ಕರೆ, ಡೇಟಾ ಬಳಸಬಹುದು. 4ಜಿ ಸೌಕರ್ಯ ಮಾತ್ರವೇ ಇರುವ ಫೋನ್‌ಗಳಲ್ಲಿ 5ಜಿಯ ಲಾಭ, ವಿಶೇಷವಾಗಿ ಇಂಟರ್ನೆಟ್ ವೇಗ ದೊರೆಯುವುದಿಲ್ಲ ಅಷ್ಟೆ.

ದೊಡ್ಡ ಪ್ರಮಾಣದಲ್ಲಿ ಅಂತರ್ಜಾಲ ಸಂಪರ್ಕ ಬಳಸುತ್ತೀರಿ ಅಥವಾ ಹೆಚ್ಚು ವೇಗವಾಗಿ ಡೇಟಾ ವಿನಿಮಯ (ಅಪ್‌ಲೋಡ್/ಡೌನ್‌ಲೋಡ್) ಆಗಬೇಕಿದೆ ಎಂದಾದರೆ 5ಜಿ ಫೋನ್ ಖರೀದಿಸಬಹುದು. 5ಜಿ ಫೋನ್‌ಗಳು ಕೂಡ ಈಗ ಬಜೆಟ್ ದರದಲ್ಲಿ ಲಭ್ಯ ಇವೆ.

ಈಗಲೇ ಎಲ್ಲರಿಗೂ ಸಿಗುತ್ತದೆಯೇ?

ಒಂದು ನೆನಪಿಟ್ಟುಕೊಳ್ಳಬೇಕಾದ ಅಂಶವೆಂದರೆ, ಲೋಕಾರ್ಪಣೆಯಾದ ತಕ್ಷಣ ಎಲ್ಲ ಊರುಗಳಲ್ಲಿ 5ಜಿ ಸೌಕರ್ಯ ಸಿಗುತ್ತದೆ ಎಂಬುದು ಖಚಿತವಿಲ್ಲ. ಪ್ರಮುಖ ನಗರಗಳಲ್ಲಿ ಮೊದಲು, ನಂತರ ನಿಧಾನವಾಗಿ ಗ್ರಾಮೀಣ ಭಾಗಗಳಿಗೆ ಹಂತ ಹಂತವಾಗಿ 5ಜಿ ತಂತ್ರಜ್ಞಾನ ವಿಸ್ತರಿಸಲಾಗುತ್ತದೆ. 2023ರಲ್ಲಿ ಇಡೀ ದೇಶದಾದ್ಯಂತ ಈ ಸೌಕರ್ಯ ದೊರೆಯುವ ಸಾಧ್ಯತೆಗಳಿವೆ.

ಉಳಿತಾಯಕ್ಕೆ ಏನು ಮಾಡಬಹುದು?

5ಜಿ ಶುಲ್ಕವು 4ಜಿಗಿಂತ ಹೆಚ್ಚಿರುತ್ತದೋ, ಕಡಿಮೆ ಇರುತ್ತದೋ ಎಂಬ ಉದ್ಯಮದ ಗುಟ್ಟು ಇನ್ನೂ ಬಿಟ್ಟುಕೊಟ್ಟಿಲ್ಲ. ಉನ್ನತ ತಂತ್ರಜ್ಞಾನ, ಹೆಚ್ಚು ಅನುಕೂಲ ಇರುವುದರಿಂದಾಗಿ ತುಸು ಹೆಚ್ಚಿರಬಹುದು ಎಂಬುದು ಔದ್ಯಮಿಕ ವಲಯದ ಅಂದಾಜು. ಈ ಹಂತದಲ್ಲಿ, ಸಾಧ್ಯವಿದ್ದಷ್ಟೂ ಉಳಿತಾಯ ಮಾಡಲು ನಾವೇನು ಮಾಡಬಹುದು?

ಒಂದನೆಯದು, ವೇಗದ ಅಂತರ್ಜಾಲ ವ್ಯವಸ್ಥೆಯು ತೀರಾ ಅನಿವಾರ್ಯ ಎಂದಾದರೆ ಮಾತ್ರವೇ 5ಜಿ ಹೊಸ ಫೋನ್‌ಗೆ ಅಥವಾ ಹೊಸ ಸಿಮ್‌ಕಾರ್ಡ್‌ಗೆ ಬದಲಾಗಬಹುದು. ಎರಡನೇ ವಿಚಾರವೆಂದರೆ, ಮನೆಯಲ್ಲಿ ನಾಲ್ಕೈದು ಫೋನ್ ಸಂಪರ್ಕಗಳಿವೆ ಎಂದಾದರೆ, ಒಂದನ್ನು ಮಾತ್ರ 5ಜಿಗೆ ಬದಲಾಯಿಸಿಕೊಳ್ಳಬಹುದು. ಬ್ರಾಡ್‌ಬ್ಯಾಂಡ್ ಅಥವಾ ಆಪ್ಟಿಕಲ್ ಫೈಬರ್ ಸಂಪರ್ಕ ಅಥವಾ ಪೋರ್ಟೆಬಲ್ ಹಾಟ್‌ಸ್ಪಾಟನ್ನು ಬಳಸಿದರೆ, ಮನೆಯಲ್ಲಿರುವ ಎಲ್ಲರಿಗೂ ವೈಫೈ ಮೂಲಕ 5ಜಿ ಸಂಪರ್ಕ ದೊರೆಯಬಹುದು. 5ಜಿ ಬೆಂಬಲಿಸುವ ಪುಟ್ಟದಾದ, ಬೇಕಾದಲ್ಲಿಗೆ ಒಯ್ಯಬಹುದಾದ ಪೋರ್ಟೆಬಲ್ ವೈಫೈ ಹಾಟ್‌ಸ್ಪಾಟ್‌ಗಳು ಈಗಾಗಲೇ ಮಾರುಕಟ್ಟೆಯಲ್ಲಿವೆ. ಅದರೊಳಗೆ 5ಜಿ ಸಿಮ್ ಕಾರ್ಡ್ ಅಳವಡಿಸಿದರಾಯಿತು. ರಿಲಯನ್ಸ್ ಜಿಯೋ ಏರ್ ಫೈಬರ್ ಹೆಸರಿನಲ್ಲಿ ಪೋರ್ಟೆಬಲ್ ಸಾಧನವನ್ನು ಹೊರತರುವುದಾಗಿ ಈಗಾಗಲೇ ಘೋಷಿಸಿದೆ.

2ಜಿ, 3ಜಿ, 4ಜಿ, 5ಜಿ

5ಜಿ ಅಂತರ್ಜಾಲ ವೇಗವು ಔದ್ಯಮಿಕವಾಗಿ, ಕೃಷಿ, ಆರೋಗ್ಯ, ಶಿಕ್ಷಣ, ರಕ್ಷಣಾ ಕ್ಷೇತ್ರಗಳಲ್ಲಿ ಅತ್ಯುಪಯುಕ್ತವಾಗಿದ್ದು, ಸಾಕಷ್ಟು ಬದಲಾವಣೆಗಳನ್ನು ದೇಶವು ನಿರೀಕ್ಷಿಸುತ್ತಿದೆ. 5ಜಿಯಲ್ಲಿ ಈಗಿರುವುದಕ್ಕಿಂತ ಕನಿಷ್ಠ 3 ಪಟ್ಟು ಹೆಚ್ಚು ಗರಿಷ್ಠ 10-15 ಪಟ್ಟು ಹೆಚ್ಚು ವೇಗ ಇರುತ್ತದೆ. ❖



'ಸಿಲಿಕಾನ್' ಕಾಲ ಮುಗಿಯಿತೇ?

ಕ್ಷಮಾ ವಿ. ಭಾನುಪ್ರಕಾಶ್



ಸಾಂದರ್ಭಿಕ ಚಿತ್ರ

ಸಮುದ್ರಯಾನಿಗಳ ಕಥೆಯನ್ನು ವರ್ಣಿಸುವಾಗ ಹೇಳುವ ಮಾತು: ಸುತ್ತ ಎಲ್ಲೆಲ್ಲೂ ನೀರೇ ನೀರು, ಆದರೆ ಕುಡಿಯಲು ಹನಿ ನೀರಿಲ್ಲ.

ಹಾಗೆ ಭೂಮಿಯ ಮೇಲೆ ಎಲ್ಲೆಡೆಯೂ ಮರಳು ಇದ್ದೇ ಇದೆ; ಅದರಲ್ಲೂ ಸಮುದ್ರತೀರ, ಮರುಭೂಮಿಗಳಲ್ಲಂತೂ ಕೇಳುವುದೇ ಬೇಡ. ಆದರೆ ಅದೇ ಮರಳಲ್ಲಿ ಸಿಲಿಕಾನ್ ಅಡಗಿತ್ತು ಎಂಬುದು 1823ನೆಯ ಇಸವಿಯವರೆಗೂ ತಿಳಿದೇ ಇರಲಿಲ್ಲ; ಎಂದರೆ ಸಮುದ್ರದ ನೀರಿನ ಉದಾಹರಣೆಯಂತೆ, ಸುತ್ತ ಎಲ್ಲೆಲ್ಲೂ ಸಿಲಿಕಾನ್‌ನ ರಾಶಿ, ಆದರೆ ಅದರ ಬಗ್ಗೆ ತಿಳಿವೇ ಇಲ್ಲ ಎಂಬಂತೆ! ಮರಳನ್ನು ಬಳಸಿ ಗಾಜು, ಪಿಂಗಾಣಿ ಇತ್ಯಾದಿ ತಯಾರಿಸುವುದನ್ನು ಶತಮಾನಗಳಿಂದ ನಡೆಸುತ್ತಾ ಬಂದಿದ್ದ ಜನರಿಗೆ, ಮರಳಿನ ಸ್ಥೂಲ ಉಪಯೋಗ ಗೊತ್ತಿತ್ತೇ ಹೊರತು, ಅದರೊಳಗಿನ ಮೂಲಧಾತು 'ಸಿಲಿಕಾನ್'ನ ಪರಿಚಯವಿರಲಿಲ್ಲ. ಸ್ವೀಡನ್‌ನ ರಸಾಯನವಿಜ್ಞಾನಿ ಬರ್ಝೆಲಿಯಸ್‌ನ ಕೊಡುಗೆ ಈ ಸಿಲಿಕಾನ್‌ನ ಅನ್ವೇಷಣೆ.

ಸಿಲಿಕಾನ್‌ನ ಅನ್ವೇಷಣೆಯಾಗಿದ್ದೇ ತಡ, ಅದರ ರಾಸಾಯನಿಕ ಹಾಗೂ ಭೌತಿಕ ಗುಣವಿಶೇಷಗಳ ಅಧ್ಯಯನ ಪ್ರಾರಂಭವಾಯಿತು. ಇದೊಂದು ಲೋಹವೂ ಅಲ್ಲದ, ಅಲೋಹವೂ ಅಲ್ಲದ ಧಾತು; ಹಾಗಾಗಿಯೇ ಸಿಲಿಕಾನ್ ಒಂದು ಲೋಹಸದೃಶ 'ಮೆಟಲಾಯ್ಡ್' ಧಾತು. ಇದು ಲೋಹಗಳಂತೆ ಒಳ್ಳೆಯ ವಿದ್ಯುತ್‌ವಾಹಕವೂ ಅಲ್ಲ, ಅಲೋಹಗಳಂತೆ ವಿದ್ಯುತ್ ನಿರೋಧಕವೂ ಅಲ್ಲ; ಇದೊಂದು ಅರೆವಾಹಕ. ಈ ವಿಶೇಷತೆಯ ವಿಶ್ಲೇಷಣೆಯಾಗುತ್ತಾ ಭೌತವಿಜ್ಞಾನದ ಹೊಸ ಬಾಗಿಲು ತೆರೆದುಕೊಂಡಿತು, ವಿದ್ಯುನ್ಮಾನ ಕ್ಷೇತ್ರದ ಉಗಮವಾಯಿತು; ಎಲೆಕ್ಟ್ರಾನುಗಳ ಅನ್ವೇಷಣೆ, ವಾಕ್ಯೂಮ್ ಕೊಳವೆಯ ಆವಿಷ್ಕಾರವು ಇದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಿ ಹೊಸ ಶಕೆಗೆ ನಾಂದಿಯಾಯಿತು. ಟ್ರಾನ್ಸಿಸ್ಟರ್‌ಗಳು, ಕಂಪ್ಯೂಟರ್ ಚಿಪ್‌ಗಳು, ಸೌರಕೋಶಗಳಂತಹ ಸಾಧನಗಳ ಮೂಲ - ಇದೇ ಸಿಲಿಕಾನ್ ಎಂಬ ಅರೆವಾಹಕ!

ರೇಡಿಯೋ, ಟಿ.ವಿ.ಯಿಂದ ಮೊದಲ್ಗೊಂಡು ಸರಿಸುಮಾರು ಎಲ್ಲಾ ವಿದ್ಯುನ್ಮಾನ ಸಾಧನಗಳ ಭಾಗವಾಗಿರುವ ಸಿಲಿಕಾನ್‌ಗೆ, 'ವಿದ್ಯುನ್ಮಾನ ಕ್ಷೇತ್ರದ ಅನಭಿಷಿಕ್ತ ದೊರೆ' ಎಂಬ ಪಟ್ಟವನ್ನು ಕಳೆದುಕೊಳ್ಳುವ ಸಮಯ ಬಂದಾಗಿದೆ. ವೇಗವಾಗಿ ರೂಪಾಂತರಗೊಳ್ಳುತ್ತಿರುವ ಐ.ಟಿ. ಉದ್ಯಮ, ನಾಗಾಲೋಟಕ್ಕೆ ಮತ್ತೊಂದು ಹೆಸರಾಗಿರುವ ಸ್ಮಾರ್ಟ್ ಸಾಧನಗಳ ಸುಧಾರಣೆಯಲ್ಲಿ ಹೊಸತನದ ಹುಡುಕಾಟ ಇದ್ದೇ ಇದೆ. ಅದರ ಪರಿಣಾಮವಾಗಿ, ಅತ್ಯಂತ ಪುಟ್ಟ ಸ್ಮಾರ್ಟ್ ವಾಚ್, ಮೊಬೈಲ್ ಫೋನ್, ಟ್ಯಾಬ್, ಮೈಕ್ರೋಫೋನ್, ಇಯರ್‌ಪಾಡ್, ಸೌರಕೋಶಗಳಂತಹ ಸಾಧನಗಳ ಅವಶ್ಯಕತೆಯಿದೆ. ಇನ್ನೂ ಕೆಲವಂತೂ, ಕೆಲವೇ ಮೈಕ್ರೋಮೀಟರ್, ನ್ಯಾನೋಮೀಟರ್‌ಗಳಷ್ಟು ಗಾತ್ರದ ಸಾಧನಗಳಾಗಿದ್ದು, ಬರಿಗಣ್ಣಿಗೆ ಕಾಣುವುದೂ ಇಲ್ಲ; ಅಂತಹ ಪುಟಾಣಿ ಸಾಧನದ ಒಳಗೆ ಅಡಗಬೇಕಿರುವ ಟ್ರಾನ್ಸಿಸ್ಟರ್ ಅದಿನ್ನೆಷ್ಟು ಪುಟ್ಟದಾಗಿರಬೇಕು ಯೋಚಿಸಿ ನೋಡಿ! ಅಂಥವಕ್ಕೆ ಸಿಲಿಕಾನ್‌ಗಿಂತ ಸೂಕ್ತ ಎನಿಸುವುದು 'ಸಂಯುಕ್ತ ಅರೆವಾಹಕ'ಗಳು ಎನ್ನುತ್ತಾರೆ, ವಿದ್ಯುನ್ಮಾನ ತಜ್ಞರು.


ಇಂತಹ ಸನ್ನಿವೇಶಗಳಲ್ಲಿ ಮೂರು ಆಯಾಮದ ಟ್ರಾನ್ಸಿಸ್ಟರ್ ಕೂಡ ಅಡ್ಡಿಯೇ! ಇಲ್ಲಿ ಅತ್ಯಂತ ತೆಳುವಾದ ಎರಡು ಆಯಾಮದ ಅರೆವಾಹಕವಾಗಿ ಏನನ್ನು ಬಳಸಬಹುದು – ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು, ಇಂತಹ ರಾಸಾಯನಿಕ ವಸ್ತುಗಳ ಮೇಲೆ ಹಲವು ದೇಶಗಳಲ್ಲಿ ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ. ಅವರಲ್ಲಿ ಮುಂಚೂಣಿಯಲ್ಲಿರುವವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸಂಶೋಧನೆ ನಡೆಸುತ್ತಿರುವ ಪ್ರೊಫೆಸರ್ ನವಕಾಂತ ಭಟ್‌ರವರು. ಇವರ ತಂಡವು ಸಿಲಿಕಾನ್‌ನಂತಹ ಒಂದೇ ಧಾತುವಿನ ಮೇಲೆ ಅವಲಂಬಿತರಾಗದೇ, ಹಲವು ಧಾತುಗಳ ರಾಸಾಯನಿಕ ಸಂಯುಕ್ತಗಳನ್ನು ಬಳಸಿ ಹತ್ತು ನ್ಯಾನೋಮೀಟರ್ ಗಾತ್ರದ ಟ್ರಾನ್ಸಿಸ್ಟರನ್ನು ತಯಾರಿಸಿದ್ದಾರೆ. 'ಮಾಲಿಬ್ಡೆನಮ್ ಡೈಸಲ್ಫೈಡ್' ಮತ್ತು 'ಹಾಫ್ನಿಯಮ್ ಡಯಾಕ್ಸೈಡ್' ಸಂಯುಕ್ತ ಪದಾರ್ಥವನ್ನು ಬಳಸಿ, ನ್ಯಾನೋತಂತ್ರಜ್ಞಾನದ ಮೊರೆ ಹೊಕ್ಕು, ನ್ಯಾನೋಗಾತ್ರದ ಟ್ರಾನ್ಸಿಸ್ಟರನ್ನು ತಯಾರಿಸಿದ್ದಾರೆ. ಇದು ವಿದ್ಯುನ್ಮಾನ ಸಾಧನಗಳನ್ನು ಗಾತ್ರದಲ್ಲಿ ಕುಗ್ಗಿಸುವ, ವಿದ್ಯುನ್ಮಾನ ಕ್ಷೇತ್ರವನ್ನು ಅಪಾರ ಹೊಸ ಸಾಧ್ಯತೆಗಳಿಂದ ಹಿಗ್ಗಿಸುವ ಅನ್ವೇಷಣೆಯಾಗಿದೆ. ಇದು ಕೇವಲ ವಿದ್ಯುನ್ಮಾನ ಕ್ಷೇತ್ರಕ್ಕೆ ಸೀಮಿತವಾಗಿಲ್ಲ; ಆರೋಗ್ಯಕ್ಷೇತ್ರ, ರಕ್ಷಣಾಕ್ಷೇತ್ರ, ಬಾಹ್ಯಾಕಾಶಕ್ಷೇತ್ರ – ಹೀಗೆ ಎಲ್ಲೆಡೆಯೂ ಅನ್ವಯಿಕೆ ಕಾಣಬಹುದಾಗಿದೆ. ಇಂತಹ ಅರೆವಾಹಕಗಳ ನ್ಯಾನೋಗಾತ್ರದ ಸ್ಫಟಿಕಗಳು, ಬೆಳಕನ್ನು ಪ್ರತಿಫಲಿಸುವ ಬಗೆಯಲ್ಲೂ ವ್ಯತ್ಯಾಸವಿದ್ದು, ಸೌರಶಕ್ತಿಯನ್ನು ರೂಪಾಂತರಿಸಲು ಬಳಸಿಕೊಳ್ಳಬಹುದಾಗಿದೆ. ಇವುಗಳ ವಿದ್ಯುತ್ತಿನ ಅರೆವಾಹಕತೆಯು ಟ್ರಾನ್ಸಿಸ್ಟರ್‌ನ ತಯಾರಿಯಲ್ಲಿ ಉಪಯುಕ್ತವೆನಿಸಿದರೆ, ಬೆಳಕಿನೊಂದಿಗಿನ ಇವುಗಳ ವಿಶೇಷ ಪ್ರತಿಕ್ರಿಯೆ, ಇವನ್ನು ದ್ಯುಗ್ವಿಜ್ಞಾನೀಯ ವಿದ್ಯುನ್ಮಾನ ಸಾಧನಗಳಲ್ಲಿ ಬಳಕೆಗೆ ಅರ್ಹವಾಗಿಸಿದೆ. ಅತ್ಯಂತ ಸೂಕ್ಷ್ಮವಾದ ಕಿರಣಗಳನ್ನು ಗುರುತಿಸಬೇಕಾದ ಸಂವೇದಕಗಳಲ್ಲಿ ಇಂತಹ ನ್ಯಾನೋ ಅರೆವಾಹಕ ಸ್ಫಟಿಕಗಳನ್ನು ಬಳಸಲಾಗುತ್ತದೆ. ಜೊತೆಗೆ ಆಣ್ವಿಕ ಚಿತ್ರಕಗಳಲ್ಲೂ ಇವುಗಳ ಬಳಕೆಯನ್ನು ಕಾಣಬಹುದಾಗಿದೆ.

ಚೆನ್ನೈನ ಸಂಶೋಧಕ ಸುರೇಶ್ ಸಗದೇವನ್ ಅವರು ಹೇಳುವಂತೆ, ಈ ಅರೆವಾಹಕಗಳ ಗಾತ್ರವನ್ನು ಕುಗ್ಗಿಸುವುದು, ಅವುಗಳ ಗುಣಲಕ್ಷಣಗಳ ಮೇಲೂ ಅಪಾರ ಪರಿಣಾಮ ಬೀರುತ್ತದೆಯಂತೆ. 'ಕ್ವಾಂಟಂ ಗಾತ್ರ ಪರಿಣಾಮ' ಎಂದೇ ಕರೆಸಿಕೊಳ್ಳುವ ಇದು, ನ್ಯಾನೋಗಾತ್ರಕ್ಕೆ ಇಳಿದ ಅರೆವಾಹಕಗಳ ಭೌತಿಕ ಹಾಗೂ ರಾಸಾಯನಿಕ ಲಕ್ಷಣಗಳನ್ನು ಮಾರ್ಪಡಿಸಿ, ಹೊಸ ಸಾಧ್ಯತೆಗಳನ್ನು ಹುಟ್ಟುಹಾಕುತ್ತದೆ.

ಇದೇ ಕಾರಣದಿಂದ ಅವುಗಳ ಬಳಕೆ ಟ್ರಾನ್ಸಿಸ್ಟರ್‌ಗಳನ್ನೂ ಮೀರಿ ಜೈವಿಕ ಹಾಗೂ ರಾಸಾಯನಿಕ ಸಂವೇದಕಗಳು, ಬೆಳಕು ಉತ್ಪಾದಿಸುವ ನ್ಯಾನೋಸಾಧನಗಳು, ಲೇಸರ್ ತಂತ್ರಜ್ಞಾನಕ್ಕೂ ವಿಸ್ತರಿಸಿದೆ. ನ್ಯಾನೋಗಾತ್ರದ ಅರೆವಾಹಕಗಳ ಬಳಕೆಯು, ಅದನ್ನೊಳಗೊಂಡ ಸಾಧನಗಳಿಗೆ ಹೆಚ್ಚು ಸಾಮರ್ಥ್ಯ ಮತ್ತು ತಾಳಿಕೆ ನೀಡಿ, ಅವುಗಳ ಕಾರ್ಯಕ್ಷಮತೆ ಹೆಚ್ಚಿಸುತ್ತದೆ. ಸ್ಮಾರ್ಟ್‌ಸಾಧನಗಳಲ್ಲಿ ಈಗಂತೂ ಒ.ಎಲ್.ಇ.ಡಿ.ಗಳ ಬಳಕೆ ಸಾಮಾನ್ಯವಾಗಿದೆ. ಅವುಗಳ ತೆಳುವಾದ ಭಾರವಿಲ್ಲದ ರಚನೆ, ಸಪಾಟಾದ ಆಕರ್ಷಕ ಪ್ರದರ್ಶಕ ಪರದೆಯ ಒಳಗೆ ನ್ಯಾನೋಗಾತ್ರದ ಅರೆವಾಹಕಗಳ ಇರುವು ಪ್ರಮುಖ ಪಾತ್ರ ವಹಿಸಿದೆ ಎಂದರೆ ತಪ್ಪಾಗಲಾರದು. ಇವೆಲ್ಲವೂ ಸಿಲಿಕಾನ್‌ನಷ್ಟು ಸುಲಭವಾಗಿ ಲಭ್ಯವಿಲ್ಲವೆಂಬುದನ್ನು ಬಿಟ್ಟರೆ, ಇವುಗಳ ಅನುಕೂಲತೆಗಳು ಸಿಲಿಕಾನ್‌ನನ್ನು ಮೀರಿಸುತ್ತವೆ; ಈ ಹೊಸ ಬಗೆಯ ನ್ಯಾನೋ ಅರೆವಾಹಕಗಳನ್ನು ತಯಾರಿಸಲು ಬೇಕಿರುವ ಧಾತುಗಳು ಹೆಚ್ಚಿನ ಪ್ರಮಾಣದಲ್ಲೇನೂ ಬೇಕಿಲ್ಲವಲ್ಲ; ಅವುಗಳ ಬಳಕೆಯಾಗುವುದು ನ್ಯಾನೋಪ್ರಮಾಣದಲ್ಲೇ!

ಹೀಗಾಗಿ, ವಿದ್ಯುನ್ಮಾನ ಕ್ಷೇತ್ರದಲ್ಲಿ ಸಿಲಿಕಾನ್‌ನ ಬಳಕೆ ದಿನೇ ದಿನೇ ಕಡಿಮೆಯಾಗುತ್ತಿದೆ. ಇದೊಂದು ಹಳೆಯ ಯುಗದ ಕೊನೆಗಾಲವಾದರೂ ಹೊಸ ಯುಗದ ಪ್ರಾರಂಭವೆಂಬುದನ್ನು ತಜ್ಞರು ನಂಬುತ್ತಾರೆ; ವಿಜ್ಞಾನ-ತಂತ್ರಜ್ಞಾನಗಳು ಬದುಕಿನಂತೆಯೇ; ಎಂದಿಗೂ ನಿಂತ ನೀರಲ್ಲ. ವಿಕಾಸದ ಹಾದಿಯೇ ನಿರಂತರ, ನಿತ್ಯಸತ್ಯ. ❖

ರೇಡಿಯೋ, ಟಿ.ವಿಯಿಂದ ಮೊದಲ್ಗೊಂಡು ಸುಮಾರು ಎಲ್ಲ ವಿದ್ಯುನ್ಮಾನ ಸಾಧನಗಳ ಭಾಗವಾಗಿರುವ ಸಿಲಿಕಾನ್‌ಗೆ, 'ವಿದ್ಯುನ್ಮಾನ ಕ್ಷೇತ್ರದ ಅನಭಿಷಿಕ್ತ ದೊರೆ' ಎಂಬ ಪಟ್ಟವನ್ನು ಕಳೆದುಕೊಳ್ಳುವ ಸಮಯ ಬಂದಾಗಿದೆ



ದಸರಾ: ಹಲವರಿಗೆ ಮತ್ತೆ ವೇದಿಕೆ; ಸಾಹಿತ್ಯ ವಲಯದಲ್ಲಿ ಆಕ್ಷೇಪ

ಹಲವು ಎಡವಟ್ಟುಗಳ ಕವಿಗೋಷ್ಠಿ

● ಎಂ.ಮಹೇಶ

ಮೈಸೂರು: ಮೃತ ಕವಿಗೆ ಆಹ್ವಾನ, ವಯಸ್ಸು ಮೀರಿದವರಿಗೆ ಯುವ ಕವಿಗೋಷ್ಠಿಯಲ್ಲಿ ಅವಕಾಶ, ಕವಿಗಳನ್ನು ಸಂಪರ್ಕಿಸದೆಯೇ ಗೋಷ್ಠಿಗೆ ಆಯ್ಕೆ ಮಾಡಲಾಗಿದೆ. ಆ ಬಗ್ಗೆ ಇದುವರೆಗೂ ಮಾಹಿತಿಯನ್ನೂ ನೀಡಿಲ್ಲ, ಅದಕ್ಕಾಗಿಯೇ ಕೆಲವರು ಕವಿಗೋಷ್ಠಿಯಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದಾರೆ!

–ಈ ಬಾರಿಯ ದಸರಾ ಕವಿಗೋಷ್ಠಿ ಉಪಸಮಿತಿಯ 'ಎಡವಟ್ಟು'ಗಳ ಚಿತ್ರಣ ಇದು. ಉಪ ಸಮಿತಿಯ ಈ ಕಾರ್ಯಕ್ಕೆ ಸಾಹಿತ್ಯ ವಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಟೀಕೆಗಳ ಸುರಿಮಳೆಯೇ ಆಗುತ್ತಿದೆ. ದಿವಂಗತ ಜಿ.ಕೆ. ರವೀಂದ್ರಕುಮಾರ್ ಅವರ ಹೆಸರನ್ನು ಪ್ರಧಾನ ಕವಿಗೋಷ್ಠಿಗೆ ಸೇರಿಸಿದ್ದು ಕವಿಗಳನ್ನು ಕೆರಳಿಸಿದೆ.

40 ವರ್ಷದೊಳಗಿನವರ ಯುವ ಕವಿಗೋಷ್ಠಿಯಲ್ಲಿ, ಆ ವಯಸ್ಸು ಮೀರಿದವರಿಗೂ ಅವಕಾಶ ಕೊಡಲಾಗಿದೆ. ಒಮ್ಮೆ ಭಾಗವಹಿಸಿದವರಿಗೆ 3 ವರ್ಷಗಳವರೆಗೆ ಅವಕಾಶ ಕಲ್ಪಿಸಬಾರದು, ಹೊಸಬರಿಗೆ ವೇದಿಕೆ ಒದಗಿಸಬೇಕೆಂಬ ನಿಯಮವನ್ನು ಮುರಿಯಲಾಗಿದೆ. 2018ರಲ್ಲಿ ಚಿಗುರು ಕವಿಗೋಷ್ಠಿಯಲ್ಲಿದ್ದ ಕೆಲವರು ಈ ಬಾರಿ ಯುವ ಕವಿಗೋಷ್ಠಿಯಲ್ಲಿದ್ದಾರೆ. ಡಾ.ಶಿರಗಾನಹಳ್ಳಿ ಶಾಂತನಾಯ್ಕ 2018 ಮತ್ತು 2019ರಲ್ಲಿ ಭಾಗವಹಿಸಿದ್ದರು. ಮತ್ತೆ ಪ್ರಧಾನ ಕವಿಗೋಷ್ಠಿಯಲ್ಲಿ ಸೇರಿಸಲಾಗಿದೆ. 2018ರಲ್ಲಿ ಚಿಗುರು ಕವಿಗೋಷ್ಠಿಯಲ್ಲಿದ್ದ ಜಿ.ಮನು, ಎಂ.ಯೋಗೇಶ್ವರಿ, ಯಶಸ್ವಿನಿ, ಲೋಹಿತ್‌ಗೆ ಈ ವರ್ಷವೂ ಅವಕಾಶ ಸಿಕ್ಕಿದೆ.

ಕವಿಗಳ ಆಯ್ಕೆಯಲ್ಲಿ ಪ್ರಾದೇಶಿಕ ಅಸಮತೋಲನವಿದೆ ಎಂಬ ಅಸಮಾಧಾನ ವ್ಯಕ್ತವಾಗಿದೆ. ಕೆಲವು ಜಿಲ್ಲೆಗಳವರಿಗೆ ಅವಕಾಶವೇ ಸಿಕ್ಕಿಲ್ಲ. ಮೈಸೂರು, ಕೊಡಗು ಮತ್ತು ಹಾಸನಕ್ಕೆ ಹೆಚ್ಚಿನ ಪ್ರಾತಿನಿಧ್ಯ ಕೊಡಲಾಗಿದೆ. ಈ ಜಿಲ್ಲೆಗಳವರು ಸರಾಸರಿ ಮೂವರಿದ್ದಾರೆ.

2018ರ ಚಿಗುರು ಕವಿಗೋಷ್ಠಿಯ ಅತಿಥಿ ಡಾ.ಟಿ.ಯಲ್ಲಪ್ಪ ಅವರು ಈ ಬಾರಿ ಪ್ರಧಾನ ಕವಿಗೋಷ್ಠಿಯಲ್ಲಿದ್ದಾರೆ. 2018ರಲ್ಲಿ ಸಂಸ್ಕೃತ ವಿಭಾಗ ಪ್ರತಿನಿಧಿಸಿದ್ದ ಡಾ.ಸುರೇಶ್ ಹೆಗಡೆ ಈ ಬಾರಿಯೂ ಸಂಸ್ಕೃತ ಕವಿತೆ ಓದಲಿದ್ದಾರೆ.

ಪ್ರಧಾನ ಕವಿಗೋಷ್ಠಿ ಉದ್ಘಾಟನೆ ಸಮಾರಂಭದ ಆಹ್ವಾನಪತ್ರಿಕೆಯಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ ಹೆಸರನ್ನು ಚಾಮರಾಜನಗರ ಸಂಸದ ಎಂದು ಮುದ್ರಿಸಲಾಗಿದೆ.

ಪ್ರಧಾನ ಕವಿಗೋಷ್ಠಿಯನ್ನು ಡಾ. ಚಂದ್ರಶೇಖರ ಕಂಬಾರ ಉದ್ಘಾಟಿಸಲಿದ್ದು, ಅದಕ್ಕೆ ಡಾ.ಚಂದ್ರಶೇಖರ ಕಂಬಾರ ಪ್ರತಿಷ್ಠಾನ'ದ ಪ್ರಧಾನ ಕಾರ್ಯದರ್ಶಿ ಹೊ.ನ.ನೀಲಕಂಠೇಗೌಡ ಅವರನ್ನು ಆಹ್ವಾನಿಸಲಾಗಿದೆ. ಕಂಬಾರರ ಪುತ್ರಿ ಜಯಶ್ರೀ ಕಂಬಾರ ಯುವ ಕವಿಗೋಷ್ಠಿಯಲ್ಲಿದ್ದಾರೆ. ಒಂದೇ ಕುಟುಂಬದ ಇಬ್ಬರಿಗೆ ಅವಕಾಶ ಕೊಟ್ಟಿರುವುದಕ್ಕೂ ಕವಿಗಳು ಆಕ್ಷೇಪಿಸಿದ್ದಾರೆ.

ಕವಿಗೋಷ್ಠಿ ಉಪ ಸಮಿತಿಯ ಸದಸ್ಯ ಡಾ.ಜಯಪ್ಪ ಹೊನ್ನಾಳಿ ಅವರಿಗೆ ಪ್ರಧಾನ ಕವಿಗೋಷ್ಠಿಯಲ್ಲಿ ಅವಕಾಶ ಕೊಡಲಾಗಿದೆ. ಕವಿಗಳನ್ನು ಸಂಪರ್ಕಿಸದೆ, ಅನುಮತಿ ಪಡೆಯದೆ ಹೆಸರು ಹಾಕಲಾಗಿದೆ. ಹಲವರಿಗೆ ಆಯ್ಕೆಪತ್ರ ಹಾಗೂ ಆಹ್ವಾನ ಪತ್ರಿಕೆಯನ್ನು ತಲುಪಿಸಿಲ್ಲ. ಪ್ರತಿ ಗೋಷ್ಠಿಯಲ್ಲೂ 35ಕ್ಕೂ ಹೆಚ್ಚಿನ ಕವಿಗಳಿದ್ದಾರೆ.

ಸಮ್ಮತಿ ಪಡೆಯದೆ ಹೆಸರು ಸೇರ್ಪಡೆ: ಪಾತ್ರೋಟ ಅಸಮಾಧಾನ

ಬಾಗಲಕೋಟೆ: ಸಮ್ಮತಿ ಪಡೆಯದೆ ಮೈಸೂರು ದಸರಾ ಕವಿಗೋಷ್ಠಿಯಲ್ಲಿ ತಮ್ಮ ಹೆಸರು ಮುದ್ರಿಸಿರುವುದಕ್ಕೆ ಕವಿ ಸತ್ಯಾನಂದ ಪಾತ್ರೋಟ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಅ.3 ರಂದು ನಡೆಯುವ ಕವಿಗೋಷ್ಠಿಯಲ್ಲಿ ನನ್ನ ಹೆಸರು ಹಾಕಿಕೊಂಡಿರುವುದು ಸ್ನೇಹಿತರ ಮೂಲಕ ಗೊತ್ತಾಗಿದೆ' ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

'ನನ್ನ ಒಪ್ಪಿಗೆ ಇಲ್ಲದೇ ಅದ್ಹೇಗೆ ಗೋಷ್ಠಿಗೆ ಸೇರಿಸಿಕೊಳ್ಳಲಾಯಿತು ಎಂಬುದನ್ನು ಆಯೋಜಕರೇ ಸ್ಪಷ್ಟಪಡಿಸಬೇಕು. ಈಗಾಗಲೇ ದಸರಾ ಕವಿಗೋಷ್ಠಿಗಳಲ್ಲಿ ಮೂರು ಸಲ ಭಾಗವಹಿಸಿದ್ದೇನೆ. ಒಂದು ಸಲ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದೇನೆ. ಒಪ್ಪಿಗೆ ಇಲ್ಲದ ಕವಿಗೋಷ್ಠಿಯಲ್ಲಿ ಭಾಗವಹಿಸುವುದು ಆತ್ಮವಂಚನೆಯಾಗುತ್ತದೆ' ಎಂದಿದ್ದಾರೆ.

'ಈಗಾಗಲೇ ಭಾಗವಹಿಸಿದವರನ್ನೇ ಪದೇ ಪದೇ ಆಹ್ವಾನಿಸುವುದಕ್ಕಿಂತ ಹೊಸಬರಿಗೆ ಅವಕಾಶ ನೀಡುವುದು ಸೂಕ್ತ' ಎಂದಿದ್ದಾರೆ.

ಮುಖ್ಯಾಂಶಗಳು

- ಇಂದಿನಿಂದ ಗೋಷ್ಠಿಗಳು ಆರಂಭ
- ಅ.3ರಂದು ಪ್ರಧಾನ ಕವಿಗೋಷ್ಠಿ
- ಉಪ ಸಮಿತಿ ನಿರ್ಲಕ್ಷ್ಯಕ್ಕೆ ಟೀಕೆಗಳ ಸುರಿಮಳೆ

ಮಧ್ಯ ಕರ್ನಾಟಕ ಭಾಗದ ಬಳ್ಳಾರಿ ಜಿಲ್ಲೆಯ ಕವಿಗಳಿಗೆ ಗೋಷ್ಠಿಯಲ್ಲಿ ಅವಕಾಶವೇ ದೊರಕಿಲ್ಲ
ಗಂಗಾಧರ ಪತ್ತಾರ, ಕವಿ, ಬಳ್ಳಾರಿ

ಮೈಸೂರು ದಸರಾ
ಕ್ರಿ.ಶ 1610 ರಿಂದ ಆಚರಣೆ

ಉಪ ಸಮಿತಿ ತರಾಟೆಗೆ ತೆಗೆದುಕೊಂಡ ಸಚಿವ

ಮೈಸೂರು: ದಸರಾ ಕವಿಗೋಷ್ಠಿ ಉಪ ಸಮಿತಿಯವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಮಂಗಳವಾರ ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಸಭೆಯಲ್ಲಿ ತೀವ್ರ ತರಾಟೆಗೆ ತೆಗೆದುಕೊಂಡರು.

'**ಪ್ರಜಾವಾಣಿ**'ಯಲ್ಲಿ ಮಂಗಳವಾರ ಪ್ರಕಟವಾಗಿದ್ದ ವರದಿಯನ್ನು ಪ್ರಸ್ತಾಪಿಸಿದ ಸಚಿವರು, 'ಇಂತಹ ಅವಾಂತರಗಳು ಮರುಕಳಿಸದಂತೆ ನೋಡಿಕೊಳ್ಳಬೇಕು' ಎಂದು ಉಪ ಸಮಿತಿಗಳಿಗೆ ಸೂಚಿಸಿದರು.

'ಕರಡು ಪ್ರತಿ ಶೇರ್ ಆಗಿದೆ' ಎಂಬ ಉಪ ಸಮಿತಿಯವರ ಸಮಜಾಯಿಷಿಗೆ ಸಚಿವರು ಒಪ್ಪಲಿಲ್ಲ. 'ತಪ್ಪಾಗಿರುವುದನ್ನು ತಿದ್ದಿಕೊಳ್ಳಬೇಕು. ಪರಿಷ್ಕೃತ ಆಹ್ವಾನಪತ್ರಿಕೆಗಳನ್ನು ಹಂಚಬೇಕು' ಎಂದು ಸಚಿವರು ತಾಕೀತು ಮಾಡಿದ್ದಾರೆ. ಸಂಜೆ ವೇಳೆಗೆ ಪರಿಷ್ಕೃತ ಆಹ್ವಾನಪತ್ರಿಕೆಗಳನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಯಿತು.

'ತೂಕ' ಬರಲೆಂದು ಕೆಲವರ ಸೇರ್ಪಡೆ

'ಪ್ರಧಾನ ಕವಿಗೋಷ್ಠಿಗೆ ತೂಕ ಬರಲೆಂದು ಕೆಲವರನ್ನು ನಾವೇ ಮತ್ತೆ ಆಹ್ವಾನಿಸಿದ್ದೇವೆ. ಆಹ್ವಾನ ಪತ್ರಿಕೆಯಲ್ಲಿ ಜಿ.ಕೆ.ರವೀಂದ್ರಕುಮಾರ್ ಹೆಸರು ಹೇಗೆ ಸೇರ್ಪಡೆಯಾಯಿತೆಂದು ತಿಳಿಯುತ್ತಿಲ್ಲ. ಪರಿಷ್ಕರಣೆ ಹಂತದಲ್ಲಿದ್ದಾಗಲೇ ಸಾಮಾಜಿಕ ಜಾಲತಾಣದಲ್ಲಿ ಅದು ಶೇರ್ ಆಗಿದೆ. ಈಗ ಪರಿಷ್ಕೃತ ಪಟ್ಟಿ ತಯಾರಿಸಲಾಗಿದೆ. ಐದು ಕವಿಗೋಷ್ಠಿಗಳಿರುವುದರಿಂದ ಕೆಲವರಿಗೆ ಮತ್ತೆ ಅವಕಾಶ ಸಿಕ್ಕಿರಬಹುದು' ಎಂದು ದಸರಾ ಕವಿಗೋಷ್ಠಿಯ ಉಪ ಸಮಿತಿಯ ಉಪ ವಿಶೇಷಾಧಿಕಾರಿ ಡಾ. ದಾಸೇಗೌಡ ಪ್ರತಿಕ್ರಿಯಿಸಿದರು.



ನೃತ್ಯದ ಸೊಬಗು.. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಡಾ.ರೇಖಾ ರಾಜು ಮತ್ತು ತಂಡ ಮಂಗಳವಾರ ಪ್ರಸ್ತುತ ಪಡಿಸಿದ ಮೋಹಿನಿ ಅಟ್ಟಂ ನೃತ್ಯ –ಪ್ರಜಾವಾಣಿ ಚಿತ್ರ

ಸಿಪಿಐ ಮೇಲೆ ಹಲ್ಲೆ ಪ್ರಕರಣ: 10 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಕಲಬುರಗಿ ಗ್ರಾಮೀಣ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀಮಂತ ಇಲ್ಲಾಳ ಅವರ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕಿನ ಹೊನ್ನಳ್ಳಿಗೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಥೋರಲೇವಾಡಿಯಲ್ಲಿ ಕಾರ್ಯಾಚರಣೆ ನಡೆಸಿದ ಮಂಠಾಳ ಠಾಣೆ ಪೊಲೀಸರು 10 ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

'ಸಾಯಬಣ್ಣ ಚಿಂಚೋಳೆ, ಚಂದ್ರಕಾಂತ ಚಿಂಚೋಳೆ, ಸಚಿನ್, ಅವಿನಾಶ, ಬಜರಂಗ, ಧನರಾಜ ಹೊನ್ನಳ್ಳೆ, ಮಹೇಶ, ಬಾಳು ಭೋಸ್ಲೆ, ರಾಯಪ್ಪ ಗುತ್ತೇವಾಲೆ ಮತ್ತು ಆನಂದ ಹಿಪ್ಪರ್ಗಾ ಬಂಧಿತರು.

ಗಾಂಜಾ ನಾಶ: 'ಕಲಬುರಗಿ ಜಿಲ್ಲೆಯಲ್ಲಿ ಬಂಧಿಸಿದ್ದ ಗಾಂಜಾ ಮಾರಾಟ ಪ್ರಕರಣದ ಆರೋಪಿ ಭೋಸಗಾದ ಸಂತೋಷ, ಥೋರಲೇವಾಡಿಯಲ್ಲಿ ಗಾಂಜಾ ಬೆಳೆಯುತ್ತಿರುವ ಕುರಿತು ಮಾಹಿತಿ ನೀಡಿದ ಆಧಾರದ ಮೇಲೆ ಅಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ಇಲ್ಲಾಳ ಮೇಲೆ ಹಲ್ಲೆ ನಡೆದಾಗ ಅಲ್ಲಿ ಗಾಂಜಾದ 30 ದೊಡ್ಡ ಗಿಡಗಳಿದ್ದವು. ಆದರೆ, ನಂತರ ಅವನ್ನು ಕಿತ್ತು ಹಾಕಲಾಗಿದ್ದು, 850 ಗ್ರಾಂ ಗಾಂಜಾ ದೊರೆತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಚೆಕ್‌ಗೆ ಸಹಿ ಕೋರಿ ಮುರುಘಾ ಶ್ರೀ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಪೋಕ್ಸೊ ಮತ್ತು ಜಾತಿನಿಂದನೆ ಪ್ರಕರಣದ ಒಂದನೇ ಆರೋಪಿಯಾಗಿ ಚಿತ್ರದುರ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ, 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ'ದ (ಎಸ್‌ಜೆಎಂ) ಪೀಠಾಧ್ಯಕ್ಷ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಮಠದ ಬ್ಯಾಂಕ್ ಖಾತೆಗಳ ಚೆಕ್‌ಗಳಿಗೆ ಸಹಿ ಮಾಡಲು ಅವಕಾಶ ಕಲ್ಪಿಸುವಂತೆ ಜೈಲು ಅಧಿಕಾರಿಗಳಿಗೆ ನಿರ್ದೇಶಿಸಬೇಕು ಎಂದು ಕೋರಿ ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

'ಮಠದ ದೈನಂದಿನ ಚಟುವಟಿಕೆ ಮತ್ತು ವ್ಯವಹಾರಗಳಿಗೆ ಅನುವಾಗುವಂತೆ ಮತ್ತು ಮಠದ ಸಿಬ್ಬಂದಿಯ ಸಂಬಳ ಬಿಡುಗಡೆಗೆ ಸಂಬಂಧಿಸಿದ ಚೆಕ್ ಮತ್ತು ಇತರೆ ದಾಖಲೆಗಳಿಗೆ ಜೈಲಿನಿಂದಲೇ ಸಹಿ ಮಾಡಲು ಅವಕಾಶ ಕಲ್ಪಿಸಬೇಕು' ಎಂದು ಶಿವಮೂರ್ತಿ ಶರಣರು ಚಿತ್ರದುರ್ಗ ಜೈಲು ಅಧಿಕಾರಿಗಳಿಗೆ ಮನವಿ ಮಾಡಿದ್ದರು. ಈ ಮನವಿಯನ್ನು ಜೈಲು ಅಧಿಕಾರಿಗಳು ತಿರಸ್ಕರಿಸಿದ್ದರು. ಪರಿಣಾಮ ಶರಣರ ಪರ ವಕೀಲರು ಚಿತ್ರದುರ್ಗ ಸೆಷನ್ಸ್ ನ್ಯಾಯಾಲಯದಲ್ಲಿ ಈ ಕುರಿತಂತೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆ ಬಿ.ಕೆ.ಕೋಮಲಾ ತಿರಸ್ಕರಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಈಗ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ.

ಅರ್ಜಿಯಲ್ಲಿ ಏನಿದೆ?: 'ಶಿವಮೂರ್ತಿ ಶರಣರು ಮಠ ಮತ್ತು ವಿದ್ಯಾಪೀಠಕ್ಕೆ ಏಕೈಕ (ಸೋಲ್) ಟ್ರಸ್ಟೀ ಮತ್ತು ಅಧ್ಯಕ್ಷರಾಗಿರತಕ್ಕದ್ದು ಎಂದು 2010ರ ನವೆಂಬರ್ 26ರಂದು ಟ್ರಸ್ಟ್ ಡೀಡ್ ನಿಗದಿಪಡಿಸಲಾಗಿದೆ. ಇದರ ಅನುಸಾರ ಶರಣರು ಮಠ ಮತ್ತು ವಿದ್ಯಾಪೀಠಗಳ ಆಡಳಿತದ ಸಂಪೂರ್ಣ ಅಧಿಕಾರ ಹೊಂದಿದ್ದು, ಮಠ ಮತ್ತು ವಿದ್ಯಾಪೀಠದ ಬ್ಯಾಂಕ್ ಖಾತೆಯು ಅವರ ಹೆಸರಿನಲ್ಲೇ ಇರತಕ್ಕದ್ದು, ಕೇವಲ ಅಧ್ಯಕ್ಷರು ಮಾತ್ರವೇ ಇದರ ಬ್ಯಾಂಕ್ ಖಾತೆ ನಿರ್ವಹಿಸಬೇಕು. ವರ್ಷಕ್ಕೊಮ್ಮೆ ಇದರ ಲೆಕ್ಕಪರಿಶೋಧನೆಯನ್ನು ಅರ್ಹ ವ್ಯಕ್ತಿ ನಡೆಸತಕ್ಕದ್ದು' ಎಂದು ಟ್ರಸ್ಟ್ ದಾಖಲೆಯಲ್ಲಿ ವಿವರಿಸಲಾಗಿದೆ.


'ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಎಸ್‌ಜೆಎಂ ವಿದ್ಯಾಪೀಠದ ಅಡಿಯಲ್ಲಿ 150 ವಿದ್ಯಾಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ ಮೂರು ಸಾವಿರಕ್ಕೂ ಹೆಚ್ಚು ನೌಕರರು ದುಡಿಯುತ್ತಿದ್ದಾರೆ.

ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ಚಿತ್ರದುರ್ಗ: ಪೋಕ್ಸೊ ಪ್ರಕರಣದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಹಾಗೂ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಅಕ್ಟೋಬರ್ 10ರವರೆಗೆ ವಿಸ್ತರಿಸಲಾಗಿದೆ.

ನ್ಯಾಯಾಂಗ ಬಂಧನದ ಅವಧಿ ಮುಕ್ತಾಯಗೊಂಡಿದ್ದರಿಂದ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಆರೋಪಿಗಳನ್ನು ಮಂಗಳವಾರ ಹಾಜರುಪಡಿಸಲಾಯಿತು. ಮತ್ತೆ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರಾದ ಬಿ.ಕೆ. ಕೋಮಲಾ ಆದೇಶಿಸಿದರು.

ಇಬ್ಬರು ಆರೋಪಿಗಳನ್ನು ಸೆ.1ರಂದು ಬಂಧಿಸಲಾಗಿತ್ತು.



ಶಿವಮೂರ್ತಿ ಮುರುಘಾ ಶರಣರನ್ನು ಜಿಲ್ಲಾ ಕಾರಾಗೃಹದಲ್ಲಿ ಹಾಗೂ ಮಹಿಳಾ ವಾರ್ಡನ್ ಅವರನ್ನು ಶಿವಮೊಗ್ಗದ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆ. ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕ ಸೇರಿ ಇನ್ನೂ ಮೂವರನ್ನು ತನಿಖಾ ತಂಡ ಪತ್ತೆ ಮಾಡಬೇಕಿದೆ.

ಪ್ರಮೋದಾದೇವಿ ಎದುರು ಸುಧಾ ಮೂರ್ತಿ ನೆಲಮುಟ್ಟಿದ ಫೋಟೊ ವೈರಲ್

ಬೆಂಗಳೂರು: ಇನ್ಫೊಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಸುಧಾ ಮೂರ್ತಿ ಅವರು, ಮೈಸೂರು ರಾಜಮನೆತನದ ಪ್ರಮೋದಾ ದೇವಿ ಒಡೆಯರ್ ಅವರ ಎದುರು ನೆಲಮುಟ್ಟಿ ನಮಸ್ಕರಿಸುತ್ತಿರುವ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಸುಧಾ ಮೂರ್ತಿ ಅವರ ನಡೆಯನ್ನು ಕೆಲವರು ಟೀಕಿಸಿದ್ದರೆ, ಕೆಲವರು ಸಮರ್ಥಿಸಿಕೊಂಡಿದ್ದಾರೆ.

2019ರಲ್ಲಿ ಜಯಚಾಮರಾಜೇಂದ್ರ ಒಡೆಯರ್ ಅವರ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ, ಸುಧಾ ಮೂರ್ತಿ ಭಾಗಿಯಾಗಿದ್ದರು. ಆಗ ಅವರು ಪ್ರಮೋದಾ ದೇವಿ ಒಡೆಯರ್ ಅವರ ಎದುರು ನೆಲಮುಟ್ಟಿ ನಮಸ್ಕರಿಸಿದ್ದರು. ಆಗ ತೆಗೆಯಲಾಗಿದ್ದ ಕೆಲವು ಚಿತ್ರಗಳು ಈಗ ಟ್ವಿಟರ್‌ನಲ್ಲಿ ಹಂಚಿಕೆಯಾಗುತ್ತಿವೆ. ಚಿತ್ರಗಳನ್ನು ಮೊದಲು ಯಾರು ಹಂಚಿಕೊಂಡಿದ್ದಾರೆ ಎಂಬುದು ಪತ್ತೆಯಾಗಿಲ್ಲ.

ಈ ಆಧುನಿಕ ಯುಗದಲ್ಲೂ ರಾಜಮನೆತನಕ್ಕೆ ತಲೆಬಾಗುವುದು ಅಗತ್ಯವಿದೆಯೇ ಎಂದು ಹಲವರು ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ. ಈ ರೀತಿಯ ನಡೆ ನಮ್ಮ ರಕ್ತದಲ್ಲಿಯೇ ಇದೆ, ಅದನ್ನು ಬದಲಿಸಲು ಸಾಧ್ಯವಿಲ್ಲ ಎಂದು ಕೆಲವರು ವಿಷಾದ ವ್ಯಕ್ತಪಡಿಸಿದ್ದಾರೆ.

'ಓ ದೇವರೇ... ಪ್ರಭುತ್ವದ ಎದುರು ತಲೆಬಾಗುತ್ತಿರುವುದು ಸುಧಾ ಮೂರ್ತಿಯೇ? ಈ ಮನಸ್ಥಿತಿ ನಮ್ಮ ರಕ್ತದಲ್ಲಿಯೇ ಇದೆ. ಎಂತಹ ಸಾಧನೆ ಮಾಡಿದರೂ ಎಷ್ಟೇ ಸಂಪತ್ತು ಸಂಪಾದಿಸಿದರೂ ಅದನ್ನು ಹೋಗಲಾಡಿಸಲು ಆಗುವುದಿಲ್ಲ' ಎಂದು ಸುನೀಲ್ ಎಂಬುವವರು ಟ್ವೀಟ್ ಮಾಡಿದ್ದಾರೆ.

'ಇದು ರಾಜಮನೆತನದವರಿಗೆ ನಮಸ್ಕರಿಸುವ ಸಾಂಪ್ರದಾಯಿಕ ವಿಧಾನವೇ ಅಥವಾ ಗೌರವ ಸಲ್ಲಿಸುವ ಬಗೆಯೇ' ಎಂದು ಕಮ್ರಾನ್ ಎಂಬುವವರು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ. 'ಅಷ್ಟೊ ದೊಡ್ಡ ಸಾಧಕಿಯಾಗಿದ್ದರೂ, ಸುಧಾ ಮೂರ್ತಿ ಅವರು ನಮ್ಮ ಸಂಸ್ಕೃತಿಯನ್ನು ಬಿಟ್ಟಿಲ್ಲ' ಎಂದು ಕಾಳಾರಾಜ್ ಎಂಬುವವರು ಹೇಳಿದ್ದಾರೆ.

'ಹೇರಿಕೆಯಾಗಿದ್ದರೆ ಇದು ನಿಜಕ್ಕೂ ಸಮಸ್ಯೆ. ಆದರೆ ಇದು ಸುಧಾ ಮೂರ್ತಿ ಅವರ ಆಯ್ಕೆಯಾಗಿದ್ದರೆ ನಿಮಗೆ ಏನು ಸಮಸ್ಯೆ?' ಎಂದು ಅಭಿಷೇಕ್ ಎಂಬುವವರು ಟ್ವೀಟ್ ಮಾಡಿದ್ದಾರೆ.

ಪಿಎಸ್‌ಐ ಅಕ್ರಮ: ರಾಜೇಶ್‌ಗೆ ಜಾಮೀನು

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದ್ದ ನಗರದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆ ಅಧ್ಯಕ್ಷ ರಾಜೇಶ್ ಹಾಗರಗಿಗೆ ಹೈಕೋರ್ಟ್‌ನ ಕಲಬುರಗಿ ಪೀಠವು ಮಂಗಳವಾರ ಜಾಮೀನು ಮಂಜೂರು ಮಾಡಿದೆ.

'ಹಗರಣದ ಪ್ರಮುಖ ಆರೋಪಿ ದಿವ್ಯಾ ಅವರ ಪತಿ ಎಂಬ ಕಾರಣಕ್ಕೆ ಅರ್ಜಿದಾರ ಆರೋಪಿಗೆ ಜಾಮೀನು ನಿರಾಕರಿಸಲಾಗದು' ಎಂದು ನ್ಯಾಯಮೂರ್ತಿ ಎಂ.ಜಿ. ಉಮಾ ಅವರ ನೇತೃತ್ವದ ಏಕಸದಸ್ಯ ಪೀಠವು ಆದೇಶದಲ್ಲಿ ಹೇಳಿದೆ.

'ಆರೋಪಿಯು ದಿವ್ಯಾ ಹಾಗರಗಿ ಪತಿ ಎಂಬ ಆಧಾರದ ಮೇಲೆ ರಾಜೇಶ್ ಜಾಮೀನಿಗೆ ಅರ್ಹರಲ್ಲ ಎಂದು ಹೇಳಲಾಗದು. ಆರೋಪ ಸಾಬೀತುಪಡಿಸುವ ದಾಖಲೆ ಬೇಕು. ಐಪಿಸಿ ಸೆಕ್ಷನ್ 212 (ಅಕ್ರಮ ಆಶ್ರಯ ನೀಡುವ) ಹೊರತುಪಡಿಸಿ, ಅರ್ಜಿದಾರ ಆರೋಪಿ ವಿರುದ್ಧ ಗಂಭೀರ ಆರೋಪ ಕಾಣುತ್ತಿಲ್ಲ' ಎಂದು ಹೇಳಿದ ಪೀಠವು, ಜಾಮೀನು ಮಂಜೂರು ಮಾಡಿತು. ಕಳೆದ ಏಪ್ರಿಲ್ 7ರಂದು ರಾಜೇಶ್ ಅವರನ್ನು ಬಂಧಿಸಲಾಗಿತ್ತು.

ಬಡ್ತಿ ಮೀಸಲು: ಮರುಪರಿಶೀಲನಾ ಅರ್ಜಿ ವಜಾ: ಜೇಷ್ಠತಾ ಪಟ್ಟಿ ಪ್ರಕಟಿಸುವಂತೆ 'ಅಹಿಂಸಾ' ಒತ್ತಾಯ

ಸರ್ಕಾರಕ್ಕೆ ಮತ್ತೆ 'ಮುಂಬಡ್ತಿ' ಸಂಕಷ್ಟ?

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಬಡ್ತಿ ಮೀಸಲು' ವಿಚಾರದಲ್ಲಿ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ಇದೇ ಜ. 28ರಂದು ನೀಡಿದ ಆದೇಶಕ್ಕೂ ಕರ್ನಾಟಕಕ್ಕೂ ಸಂಬಂಧ ಇಲ್ಲವೆಂದು ಎಸ್‌ಸಿ, ಎಸ್‌ಟಿ ಎಂಜಿನಿಯರ್ ಕಲ್ಯಾಣ ಸಂಘ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿ ವಜಾಗೊಂಡ ಬೆನ್ನಲ್ಲೆ, 'ಹಿಂದಿನ ಆದೇಶದಂತೆ ರಾಜ್ಯದಲ್ಲೂ ಜ್ಯೇಷ್ಠತಾ ಪಟ್ಟಿ ಪರಿಷ್ಕರಿಸಿ, ಬಡ್ತಿ ನೀಡಬೇಕು' ಎಂದು 'ಅಹಿಂಸಾ' (ಅಲ್ಪಸಂಖ್ಯಾತ, ಹಿಂದುಳಿದ, ಸಾಮಾನ್ಯ) ಸಂಘಟನೆ ಆಗ್ರಹಿಸಿದೆ.

'ಸುಪ್ರೀಂ' ಆದೇಶ ಜಾರಿಯಾದರೆ 15ಕ್ಕೂ ಹೆಚ್ಚು ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಗೊಂಡ 1,500ಕ್ಕೂ ಹೆಚ್ಚು ಎಸ್‌ಸಿ ಮತ್ತು ಎಸ್‌ಟಿ ನೌಕರರ ಮುಂಬಡ್ತಿ ಮೇಲೆ ಪರಿಣಾಮ ಬೀಳಲಿದೆ. ಸ್ವಂತ ಅರ್ಹತೆಯಲ್ಲಿ ನೇಮಕಗೊಂಡು ಬಡ್ತಿ ಪಡೆದ ಎಸ್‌ಸಿ, ಎಸ್‌ಟಿ ನೌಕರರ ಬಡ್ತಿಗೂ ಸಮಸ್ಯೆ ಆಗಲಿದೆ.


ರಾಜ್ಯದಲ್ಲಿ ಜ. 28ರ ಆದೇಶವನ್ನು ಜಾರಿ ಮಾಡುವಂತೆ ಕಳೆದ ಫೆಬ್ರುವರಿಯಲ್ಲೇ ಮನವಿ ಸಲ್ಲಿಸಿದ್ದ ಅಹಿಂಸಾ, 'ಎಲ್ಲ ಇಲಾಖೆಗಳಲ್ಲಿ ಶೇ 15ರಷ್ಟು ಎಸ್‌ಸಿ, ಶೇ 3ರಷ್ಟು ಎಸ್‌ಟಿ ಪ್ರಾತಿನಿಧ್ಯ ಮೀರಿದಂತೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿತ್ತು. ಆ ಬಗ್ಗೆ ಮುಖ್ಯ ಕಾರ್ಯದರ್ಶಿ ಟಿಪ್ಪಣಿ ಸಿದ್ಧಪಡಿಸುತ್ತಿದ್ದಂತೆ, ತೀವ್ರ ವಿರೋಧ ವ್ಯಕ್ತಪಡಿಸಿ ಎಸ್‌ಸಿ ಎಸ್‌ಟಿ ನೌಕರರ ಸಂಘ ಕೂಡಾ ಮನವಿ ಸಲ್ಲಿಸಿದ್ದರಿಂದ ಸರ್ಕಾರ ಈ ವಿಚಾರದಲ್ಲಿ ಮುಂದಡಿ ಇಟ್ಟಿಲ್ಲ. ಅಲ್ಲದೆ, ಜ. 28ರ ಆದೇಶವನ್ನು ಕರ್ನಾಟಕಕ್ಕೆ ಅನ್ವಯಿಸುವ ವಿಚಾರವೂ ಗೊಂದಲಕ್ಕೆ ಕಾರಣವಾಗಿತ್ತು.

ಈ ಮಧ್ಯೆ, ಜ. 28ರ ಆದೇಶವನ್ನು ಮರು ಪರಿಶೀಲಿಸುವಂತೆ ಎಸ್‌ಸಿ, ಎಸ್‌ಟಿ ಎಂಜಿನಿಯರ್ ಕಲ್ಯಾಣ ಸಂಘ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಜರ್ನೈಲ್ ಸಿಂಗ್ ಮತ್ತು ಇತರ ಪ್ರಕರಣದಲ್ಲಿ ರಾಜ್ಯ ಸರ್ಕಾರ ಅರ್ಜಿ ಇಲ್ಲದೇ ಇರುವುದರಿಂದ, ಈ ಪ್ರಕರಣದಿಂದ ಕರ್ನಾಟಕದ ವಿಷಯವನ್ನು ಕೈಬಿಡಬೇಕು. ಅಗತ್ಯವಿದ್ದರೆ ಪ್ರತ್ಯೇಕವಾಗಿ ವಿಚಾರಣೆ ಮಾಡಬೇಕೆಂದು ಕೋರಿತ್ತು. ಈ ಅರ್ಜಿ 21ರಂದು ವಜಾಗೊಂಡಿದೆ.



ಕರ್ನಾಟಕದ ಬಡ್ತಿ ಪ್ರಕರಣಕ್ಕೂ ಜರ್ನೈಲ್ ಸಿಂಗ್ ಪ್ರಕರಣಕ್ಕೂ ಸಂಬಂಧ ಇಲ್ಲ. ಹೀಗಾಗಿ ಮರುಪರಿಶೀಲನಾ ಅರ್ಜಿ ವಜಾಗೊಳಿಸಲಾಗಿದೆ

ಡಿ. ಚಂದ್ರಶೇಖರಯ್ಯ, ಅಧ್ಯಕ್ಷ, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ



ಪುನರ್ ಪರಿಶೀಲನಾ ಅರ್ಜಿ ವಜಾಗೊಂಡಿರುವುದರಿಂದ ಜ. 28ರ ಆದೇಶದಂತೆ ಸರ್ಕಾರಿ ನೌಕರರ ಜ್ಯೇಷ್ಠತಾ ಪಟ್ಟಿ ಪರಿಷ್ಕರಿಸಿ, ಬಡ್ತಿ ನೀಡುವಂತೆ ಮುಖ್ಯಮಂತ್ರಿ, ಸಿಎಸ್ ಮತ್ತೊಮ್ಮೆ ಮನವಿ ಸಲ್ಲಿಸುತ್ತೇವೆ

ಎಂ. ನಾಗರಾಜ್, ಅಧ್ಯಕ್ಷ, 'ಅಹಿಂಸಾ'

ಜ. 28ರ ಆದೇಶದಲ್ಲೇನಿದೆ?

'ಜರ್ನೈಲ್ ಸಿಂಗ್ ವಿರುದ್ಧ ಲಚ್ಚಿಮಿ ನರೈನ್ ಗುಪ್ತಾ ಮತ್ತು ಇತರರು' ಪ್ರಕರಣದಲ್ಲಿ ನ್ಯಾಯಮೂರ್ತಿ ಎಲ್. ನಾಗೇಶ್ವರರಾವ್ ನೇತೃತ್ವದ ಪೀಠವು, 'ಎಸ್‌ಸಿ ಮತ್ತು ಎಸ್‌ಟಿ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವ ವೇಳೆ ಅಗತ್ಯ ಪ್ರಾತಿನಿಧ್ಯ ಇಲ್ಲ ಎಂಬುದನ್ನು ಇಡೀ ಸೇವೆಯಲ್ಲಿ ಅಥವಾ ವರ್ಗದಲ್ಲಿ ಇರುವ ಪ್ರಾತಿನಿಧ್ಯದ ಆಧಾರದಲ್ಲಿ ನಿರ್ಧರಿಸುವಂತಿಲ್ಲ. ಯಾವ ಶ್ರೇಣಿ ಅಥವಾ ಹುದ್ದೆಯ ವರ್ಗಕ್ಕೆ ಬಡ್ತಿ ಕೇಳಲಾಗಿದೆಯೋ ಆ ಶ್ರೇಣಿ ಅಥವಾ ಹುದ್ದೆ ವರ್ಗದಲ್ಲಿ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ನೋಡಿಕೊಂಡು ನಿರ್ಧರಿಸಬೇಕು' ಎಂದು ಆದೇಶ ನೀಡಿತ್ತು.

ಸುದ್ದಿ 2 ನಿಮಿಷ

ವಿದ್ಯುತ್ ಮೀಟರ್ ಕಿತ್ತೊಗೆಯುವ ಆಂದೋಲನ: ಮಧು ಬಂಗಾರಪ್ಪ

ಮೈಸೂರು: 'ರೈತರ ಪಂಪ್‌ಸೆಟ್‌ಗಳಿಗೆ ಬಿಜೆಪಿ ಸರ್ಕಾರ ವಿದ್ಯುತ್ ಮೀಟರ್ ಅಳವಡಿಸಿದರೆ ಅದನ್ನು ಕಿತ್ತೊಗೆಯುವ ಆಂದೋಲನವನ್ನು ಕಾಂಗ್ರೆಸ್ ಆರಂಭಿಸಲಿದೆ' ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಮಧು ಬಂಗಾರಪ್ಪ ಹೇಳಿದರು.

'ರೈತರಿಗೆ ದೊರೆಯುತ್ತಿದ್ದ ಸವಲತ್ತುಗಳನ್ನು ತೆಗೆಯಲಾಗಿದೆ. ರಸಗೊಬ್ಬರ, ಪರಿಕರಗಳ ಬೆಲೆ ಹೆಚ್ಚಾಗಿದೆ. ಬೆಂಬಲ ಬೆಲೆಯೂ ಸಿಗುತ್ತಿಲ್ಲ. ಸಂಕಷ್ಟಕ್ಕೆ ಸಿಲುಕಿರುವಾಗ ಮೀಟರ್ ಅಳವಡಿಸಲು ಮುಂದಾಗಿರುವುದು ರೈತರನ್ನು ನೆಲಕಚ್ಚಿಸುವ ಪ್ರಹಾರ' ಎಂದು ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಸರ್ಕಾರದ ಮೇಲೆ ಜನರಿಗಿರುವ ಸಿಟ್ಟನ್ನು ವಿಷಯಾಂತರಿಸುವುದಕ್ಕಾಗಿಯೇ ಪಿಎಫ್‌ಐ, ಎಸ್‌ಡಿಪಿಐ ಮೇಲೆ ಎನ್‌ಐಎ ಮೂಲಕ ಬಿಜೆಪಿ ದಾಳಿ ನಡೆಸುತ್ತಿದೆ. ಕಾಂಗ್ರೆಸ್ ದುರುದ್ದೇಶದ ದಾಳಿಗೆ ಹೆದರುವುದಿಲ್ಲ. ಬಿಜೆಪಿಯ ಭ್ರಷ್ಟಾಚಾರ, ಸುಳ್ಳುಗಳನ್ನು ಬಯಲಿಗೆಳೆಯುವುದನ್ನು ಮುಂದುವರಿಸುತ್ತೇವೆ' ಎಂದರು.

'ಕಮಿಷನ್ ಲಾಭವನ್ನಷ್ಟೇ ನೋಡುತ್ತಿರುವ ಬಿಜೆಪಿಗೆ ಜನರ ಕಷ್ಟ ಅರ್ಥವಾಗುತ್ತಿಲ್ಲ. ಮೊಸರಿನಿಂದ ಹಿಡಿದು ಹೆಣ ಸುಡುವವರೆಗೂ ತೆರಿಗೆ ಹೊರಿಸಲಾಗಿದೆ. ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡಲಾಗಿದೆ. ಈಸ್ಟ್ ಇಂಡಿಯಾ ಕಂಪನಿಯಂತೆ ಜನರನ್ನು ಶೋಷಿಸುತ್ತಿದೆ. ಅದಕ್ಕಾಗಿ ಸ್ವಾತಂತ್ರ್ಯ ಹೋರಾಟ ಮತ್ತೆ ಆರಂಭಿಸಬೇಕಿದೆ' ಎಂದರು.



'ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ರಚನೆಯ ಉಪಾಧ್ಯಕ್ಷನಾಗಿ, ಜಿಲ್ಲಾ ಮಟ್ಟದಲ್ಲೂ ಚಿಂತನ- ಮಂಥನ ನಡೆಸಿ ಜಿಲ್ಲಾವಾರು ಪ್ರಣಾಳಿಕೆ ತಯಾರಿಸಲಾಗುವುದು' ಎಂದರು.

ಸ್ವಚ್ಛ ಸರ್ವೇಕ್ಷಣೆ; ಶಿವಮೊಗ್ಗಕ್ಕೆ ಪ್ರಶಸ್ತಿ ಗರಿ

ಶಿವಮೊಗ್ಗ: ಕೇಂದ್ರ ಸರ್ಕಾರದ ಸ್ವಚ್ಛ ಸರ್ವೇಕ್ಷಣೆ ಸಮೀಕ್ಷೆಯಲ್ಲಿ ದೇಶದ ಅತ್ಯುತ್ತಮ ನಗರಗಳಲ್ಲೊಂದು ಎಂಬ ಶ್ರೇಯಕ್ಕೆ ಶಿವಮೊಗ್ಗ ನಗರ ಪಾತ್ರವಾಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ದೇಶದಾದ್ಯಂತ ಸಮೀಕ್ಷೆ ನಡೆಸಿದ್ದ ಕೇಂದ್ರ ಸರ್ಕಾರ, ಸ್ವಚ್ಛತೆ ನಿಟ್ಟಿನಲ್ಲಿ ಶಿವಮೊಗ್ಗ ಮಹಾನಗರ ಪಾಲಿಕೆಯ ಕಾರ್ಯವೈಖರಿಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಮೇಯರ್ ಸುನೀತಾ ಅಣ್ಣಪ್ಪ ಹಾಗೂ ಮಹಾನಗರ ಪಾಲಿಕೆಯ ಆಯುಕ್ತ ಮಾಯಣ್ಣ ಗೌಡ ಅವರು ಅಕ್ಟೋಬರ್ 1ರಂದು ದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಕ್ರಯೋಜೆನಿಕ್ ಎಂಜಿನ್ ಉತ್ಪಾದನಾ ಸೌಲಭ್ಯ ಸಮರ್ಪಣೆ

ಸಂಕೀರ್ಣ ತಂತ್ರಜ್ಞಾನ ಹೊಂದಿದ ಆರನೇ ದೇಶ ಭಾರತ • ಚಾಲನೆ ನೀಡಿದ ರಾಷ್ಟ್ರಪತಿ ಮುರ್ಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಗ್ರಹಗಳ ಉಡಾವಣೆ, ಬಾಹ್ಯಾಕಾಶ ಯಾನ, ಅಂತರ್‌ಗ್ರಹ ಯಾನಗಳಿಗೆ ಬೇಕಾಗುವ ಅಧಿಕ ತೂಕದ ರಾಕೆಟ್‌ಗಳಿಗೆ ಅಗತ್ಯವಿರುವ ಕ್ರಯೋಜೆನಿಕ್ ಎಂಜಿನ್‌ಗಳನ್ನು ಉತ್ಪಾದಿಸುವ ಸಮಗ್ರ ಕ್ರಯೋಜೆನಿಕ್ ಎಂಜಿನ್ ಉತ್ಪಾದನಾ ಸೌಲಭ್ಯವನ್ನು (ಐಸಿಎಂಎಫ್) ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಸ್ಥಾಪಿಸಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಈ ಘಟಕವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಾಗಿ (ಇಸ್ರೊ) ಒಂದೇ ಸೂರಿನಡಿ ಕ್ರಯೋಜೆನಿಕ್ ಎಂಜಿನ್‌ಗಳ ಉತ್ಪಾದನಾ ವ್ಯವಸ್ಥೆಯನ್ನು ಎಚ್‌ಎಎಲ್ ಸ್ಥಾಪಿಸಿದೆ. ಸುಮಾರು 4,500 ಚದರಡಿ ಪ್ರದೇಶದಲ್ಲಿ ಅತ್ಯಾಧುನಿಕ ಉತ್ಪಾದನಾ ಘಟಕವಿದೆ. ಭಾರತೀಯ ರಾಕೆಟ್‌ಗಳಿಗಾಗಿ ಕ್ರಯೋಜೆನಿಕ್ (ಸಿಇ 20) ಮತ್ತು ಸೆಮಿ ಕ್ರಯೋಜೆನಿಕ್ (ಎಸ್‌ಇ2000) ಎಂಜಿನ್‌ಗಳನ್ನು ಉತ್ಪಾದಿಸುವ 70 ಹೈಟೆಕ್ ಉಪಕರಣಗಳು ಮತ್ತು ಪರೀಕ್ಷಾ ಸೌಲಭ್ಯಗಳು ಇಲ್ಲಿವೆ.

ಕ್ರಯೋಜೆನಿಕ್ ಎಂದರೇನು?: ಕ್ರಯೋಜೆನಿಕ್ ಎಂಜಿನ್‌ನಲ್ಲಿ ಕ್ರಯೋಜೆನಿಕ್ ಇಂಧನ ಮತ್ತು ಆಕ್ಸಿಡೈಸರ್‌ಗಳನ್ನು ಬಳಸಲಾಗುತ್ತದೆ. ಈ ಇಂಧನ ಮತ್ತು ಆಕ್ಸಿಡೈಸರ್ ಅನಿಲ ರೂಪದಲ್ಲಿರುತ್ತವೆ. ಅವುಗಳನ್ನು ದ್ರವರೂಪಕ್ಕೆ ಪರಿವರ್ತಿಸಿ ಕಡಿಮೆ ತಾಪಮಾನದಲ್ಲಿ ರಾಕೆಟ್‌ನ ಇಂಧನ ಟ್ಯಾಂಕ್‌ಗಳಲ್ಲಿ ಸಂಗ್ರಹಿಸಿಡಲಾಗುತ್ತದೆ. ಬಾಹ್ಯಾಕಾಶದಲ್ಲಿ ರಾಕೆಟ್‌ನ ವಿವಿಧ ಹಂತಗಳಲ್ಲಿ ಇದನ್ನು ಉರಿಸಿದಾಗ ಭೂಮಿಯಲ್ಲಿ ಬಳಕೆಯಾಗುವ ಇತರ ದ್ರವರೂಪಿ ಇಂಧನಕ್ಕಿಂತಲೂ ಅಧಿಕ ನೂಕುಬಲವನ್ನು ನೀಡುತ್ತದೆ. ಬಾಹ್ಯಾಕಾಶದಲ್ಲಿ ನೌಕೆಗಳಿಗೆ ಕಡಿಮೆ ಸಮಯ ಮತ್ತು ಮಿತವ್ಯಯದಲ್ಲಿ ಅಧಿಕ ವೇಗೋತ್ಕರ್ಷ ನೀಡುತ್ತದೆ.

ಅತ್ಯಂತ ಸಂಕೀರ್ಣ ಸ್ವರೂಪದ ಕಾರಣ ಕ್ರಯೋಜೆನಿಕ್ ಎಂಜಿನ್ ತಯಾರಿಕೆಯ ತಂತ್ರಜ್ಞಾನ ಅಮೆರಿಕ, ಫ್ರಾನ್ಸ್, ಜಪಾನ್, ಚೀನಾ ಮತ್ತು ರಷ್ಯಾ ಬಳಿ ಮಾತ್ರ ಇದೆ. ಇದೀಗ ಭಾರತ ಆ ಸಾಲಿಗೆ ಸೇರಿದೆ.

2014 ರ ಜನವರಿ 5ರಂದು ಸ್ವದೇಶಿ ನಿರ್ಮಿತ ಕ್ರಯೋಜೆನಿಕ್ ಎಂಜಿನ್ ಮೂಲಕ ಜಿಎಸ್‌ಎಲ್‌ವಿ-ಡಿ5 ರಾಕೆಟ್ ಉಡಾವಣೆ ಮಾಡುವ ಮೂಲಕ ಕ್ರಯೋಜೆನಿಕ್ ತಂತ್ರಜ್ಞಾನ ನಿರ್ಮಾಣದ ಆರನೇ ದೇಶವಾಗಿ ಭಾರತ ಹೊರಹೊಮ್ಮಿತು.

2013ರಲ್ಲಿ ಒಪ್ಪಂದ: ಕ್ರಯೋಜೆನಿಕ್ ಎಂಜಿನ್ ಮಾಡ್ಯೂಲ್‌ಗಳ ತಯಾರಿಕೆ ಸಂಬಂಧ 2013 ರಲ್ಲಿ ಎಚ್‌ಎಎಲ್ ಮತ್ತು ಇಸ್ರೊ ಒಪ್ಪಂದಕ್ಕೆ ಸಹಿ ಮಾಡಿದ್ದವು. ಸುಮಾರು ₹208 ಕೋಟಿ ಬಂಡವಾಳ ತೊಡಗಿಸಲಾಗಿದೆ. 2023ರ ಮಾರ್ಚ್‌ನಿಂದ ಎಂಜಿನ್ ತಯಾರಿಕೆ ಆರಂಭವಾಗಲಿದೆ.



ಬೆಂಗಳೂರಿನಲ್ಲಿ ಮಂಗಳವಾರ ಕ್ರಯೋಜೆನಿಕ್ ಎಂಜಿನ್‌ಗಳನ್ನು ಉತ್ಪಾದಿಸುವ ಸಮಗ್ರ ಕ್ರಯೋಜೆನಿಕ್ ಎಂಜಿನ್ ಉತ್ಪಾದನಾ ಸೌಲಭ್ಯವನ್ನು ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು ಮಾಹಿತಿ ನೀಡಿದರು. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು —ಪಿಟಿಐ ಚಿತ್ರ

'2047ಕ್ಕೆ ಭಾರತ ಸಮೃದ್ಧ- ಸದೃಢ'

ಸ್ವಾತಂತ್ರ್ಯ ಗಳಿಸಿ 100 ವರ್ಷಗಳು ಪೂರ್ಣಗೊಳಿಸುವ 2047 ರ ವೇಳೆಗೆ ಭಾರತವು ಸಮೃದ್ಧ ಮತ್ತು ಸದೃಢ ರಾಷ್ಟ್ರವಾಗಲಿದೆ ಎಂದು ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕ್ರಯೋಜೆನಿಕ್ ಎಂಜಿನ್ ಉತ್ಪಾದನಾ ಸೌಲಭ್ಯ ಮತ್ತು ರೋಗ ಸೂಕ್ಷ್ಮಾಣುಗಳ ವೈಜ್ಞಾನಿಕ ಅಧ್ಯಯನ ಸಂಸ್ಥೆಯ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ) ದಕ್ಷಿಣ ವಲಯ ಪ್ರಯೋಗಾಲಯಕ್ಕೆ ದೂರ ಸಂವೇದಿ ವ್ಯವಸ್ಥೆಯ ಮೂಲಕ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ಕೇಂದ್ರದ ಆರೋಗ್ಯ ಖಾತೆ ರಾಜ್ಯ ಸಚಿವೆ ಡಾ. ಭಾರತಿ ಪ್ರವೀಣ್ ಪವಾರ್ ಮಾತನಾಡಿ, ಬೆಂಗಳೂರಿನಲ್ಲಿ ಉದ್ಘಾಟನೆಗೊಂಡ ರಾಷ್ಟ್ರೀಯ ಸೂಕ್ಷ್ಮಾಣುಗಳ ವೈಜ್ಞಾನಿಕ ಅಧ್ಯಯನ ಸಂಸ್ಥೆಯ ದಕ್ಷಿಣ ವಲಯ ಪ್ರಯೋಗಾಲಯವು ಮಂಗನ ಕಾಯಿಲೆ, ಚಿಕೂನ್ ಗುನ್ಯಾ ರೀತಿಯ ರೋಗದ ವೈರಾಣುಗಳ ಪತ್ತೆ ಹಚ್ಚುವಿಕೆ ಮತ್ತು ನಿಯಂತ್ರಣಕ್ಕೆ ಕಣ್ಗಾವಲು ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲಿದೆ ಎಂದರು.

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ: ಗೆಹಲೋತ್ ಸ್ಪರ್ಧೆ ಸಾಧ್ಯತೆ ಕ್ಷೀಣ

ಒಂದನೇ ಪುಟದಿಂದ

ಬಂಡಾಯ ಚಟುವಟಿಕೆ ಮುಂದುವರಿಸಬೇಡಿ ಎಂದು ಈ ಸಭೆಯಲ್ಲಿ ಗೆಹಲೋತ್ ಅವರು ಹೇಳಿದ್ದಾರೆ ಎನ್ನಲಾಗಿದೆ.

ಅಭ್ಯರ್ಥಿಯ ಆಯ್ಕೆಗಾಗಿ ಪಕ್ಷದ ಹಿರಿಯ ಮುಖಂಡರು ತಕ್ಷಣವೇ ದೆಹಲಿಗೆ ಬರಬೇಕು ಎಂದು ಸೂಚನೆ ನೀಡಲಾಗಿದೆ.

ಗೆಹಲೋತ್ ಅವರ ಸ್ಪರ್ಧೆ ಸಾಧ್ಯವಿಲ್ಲ ಎಂದಾದರೆ, ಮಲ್ಲಿಕಾರ್ಜುನ ಖರ್ಗೆ, ಮುಕುಲ್ ವಾಸ್ನಿಕ್, ದಿಗ್ವಿಜಯ್ ಸಿಂಗ್, ಸುಶೀಲ್ ಕುಮಾರ್ ಶಿಂದೆ, ಕಮಲನಾಥ್ ಮತ್ತು ಕುಮಾರಿ ಶೆಲ್ಜಾ ಅವರಲ್ಲಿ ಒಬ್ಬರನ್ನು ಕಣಕ್ಕೆ ಇಳಿಸುವ ಬಗ್ಗೆ ಚಿಂತನೆ ನಡೆದಿದೆ ಎನ್ನಲಾಗಿದೆ. ಅಭ್ಯರ್ಥಿ ಆಯ್ಕೆಯು ಬುಧವಾರವೇ ಅಂತಿಮವಾಗುವ ಸಾಧ್ಯತೆ ಇದೆ.

ಗೆಹಲೋತ್ ಮಂಗಳವಾರ ದೆಹಲಿಗೆ ಭೇಟಿ ಕೊಡಬೇಕಿತ್ತು. ಅವರು ಜೈಪುರದಲ್ಲಿಯೇ ಇದ್ದರು. ಆದರೆ, ರಾಜಸ್ಥಾನ ಕಾಂಗ್ರೆಸ್‌ನ ಪ್ರಮುಖ ಮುಖಂಡ ಸಚಿನ್ ಪೈಲಟ್ ಅವರು ಮಂಗಳವಾರ ದೆಹಲಿ ತಲುಪಿದ್ದಾರೆ.

ತಮ್ಮ ಮೂರ್ಖತನದ ಅರಿವು ಗೆಹಲೋತ್ ಅವರಿಗೆ ಆಗಿದೆ ಎಂಬುದು ನಾಯಕತ್ವಕ್ಕೆ ಮನದಟ್ಟಾಗಿದೆ ಎಂದು ಮೂಲಗಳು ಹೇಳಿವೆ. ಆದರೆ, ಈ ಬಂಡಾಯದಲ್ಲಿ ತಮ್ಮ ಪಾತ್ರ ಇಲ್ಲ ಎಂದು ಗೆಹಲೋತ್ ಹೇಳಿದ್ದನ್ನು ಹೈಕಮಾಂಡ್ ನಂಬಿಲ್ಲ.

ರಾಜಿ ಸೂತ್ರ ಏರ್ಪಟ್ಟರೆ, ಗೆಹಲೋತ್ ನಿಷ್ಠರಲ್ಲಿ ಮೂರು-ನಾಲ್ಕು ಮುಖಂಡರಿಗೆ ಎಚ್ಚರಿಕೆ ನೀಡಿ ಸುಮ್ಮನಾಗುವ ಸಾಧ್ಯತೆ ಇದೆ.

ಪಿಎಫ್‌ಐನ 80 ಮಂದಿ ಬಂಧನ

ಒಂದನೇ ಪುಟದಿಂದ

'ಆಯಾ ಠಾಣೆ ಪೊಲೀಸರೇ, ಬಂಧಿತರನ್ನು ತಹಶೀಲ್ದಾರ್ ಎದುರು ಹಾಜರುಪಡಿಸಿ ಮುಚ್ಚಳಿಕೆ ಬರೆಸಿಕೊಂಡಿದ್ದಾರೆ. ಮುಚ್ಚಳಿಕೆ ಬರೆದುಕೊಡಲು ಒಪ್ಪದ ಆರೋಪಿಗಳನ್ನು ಜೈಲಿಗೆ ಕಳುಹಿಸಿದ್ದಾರೆ' ಎಂದೂ ಹೇಳಿದರು.

'ಮುಚ್ಚಳಿಕೆ ಬರೆದುಕೊಟ್ಟಿರುವ ಕೆಲ ವ್ಯಕ್ತಿಗಳನ್ನು ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ. ಅವರೆಲ್ಲರ ಮೇಲೆ ಕಣ್ಣಿಡಲಾಗುವುದು. ಯಾವುದಾದರೂ ಕೃತ್ಯದಲ್ಲಿ ತೊಡಗಿದ್ದು ಕಂಡುಬಂದರೆ, ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದರು.

ಪೊಲೀಸರ ದಾಳಿ ಖಂಡಿಸಿ ಪ್ರತಿಭಟನೆ: ಪೊಲೀಸರ ದಾಳಿ ಖಂಡಿಸಿ ಪಿಎಫ್‌ಐ ಹಾಗೂ ಎಸ್‌ಡಿಪಿಐ ಕಾರ್ಯಕರ್ತರು ಕೆಲವೆಡೆ ಪ್ರತಿಭಟನೆ ನಡೆಸಿದರು.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿಯಲ್ಲಿ ಠಾಣೆಯ ಪ್ರವೇಶ ದ್ವಾರದ ಬಳಿ ಜಮಾಯಿಸಿದ್ದ ಕಾರ್ಯಕರ್ತರು, ಪೊಲೀಸ್ ವಾಹನ ಅಡ್ಡಗಟ್ಟಿ ಧಿಕ್ಕಾರ ಕೂಗಿದರು. ಕೆಲ ಸಮಯ ತಳ್ಳಾಟ, ನೂಕಾಟ ನಡೆಯಿತು. ರಾಯಚೂರಿನಲ್ಲಿ ತಹಶೀಲ್ದಾರ್ ಕಚೇರಿ ಮುಂದೆಯೂ ಪ್ರತಿಭಟನೆ ನಡೆಸಿದರು.

ಬಂಧಿತರು: ಪಿಎಫ್‌ಐನ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಅಸ್ಗರ್ ಅಲಿ, ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ಅಶ್ಫಾಕ್ ಜಮಖಂಡಿ, ಬೆಳಗಾವಿ ಜಿಲ್ಲೆಯಲ್ಲಿ ಎಸ್‌ಡಿಪಿಐ ಜಿಲ್ಲಾ ಘಟಕದ ಅಧ್ಯಕ್ಷ ಅಬೀದ್ ಖಾನ್ ಕಡೋಲಿ ಹಾಗೂ ಪಿಎಫ್‌ಐ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಝುಕೀವುಲ್ಲಾ ಫೈಜಿ ಅವರನ್ನು ಬಂಧಿಸಲಾಗಿದೆ.

ಪಿಎಫ್‌ಐನ ಮಂಗಳೂರು ಜಿಲ್ಲಾ ಘಟಕ'ದ ಅಧ್ಯಕ್ಷ ಬಂಟ್ವಾಳ ಇಜಾಜ್ ಅಹಮದ್ ಹಾಗೂ 'ಪುತ್ತೂರು ಜಿಲ್ಲಾ ಘಟಕ'ದ ಅಧ್ಯಕ್ಷ ಜಾಬೀರ್ ಅರಿಯಡ್ಕ ಎಂಬುವವರನ್ನು ಬಂಧಿಸಲಾಗಿದೆ.

ಮೈಸೂರಿನಲ್ಲಿ ಪಿಎಫ್‌ಐ ಜಿಲ್ಲಾ ಘಟಕದ ಅಧ್ಯಕ್ಷ ಬಿಲಾಲ್ ಷರೀಫ್, ಚಾಮರಾಜನಗರದ ಪಿಎಫ್‌ಐ ಜಿಲ್ಲಾ ಘಟಕದ ಅಧ್ಯಕ್ಷ ಕಫೀಲ್ ಅಹಮದ್ ಹಾಗೂ ಕಾರ್ಯದರ್ಶಿ ಸುಹೇಬ್ ಖಾನ್, ಹಾಸನದ ಎಸ್‌ಡಿಪಿಐ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದಿಕ್ ಆನೆಮಹಲ್, ಪ್ರಧಾನ ಕಾರ್ಯದರ್ಶಿ ಸೈಯದ್ ಫರೀದ್, ಮಂಡ್ಯದ ಪಿಎಫ್‌ಐ ಜಿಲ್ಲಾ ಘಟಕ ಅಧ್ಯಕ್ಷ ಸಯ್ಯದ್ ಇರ್ಫಾನ್ ಅವರನ್ನು ಬಂಧಿಸಲಾಗಿದೆ.

ರಾಯಚೂರಿನಲ್ಲಿ ಪಿಎಫ್‌ಐ ಜಿಲ್ಲಾ ಘಟಕದ ಕಾರ್ಯದರ್ಶಿ ಅಸೀಮ್ ಸಿರ್ಕಾಜಿ, ಬೀದರ್ ಜಿಲ್ಲೆಯ ಪಿಎಫ್‌ಐ ಜಿಲ್ಲಾ ಘಟಕದ ಅಧ್ಯಕ್ಷ ಅಬ್ದುಲ್ ಕರೀಮ್, ಎಸ್‌ಡಿಪಿಐ ಪಕ್ಷದ ಜಿಲ್ಲಾ ಘಟಕದ ಕಾರ್ಯದರ್ಶಿ ಶೇಖ್ ಮಕ್ಸೂದ್ ಎಂಬುವರನ್ನು ಬಂಧಿಸಲಾಗಿದೆ. ಕೊಪ್ಪಳದಲ್ಲಿ ಪಿಎಫ್‌ಐ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಲೀಂ ಖಾದ್ರಿ ಮತ್ತು ಸಿಎಫ್‌ಐ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಸೈಯದ್ ಸರ್ಫರಾಜ್ ಹುಸೇನ್, ಯಾದಗಿರಿ ಎಸ್‌ಡಿಪಿಐ ಜಿಲ್ಲಾ ಘಟಕದ ಅಧ್ಯಕ್ಷ ಬಂದೇನವಾಜ ಗೋಗಿ, ಕಾರ್ಯದರ್ಶಿಗಳಾದ ಮಹಮ್ಮದ್ ಹಸೀಮ್ ಪಟೇಲ್ ಗೋಗಿ, ಶೇಖ್ ಅನ್ವರ್ ಎಂಬುವರನ್ನು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಲಾಗಿದೆ.

ಪಿಎಫ್‌ಐ ನಿಷೇಧಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ. ಸಂಘಟನೆಯ ಅನೇಕ ಕಾರ್ಯಕರ್ತರು, ಮುಖಂಡರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ

ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಶಾಸಕ

ಪಿಎಫ್‌ಐ ನಿಷೇಧಕ್ಕೆ ಪೂರಕವಾದ ದಾಖಲೆಗಳನ್ನು ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಕಳಿಸಿದ್ದೇವೆ

ಆರಗ ಜ್ಞಾನೇಂದ್ರ, ಗೃಹ ಸಚಿವ

ದೇಶ ವಿರೋಧಿ ಕೃತ್ಯ ನಡೆಸಿದ್ದರೆ ಎಸ್‌ಡಿಪಿಐ, ಪಿಎಫ್‌ಐ ಮುಖಂಡರ ಬಂಧನ ಸರಿ. ಬಿಜೆಪಿಯ ಕೆಲ ಸಂಘಟನೆಗಳು ವಿರುದ್ಧವೂ ಕ್ರಮ ಕೈಗೊಳ್ಳಬೇಕು. ಕೇವಲ ಎರಡು ಸಂಘಟನೆಗಳೇ ದೇಶ ವಿರೋಧಿ ಕೆಲಸ ಮಾಡುತ್ತಿಲ್ಲ

ಡಿ.ಕೆ.ಸುರೇಶ್, ಸಂಸದ

7 ರಾಜ್ಯಗಳಲ್ಲಿ 230ಕ್ಕೂ ಹೆಚ್ಚು ಮಂದಿ ಬಂಧನ

ಒಂದನೇ ಪುಟದಿಂದ

ಉತ್ತರ ಪ್ರದೇಶದ 26 ಜಿಲ್ಲೆಗಳಲ್ಲಿರುವ ಪಿಎಫ್‌ಐಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ದಾಖಲೆಗಳು ಮತ್ತು ಸಾಕ್ಷ್ಯಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಈಗ ದೊರೆತಿರುವ ಸಾಕ್ಷ್ಯಗಳು ಮತ್ತು ದಾಖಲೆಗಳ ಆಧಾರದಲ್ಲಿ ಇನ್ನಷ್ಟು ಕ್ರಮ ಕೈಗೊಳ್ಳುವ ಬಗ್ಗೆ ಚಿಂತನೆ ನಡೆದಿದೆ ಎಂದು ಉತ್ತರ ಪ್ರದೇಶದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಪ್ರಶಾಂತ್ ಕುಮಾರ್ ಹೇಳಿದ್ದಾರೆ.

ದೆಹಲಿಯ ನಿಜಾಮುದ್ದೀನ್, ಶಹೀನ್‌ಬಾಗ್ ಸೇರಿ ಹಲವೆಡೆ ಶೋಧ ನಡೆಸಲಾಗಿದೆ. ಶೋಧಕ್ಕೆ ನೆರವಾಗುವುದಕ್ಕಾಗಿ ಹಲವು ಪ್ರದೇಶಗಳಲ್ಲಿ ಅರೆ ಸೇನಾ ಪಡೆಗಳನ್ನೂ ನಿಯೋಜಿಸಲಾಗಿತ್ತು.

ಪಿಎಫ್‌ಐ 2006ರಲ್ಲಿ ಸ್ಥಾಪನೆಗೊಂಡಿದೆ. ತುಳಿತಕ್ಕೊಳಗಾದ ಜನರಿಗೆ ನೆರವಾಗುವುದು ತನ್ನ ಉದ್ದೇಶ ಎಂದು ಹೇಳಿಕೊಂಡಿದೆ. ಮಂಗಳವಾರದ ಕಾರ್ಯಾಚರಣೆ ಕುರಿತು ಸಂಸ್ಥೆಯು ಅಧಿಕೃತವಾಗಿ ಪ್ರತಿಕ್ರಿಯೆ ನೀಡಿಲ್ಲ.

ನಡ್ಡಾ ಹೇಳಿಕೆಗೆ ತಿರುಗೇಟು: ಕೇರಳವು ಭಯೋತ್ಪಾದನೆಯ ಕೇಂದ್ರವಾಗಿದೆ ಎಂಬ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿಕೆಗೆ ಅಲ್ಲಿ ಆಡಳಿತಾರೂಢ ಸಿಪಿಎಂ ಆಕ್ರೋಶ ವ್ಯಕ್ತಪಡಿಸಿದೆ. ರಾಜ್ಯದ ಕೋಮು ಸಾಮರಸ್ಯದ ವಾತಾವರಣವನ್ನು ಕದಡುವ ಯತ್ನ ಇದು ಎಂದು ಹೇಳಿದೆ.

ರಾಜ್ಯದಲ್ಲಿ ಆರ್‌ಎಸ್‌ಎಸ್ ಮತ್ತು ಪಿಎಫ್‌ಐ ಹತ್ಯೆ ಮತ್ತು ಪ್ರತೀಕಾರದ ಹತ್ಯೆಯಲ್ಲಿ ತೊಡಗಿವೆ. ಈ ರಾಜಕೀಯ ಹತ್ಯೆಗಳನ್ನು ಮರೆ ಮಾಚುವುದಕ್ಕಾಗಿ ಸುಳ್ಳು ಆರೋಪಗಳನ್ನು ಮಾಡಲಾಗುತ್ತಿದೆ. ನಡ್ಡಾ ಅವರ ಹೇಳಿಕೆಯು 'ಕೋಮು ಧ್ರುವೀಕರಣದ ಯತ್ನ. ಹತ್ಯೆಯಂತಹ ಪ್ರಚೋದನಕಾರಿ ಕೃತ್ಯದಲ್ಲಿ ತೊಡಗದಂತೆ ಬಿಜೆಪಿ ಅಧ್ಯಕ್ಷರು ಆರ್‌ಎಸ್‌ಎಸ್‌ಗೆ ಸಲಹೆ ನೀಡಬೇಕು. ಎಲ್ಲ ತೀವ್ರವಾದಿ ಸಂಘಟನೆಗಳಿಂದ ನಡೆಯುವ ಹಿಂಸಾ ಕೃತ್ಯಗಳ ಬಗ್ಗೆಯೂ ಎಲ್‌ಡಿಎಫ್ ಸರ್ಕಾರ ಕಠಿಣ ಕ್ರಮ ಕೈಗೊಳ್ಳುತ್ತಿದೆ' ಎಂದು ಸಿಪಿಎಂ ಹೇಳಿದೆ.

ಯಾವುದೇ ಸಂಘಟನೆಯನ್ನು ನಿಷೇಧಿಸಬೇಕು ಎಂದಿದ್ದರೆ ಅದು ಆರ್‌ಎಸ್‌ಎಸ್. ಕೋಮುವಾದಿ ಚಟುವಟಿಕೆ ನಡೆಸುವ ಮುಖ್ಯ ಸಂಘಟನೆಯೇ ಅದು. ಅದನ್ನು ನಿಷೇಧಿಸಲಾಗುವುದೇ?

ಎಂ.ವಿ. ಗೋವಿಂದನ್, ಸಿಪಿಎಂ ಕೇರಳ ರಾಜ್ಯ ಕಾರ್ಯದರ್ಶಿ

ನಿಧನ ವಾರ್ತೆ

ನೂರಾನ



ಬೆಂಗಳೂರು: ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಮಾರುಕಟ್ಟೆ ವಿಭಾಗದ ಡೆಪ್ಯುಟಿ ಜನರಲ್ ಮ್ಯಾನೇಜರ್ ಆಗಿದ್ದ ನೂರಾನ (58) ಸೋಮವಾರ ನಗರದಲ್ಲಿ ನಿಧನರಾದರು.

ನೂರಾನ ಅವರು ರೈಲ್ವೆ ಇಲಾಖೆಯಲ್ಲಿಯೂ ಕೆಲಸ ಮಾಡಿದ್ದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಅಂತಿಮ ಸಂಸ್ಕಾರ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಹುಲ್ ಗಾಂಧಿ ಕಾಂಗ್ರೆಸ್ ಅಧ್ಯಕ್ಷರಾಗಲಿ: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಾಂಗ್ರೆಸ್ ಹಾಗೂ ದೇಶದ ಉಳಿವಿಗಾಗಿ ರಾಹುಲ್ ಗಾಂಧಿ ಅವರು ಎಐಸಿಸಿ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಹಿರಂಗವಾಗಿ ಮನವಿ ಮಾಡಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೇಶ ಹಾಗೂ ಪಕ್ಷದ ಏಕತೆ ಕಾಪಾಡಲು ಗಾಂಧಿ ಕುಟುಂಬದಿಂದ ಮಾತ್ರ ಸಾಧ್ಯ. ರಾಹುಲ್ ಗಾಂಧಿ ಪಕ್ಷದ ಅಧ್ಯಕ್ಷರಾಗಬೇಕು ಎಂಬುದು ಕಾರ್ಯಕರ್ತರ ಬೇಡಿಕೆ. ಬಿಕ್ಕಟ್ಟಿನ ಸಂದರ್ಭ ಪಕ್ಷದ ನಾಯಕತ್ವವನ್ನು ಒಪ್ಪಿಕೊಳ್ಳಬೇಕು' ಎಂದು ಕೋರಿದರು.

'ರಾಹುಲ್ ಗಾಂಧಿ ಪರಿಶ್ರಮದಿಂದ ಕೆಲಸ ಮಾಡುತ್ತಾರೆ. ಅವರು ದೇಶವನ್ನು ರಕ್ಷಿಸುವ ಸಂಪೂರ್ಣ ವಿಶ್ವಾಸವಿದೆ. ಅಧ್ಯಕ್ಷ ಸ್ಥಾನದ ಹೊಣೆಗಾರಿಕೆಯನ್ನು ತಿರಸ್ಕರಿಸಬಾರದು' ಎಂದು ಅವರು ಮನವಿ ಮಾಡಿಕೊಂಡರು.

'ಲಂಚ, ಮಂಚ; ಬಿಜೆಪಿ ಬಳುವಳಿ': 'ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ಜನರು ಭ್ರಷ್ಟ ಸರ್ಕಾರ ಎಂಬ ಬಿರುದು ನೀಡಿದ್ದಾರೆ. ಲಂಚ ಮತ್ತು ಮಂಚ ಬಿಜೆಪಿಯ ಬಳುವಳಿ' ಎಂದು ಡಿ.ಕೆ. ಶಿವಕುಮಾರ್ ಟೀಕಿಸಿದರು.

ಡಿ.ಕೆ.ಶಿ ಜಾಮೀನಿನ ಮೇಲೆ ಇದ್ದಾರೆ' ಎಂಬ ಸಚಿವ ಆರ್. ಅಶೋಕ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿ 40 ಪರ್ಸೆಂಟ್ ಸರ್ಕಾರ ಅಧಿಕಾರದಲ್ಲಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಬಿಜೆಪಿ ಆಡಳಿತದ ಅವಧಿಯಲ್ಲಿ ರಾಜ್ಯಕ್ಕೆ ಕೆಟ್ಟ ಹೆಸರು ಬಂದಿದೆ. ಭ್ರಷ್ಟಾಚಾರದ ಆರೋಪವನ್ನು ಮೊದಲು ತೊಳೆದುಕೊಳ್ಳಿ' ಎಂದು ಅವರು ಕಿಡಿಕಾರಿದರು.

'ಆಪರೇಷನ್ ಕಮಲಕ್ಕೆ ಮುಂದಾಗಿದ್ದ ಬಿಜೆಪಿಯನ್ನು ತಡೆದು ಕಾಂಗ್ರೆಸ್ ಶಾಸಕರನ್ನು ರಕ್ಷಣೆ ಮಾಡಿದ್ದೆ. ಅದೇ ಕಾರಣಕ್ಕೆ ನನ್ನ ವಿರುದ್ಧ ಹಲವು ಪ್ರಕರಣಗಳನ್ನು ದಾಖಲಿಸಲಾಗಿದೆ. ಮೂರು ವರ್ಷಗಳಿಂದ ನನಗೆ ಏನನ್ನೂ ಮಾಡಲಾಗಿಲ್ಲ. ಮುಂದೆ ಕೂಡ ಏನೂ ಮಾಡಲು ಆಗದು' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.00	4,414	7,113
ಹಾರಂಗಿ	2,859	2,857.42	745	1,450
ಕಬಿನಿ	2,284	2,282.87	1,920	1,000
ಹೇಮಾವತಿ	2,922	2,921.95	3,289	3,225
ಲಿಂಗನಮಕ್ಕಿ	1,819	1,816	4,148	8,983
ಸೂಪಾ (ಮೀ)	564	553.95	2,568	3,840
ಮಾಣಿ	594	590	523	719
ತುಂಗಭದ್ರಾ	1,633	1,633	9,629	11,600
ಮಲಪ್ರಭಾ	2,079.50	2,079.50	694	694
ಘಟಪ್ರಭಾ	2,175	2,175	2,205	2,205
ಭದ್ರಾ	186	184	3,138	2,850
ಆಲಮಟ್ಟಿ (ಮೀ)	519.60	519.60	9,136	9,136
ನಾರಾಯಣಪುರ (ಮೀ)	492.25	492.06	8,730	9,000

* ನೆಲಮಟ್ಟದಿಂದ

ವಿದ್ಯುತ್‌ಚಾಲಿತ ವಾಹನಗಳ ಬ್ಯಾಟರಿ ಸುರಕ್ಷತೆ: ಅವಧಿ ವಿಸ್ತರಣೆ

ನವದೆಹಲಿ: ವಿದ್ಯುತ್ ಚಾಲಿತ ವಾಹನಗಳಿಗೆ ಅಳವಡಿಸುವ ಬ್ಯಾಟರಿಯನ್ನು ಹೆಚ್ಚು ಸುರಕ್ಷಿತವಾಗಿಸಲು ವಾಹನ ತಯಾರಿಕಾ ಸಂಸ್ಥೆಗಳು ಕಠಿಣ ಮಾನದಂಡ ಅಳವಡಿಸಿಕೊಳ್ಳಲು ಹೆಚ್ಚಿನ ಸಮಯಾವಕಾಶವನ್ನು ಕೇಂದ್ರ ಭೂಸಾರಿಗೆ ಸಚಿವಾಲಯವು ನೀಡಿದೆ.

ಮೊದಲ ಹಂತದ ಸುರಕ್ಷತಾ ಮಾನದಂಡಗಳನ್ನು ಡಿಸೆಂಬರ್ 1ರೊಳಗೆ ಹಾಗೂ ಎರಡನೇ ಹಂತದ ಸುರಕ್ಷತಾ ಕ್ರಮಗಳನ್ನು 2023ರ ಮಾರ್ಚ್ 31ರೊಳಗೆ ಅಳವಡಿಸಬೇಕು ಎಂದು ತಿಳಿಸಿದೆ. ಸದ್ಯ, ಅ. 1, 2022ರೊಳಗೆ ಅಳವಡಿಸಲು ಸೂಚಿಸಲಾಗಿತ್ತು.

ಆಶಾ ಪಾರೇಖ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ

ಒಂದನೇ ಪುಟದಿಂದ...

'ಸೆಪ್ಟೆಂಬರ್ 30ರಂದು ನವದೆಹಲಿಯಲ್ಲಿ ನಡೆಯಲಿರುವ 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ಫಾಲ್ಕೆ ಪ್ರಶಸ್ತಿ ತೀರ್ಪುಗಾರರ ಸಮಿತಿಯಲ್ಲಿ ನಟಿಯರಾದ ಹೇಮಾಮಾಲಿನಿ, ಪೂನಂ ಧಿಲ್ಲೋನ್, ಹಿನ್ನೆಲೆ ಗಾಯಕಿ ಆಶಾ ಭೋಂಸ್ಲೆ, ಗಾಯಕ ಉದಿತ್ ನಾರಾಯಣ್ ಮತ್ತು ಕನ್ನಡ ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಇದ್ದರು.

1942ರ ಅಕ್ಟೋಬರ್ 2ರಂದು ಗುಜರಾತಿನಲ್ಲಿ ಜನಿಸಿದ ಆಶಾ ಪಾರೇಖ್ ಅವರು 1952ರಲ್ಲಿ ತಮ್ಮ ಹತ್ತನೇ ವಯಸ್ಸಿನಲ್ಲಿ ಬಿಮಲ್ ರಾಯ್ ಅವರ 'ಮಾ' ಚಿತ್ರದ ಮೂಲಕ ಸಿನಿಮಾ ಜಗತ್ತು ಪ್ರವೇಶಿಸಿದರು. ಅವರು ಶಾಸ್ತ್ರೀಯ ನೃತ್ಯಗಾರ್ತಿಯೂ ಹೌದು.

1959ರಲ್ಲಿ ನಟ ಶಮ್ಮಿ ಕಪೂರ್ ಅವರಿಗೆ ಜೋಡಿಯಾಗಿ 'ದಿಲ್ ದೇಖೆ ದೇಖೊ' ಸಿನಿಮಾದ ಮೂಲಕ ನಾಯಕಿಯಾಗಿ ಬಡ್ತಿ ಪಡೆದ ಆಶಾ, ತಮ್ಮ ಕಾಲಘಟ್ಟದಲ್ಲಿ ಅತಿಹೆಚ್ಚು ಸಂಭಾವನೆ ಪಡೆಯುವ ನಟಿ ಎಂದು ಖ್ಯಾತರಾಗಿದ್ದರು. 'ತೀಸ್ರಿ ಮಂಜಿಲ್', 'ಲವ್ ಇನ್ ಟೋಕಿಯೊ', 'ಮೇರೆ ಸನಂ', 'ಕಟೀ ಪತಂಗ್', 'ಆಯಾ ಸಾವನ್ ಝೂಮ್ ಕೆ', 'ಆನ್ ಮಿಲೊ ಸಜನಾ', 'ಮೇರಾ ಗಾಂವ್ ಮೇರಾ ದೇಶ್' ಅವರಿಗೆ ಜನಪ್ರಿಯತೆ ತಂದುಕೊಟ್ಟ ಸಿನಿಮಾಗಳು. ಅವರು 95ಕ್ಕೂ ಹೆಚ್ಚಿನ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಆಶಾ ಪಾರೇಖ್ ಅವರು 1998ರಿಂದ 2001ರ ವರೆಗೆ ಸೆಂಟರ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್‌ಗೆ (ಸಿಬಿಎಫ್‌ಸಿ) ಮೊದಲ ಮಹಿಳಾ ಅಧ್ಯಕ್ಷೆಯಾಗಿದ್ದರು. 60–70 ದಶಕದಲ್ಲಿ ಸಾಲು ಸಾಲು ಹಿಟ್ ಚಿತ್ರಗಳನ್ನು ನೀಡಿದ್ದ ಆಶಾ ಅವರು, ನಂತರದ ವರ್ಷಗಳಲ್ಲಿ ಸಿನಿಮಾ ತೊರೆದು, ಗುಜರಾತಿ ಟಿವಿ ಧಾರಾವಾಹಿಗಳ ನಿರ್ದೇಶನದತ್ತ ಹೊರಳಿದರು. 1990ರಲ್ಲಿ 'ಕೋರಾ ಕಾಗಜ್' ಎಂಬ ಟಿವಿ ಧಾರವಾಹಿಯಲ್ಲಿಯೂ ಕಾಣಿಸಿಕೊಂಡರು. 2017ರಲ್ಲಿ ಆಶಾ ಅವರ ಆತ್ಮಚರಿತ್ರೆ 'ದಿ ಹಿಟ್ ಗರ್ಲ್' ಪ್ರಕಟವಾಗಿದೆ.

ವಂದೇ ಭಾರತ ಎಕ್ಸ್‌ಪ್ರೆಸ್‌ಗೆ ನಾಳೆ ಚಾಲನೆ

ನವದೆಹಲಿ: ಇದೇ 29ರಂದು ಗುಜರಾತ್‌ಗೆ ಎರಡು ದಿನಗಳ ಕಾಲ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಗಾಂಧಿನಗರ- ಮುಂಬೈಗೆ ಸಂಪರ್ಕ ಕಲ್ಪಿಸುವ ವಂದೇ ಭಾರತ ಎಕ್ಸ್‌ಪ್ರೆಸ್ ಹಾಗೂ ಅಹಮದಾಬಾದ್ ಮೆಟ್ರೊ ರೈಲು ಸೇವೆಗೆ ಚಾಲನೆ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ₹ 29 ಸಾವಿರ ಕೋಟಿಗೆ ಹೆಚ್ಚಿನ ಮೊತ್ತದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಗುಜರಾತ್‌ನಲ್ಲಿ ಮೊದಲ ಬಾರಿಗೆ ನಡೆಯುತ್ತಿರುವ 36ನೇ ರಾಷ್ಟ್ರೀಯ ಕ್ರೀಡಾಕೂಟವನ್ನೂ ಉದ್ಘಾಟಿಸಲಿದ್ದಾರೆ.

ಆರೋಗ್ಯ ಕ್ಷೇತ್ರದಲ್ಲೂ ಹಣ ಮಾಡಿದ್ದ ಕಾಂಗ್ರೆಸ್ ನಾಯಕರು: ಅಮಿತ್ ಶಾ

ಅಹಮದಾಬಾದ್: '2014ರ ಮೊದಲು ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಆ ಪಕ್ಷದ ನಾಯಕರು ಆರೋಗ್ಯ ಕ್ಷೇತ್ರದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಬದಲು ಅದರ ಹೆಸರಿನಲ್ಲಿ ಹಣ ಸಂಪಾದಿಸಿದ್ದಾರೆ' ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಮಂಗಳವಾರ ಆರೋಪಿಸಿದ್ದಾರೆ.

ಗಾಂಧಿನಗರ ಜಲ್ಲೆಯ ಕಲೋಲ್ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಆಯುಷ್ಮಾನ್ ಭಾರತ- ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಗಳ ಅಡಿಯಲ್ಲಿ 60 ಕೋಟಿ ಬಡವರು ₹5 ಲಕ್ಷದವರೆಗೆ ಉಚಿತವಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ಹೇಳಿದ್ದಾರೆ.

ಉದ್ಧವ್ ಠಾಕ್ರೆ ಬಣದ ಅರ್ಜಿ ತಿರಸ್ಕರಿಸಿದ ಸಂವಿಧಾನ ಪೀಠ

ನೈಜ ಶಿವಸೇನಾ: ಶಿಂದೆ ಬಣಕ್ಕೆ ಮೇಲುಗೈ

ನವದೆಹಲಿ (ಪಿಟಿಐ): ತಮ್ಮ ಬಣವನ್ನು ನೈಜ ಶಿವಸೇನಾ ಎಂದು ಮಾನ್ಯ ಮಾಡಿ, ಬಿಲ್ಲು-ಬಾಣ ಒಳಗೊಂಡ ಪಕ್ಷದ ಚಿಹ್ನೆಯನ್ನು ತಮಗೇ ನೀಡಬೇಕೆಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಪುರಸ್ಕರಿಸಿದೆ. ಈ ಕುರಿತ ಪ್ರಕ್ರಿಯೆ ಆರಂಭಿಸುವಂತೆ ಚುನಾವಣಾ ಆಯೋಗಕ್ಕೆ ಮಂಗಳವಾರ ಸೂಚಿಸಿದೆ.

ಶಿಂದೆ ಬಣವನ್ನು ನಿಜವಾದ ಶಿವಸೇನಾ ಎಂದು ಗುರುತಿಸುವ ಚುನಾವಣಾ ಆಯೋಗದ ಪ್ರಕ್ರಿಯೆಗೆ ತಡೆಯೊಡ್ಡಬೇಕೆಂದು ಕೋರಿ ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಬಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ತಿರಸ್ಕರಿಸಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ, ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಮತ್ತು ಪಿ.ಎಸ್.ನರಸಿಂಹ ಅವರನ್ನೊಳಗೊಂಡ ಪೀಠವು 'ಚುನಾವಣಾ ಆಯೋಗದ ಪ್ರಕ್ರಿಯೆಗೆ ತಡೆ ನೀಡಲು ಸಾಧ್ಯವಿಲ್ಲ. ಪಕ್ಷದೊಳಗಿನ ಆಂತರಿಕ ಬಿಕ್ಕಟ್ಟಿನ ಕುರಿತು ಚುನಾವಣಾ ಆಯೋಗವೇ ವಿಚಾರಣೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಲಿದೆ' ಎಂದು ಹೇಳಿದೆ.



ಶಿವಸೇನಾ ಚಿಹ್ನೆ

ಠಾಕ್ರೆ ಬಣದ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಕಪಿಲ್ ಸಿಬಲ್, 'ಶಿಂದೆ ಸೇರಿದಂತೆ ಪಕ್ಷದ ಇತರ ಶಾಸಕರು ಹಿಂದಿನ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ನಾಯಕತ್ವದ ವಿರುದ್ಧ ಬಂಡಾಯವೆದ್ದಿದ್ದರು. ಹೀಗಾಗಿ ಅವರನ್ನು ಪಕ್ಷದಿಂದ ಅನರ್ಹಗೊಳಿಸುವಂತೆ ಈ ವರ್ಷದ ಜೂನ್‌ನಲ್ಲಿ ನೋಟಿಸ್ ನೀಡಲಾಗಿದೆ. ಈ ಸಂಬಂಧದ ಅರ್ಜಿಯ ವಿಚಾರಣೆ ಇನ್ನೂ ಬಾಕಿ ಇದೆ. ಶಿಂದೆ ಈಗ ಶಿವಸೇನಾದ ಭಾಗವಾಗಿಲ್ಲ. ಪಕ್ಷದ ಸದಸ್ಯತ್ವವನ್ನೂ ಹೊಂದಿಲ್ಲ. ಹೀಗಿರುವಾಗ ತಮ್ಮ ಬಣವನ್ನು ನೈಜ ಶಿವಸೇನಾ ಎಂದು ಮಾನ್ಯ ಮಾಡಬೇಕು. ಬಿಲ್ಲು-ಬಾಣ ಒಳಗೊಂಡ ಪಕ್ಷದ ಚಿಹ್ನೆಯನ್ನು ತಮಗೇ ನೀಡಬೇಕೆಂದು ಕೋರಿ ಅವರು ಸಲ್ಲಿಸಿರುವ ಅರ್ಜಿಯನ್ನು ಚುನಾವಣಾ ಆಯೋಗ ಹೇಗೆ ವಿಚಾರಣೆ ನಡೆಸಲಿದೆ' ಎಂದು ಪ್ರಶ್ನಿಸಿದರು.

ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಚುನಾವಣಾ ಆಯೋಗವು ಯಾವ ಬಣ 'ನೈಜ ಶಿವಸೇನಾ' ಎಂಬುದನ್ನಷ್ಟೇ ನಿರ್ಧರಿಸಲಿದೆ. ಹೀಗಾಗಿ ಶಿಂದೆ ಬಣದ ಅರ್ಜಿಯ ವಿಚಾರಣೆ ನಡೆಸಲು ಆಯೋಗಕ್ಕೆ ಅನುಮತಿ ನೀಡಬೇಕು' ಎಂದು ಹೇಳಿದರು.

ಶಿಂದೆ ಬಣದ ಪರ ವಕೀಲ ಎನ್.ಕೆ.ಕೌಲ್, 'ಚುನಾವಣಾ ಚಿಹ್ನೆಯು ಶಾಸಕನೊಬ್ಬನ ಸ್ವತ್ತಲ್ಲ. ಅದು ಯಾರ ಬಣಕ್ಕೆ ಸೇರಿದ್ದು ಎಂಬುದನ್ನು ನಿರ್ಧರಿಸಬೇಕಿರುವುದು ಚುನಾವಣಾ ಆಯೋಗ. ಈ ವಿಚಾರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳದಂತೆ ಆಯೋಗಕ್ಕೆ ನಿರ್ಬಂಧ ವಿಧಿಸಬಾರದು' ಎಂದು ಮನವಿ ಮಾಡಿದರು.

ಚುನಾವಣಾ ಆಯೋಗದ ಪರ ವಕೀಲ ಅರವಿಂದ್ ದಾತರ್, 'ಪಕ್ಷದಲ್ಲಿ ಯಾರಿಗೆ ಬಹುಮತವಿದೆ ಎಂಬುದನ್ನು ನಿರ್ಧರಿಸಲು ಚುನಾವಣಾ ಆಯೋಗವು ಸ್ವತಂತ್ರವಾಗಿದೆ' ಎಂದು ಹೇಳಿದರು.

'ಲೋಕಸಭೆ, ವಿಧಾನಸಭೆಯಲ್ಲಿ ನಮಗೆ ಬಹುಮತವಿದೆ'

ಮುಂಬೈ: 'ಸುಪ್ರೀಂ ಕೋರ್ಟ್‌ನ ತೀರ್ಮಾನವನ್ನು ನಾವು ಸ್ವಾಗತಿಸುತ್ತೇವೆ. ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ನಮ್ಮ ಬಣ ಬಹುಮತ ಹೊಂದಿದೆ. ಚುನಾವಣಾ ಆಯೋಗವು ಸ್ವತಂತ್ರ ಸಾಂವಿಧಾನಿಕ ಸಂಸ್ಥೆ. ಆಯೋಗ ಹಾಗೂ ನ್ಯಾಯಾಂಗದ ಮೇಲೆ ನಮಗೆ ನಂಬಿಕೆ ಇದೆ' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.

'ನ್ಯಾಯಾಂಗದ ಮೇಲೆ ನಮಗೆ ಪೂರ್ಣ ಭರವಸೆ ಇದೆ. ಈಗಾಗಲೇ ಚುನಾವಣಾ ಆಯೋಗಕ್ಕೆ ಹಲವು ದಾಖಲೆಗಳನ್ನು ಸಲ್ಲಿಸಿದ್ದೇವೆ. ಅಗತ್ಯವಿರುವ ಇನ್ನಷ್ಟು ದಾಖಲೆಗಳನ್ನೂ ಒದಗಿಸುತ್ತೇವೆ' ಎಂದು ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಬೆಂಬಲಿಗ, ಮಾಜಿ ಸಂಸದ ಚಂದ್ರಕಾಂತ್ ಖೈರೆ ಹೇಳಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಖ್ಯಾಬಲಕ್ಕೆ ಹೆಚ್ಚು ಪ್ರಾಮುಖ್ಯತೆ ಇದೆ. ನಮಗೆ ಸಂಖ್ಯಾಬಲವಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೂ ವಿಶ್ವಾಸವಿದೆ

ಏಕನಾಥ ಶಿಂದೆ
ಮಹಾರಾಷ್ಟ್ರ ಮುಖ್ಯಮಂತ್ರಿ

ನಿರ್ದಿಷ್ಟ ಕಾರ್ಯವಿಧಾನದ ಅನ್ವಯ ಇಡೀ ಪ್ರಕ್ರಿಯೆ ನಡೆಯಲಿದೆ. ಅದು ಪಾರದರ್ಶಕವಾಗಿರಲಿದೆ. ಅಗತ್ಯವಿದ್ದರೆ ಬಹುಮತ ನಿಯಮ ಅನ್ವಯಿಸುತ್ತೇವೆ

ರಾಜೀವ್ ಕುಮಾರ್
ಮುಖ್ಯ ಚುನಾವಣಾ ಆಯುಕ್ತ

2014ರ ನೇಮಕಾತಿ ಅಕ್ರಮ: ರಾಜಕಾರಣಿಗಳ ಹೆಸರು?

'ಎಫ್‌ಡಿಎ ಸಿದ್ಧಪಡಿಸಿದ್ದ ಪಟ್ಟಿಗೆ ಸಹಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2014-15ನೇ ಸಾಲಿನ ಪ್ರೌಢಶಾಲೆಗಳ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಶಿಕ್ಷಣ ಇಲಾಖೆಯ ನಿರ್ದೇಶಕರು ಸೇರಿದಂತೆ ಆರು ಮಂದಿ ವಿಚಾರಣೆಯನ್ನು ಸಿಐಡಿ ಅಧಿಕಾರಿಗಳು ಮುಂದುವರಿಸಿದ್ದು, ಬಂಧಿತರಿಂದ ಹೇಳಿಕೆ ಪಡೆದುಕೊಳ್ಳುತ್ತಿದ್ದಾರೆ.

ಕರ್ನಾಟಕ ಪಠ್ಯಪುಸ್ತಕ ಸಂಘದ ನಿರ್ದೇಶಕ ಎಂ.ಪಿ. ಮಾದೇಗೌಡ, ಸಮಗ್ರ ಶಿಕ್ಷಣ ಅಭಿಯಾನ ನಿರ್ದೇಶಕಿ ಗೀತಾ, ನಿವೃತ್ತ ಜಂಟಿ ನಿರ್ದೇಶಕರಾದ ಡಿ.ಕೆ. ಶಿವಕುಮಾರ್, ಕೆ. ರತ್ನಯ್ಯ, ಜಿ.ಆರ್. ಬಸವರಾಜ್ ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್ ನರಸಿಂಹರಾವ್ ಅವರನ್ನು ಸೋಮವಾರ ಸಿಐಡಿ ಅಧಿಕಾರಿಗಳು ಬಂಧಿಸಿದ್ದರು. ಎಲ್ಲರೂ ಸಿಐಡಿ ಕಸ್ಟಡಿಯಲ್ಲಿದ್ದಾರೆ.

'ಕೃತ್ಯದಲ್ಲಿ ಭಾಗಿಯಾಗಿರುವ ಬಗ್ಗೆ ಈಗಾಗಲೇ ಪುರಾವೆಗಳನ್ನು ಸಂಗ್ರಹಿಸಲಾಗಿದೆ. ಅವುಗಳನ್ನು ಮುಂದಿಟ್ಟುಕೊಂಡೇ, ಬಂಧಿತ ಆರೋಪಿಗಳನ್ನು ಪ್ರತ್ಯೇಕವಾಗಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಸಹ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಕಡತಗಳ ನಿರ್ವಹಣೆ ಜವಾಬ್ದಾರಿಯನ್ನು ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಕೆ.ಎಸ್. ಪ್ರಸಾದ್‌ಗೆ ವಹಿಸಲಾಗಿತ್ತು. ಜಿಲ್ಲಾವಾರು ನೇಮಕಾತಿ ಮಂಡಳಿಗಳಿಂದ ದಾಖಲೆ ಸಮೇತ ಮಾಹಿತಿ ಸಂಗ್ರಹಿಸಿದ್ದ ಪ್ರಸಾದ್, ಹೆಚ್ಚುವರಿ ಪಟ್ಟಿ ಸಿದ್ಧಪಡಿಸಿದ್ದ. ಅದುವೇ ಅಂತಿಮ ಪಟ್ಟಿಯೆಂದು ಹೇಳಿ ನಮ್ಮಿಂದ ಸಹಿ ಮಾಡಿಸಿದ್ದ' ಎಂಬುದಾಗಿ ನಿರ್ದೇಶಕರು ಸಿಐಡಿ ಬಳಿ ಹೇಳಿರುವುದಾಗಿ ಮೂಲಗಳು ಮಾಹಿತಿ ನೀಡಿವೆ.

'ಹುದ್ದೆಗೆ ಅರ್ಹರಲ್ಲದ ಅಭ್ಯರ್ಥಿಗಳ ಹೆಸರುಗಳನ್ನು ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಿದ್ದ ಮಾಹಿತಿ ನಮಗೆ ಗೊತ್ತಿರಲಿಲ್ಲ. ಹೆಚ್ಚು ಪರಿಶೀಲನೆ ಸಹ ನಡೆಸಲಿಲ್ಲ. ಎಫ್‌ಡಿಎ ಸಿದ್ಧಪಡಿಸಿದ್ದ ಪಟ್ಟಿಯೇ ನಿಜವೆಂದು ನಂಬಿ, ನೇಮಕಾತಿ ಆದೇಶ ಹಾಗೂ ಇತರೆಡೆ ಸಹಿ ಮಾಡಿದೆವು' ಎಂಬುದಾಗಿಯೂ ನಿರ್ದೇಶಕರು ತಿಳಿಸಿರುವುದಾಗಿ ಮೂಲಗಳು ಹೇಳಿವೆ.

ನೋಟಿಸ್ ನೀಡಲು ಸಿದ್ಧತೆ: 'ನೇಮಕಾತಿ ಪ್ರಕ್ರಿಯೆ ವೇಳೆ ತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಸಲು ಕೆಲ ಅಧಿಕಾರಿಗಳು ಹಾಗೂ ರಾಜಕಾರಣಿಗಳು ಪ್ರಭಾವ ಬೀರಿದ್ದರೆಂಬುದು ಗೊತ್ತಾಗಿದೆ. ಈ ಬಗ್ಗೆ ಎಫ್‌ಡಿಎ ಪ್ರಸಾದ್ ಹಾಗೂ ನಿರ್ದೇಶಕರು ಕೆಲವರ ಹೆಸರು ಹೇಳಿದ್ದಾರೆ. ಅವರೆಲ್ಲರಿಗೂ ನೋಟಿಸ್ ನೀಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ನಿಗದಿತ ದಿನದಂದು ವಿಚಾರಣೆಗೆ ಹಾಜರಾಗುವಂತೆ ನೋಟಿಸ್‌ನಲ್ಲಿ ತಿಳಿಸಲಾಗುವುದು. ಹಾಜರಾಗದಿದ್ದರೆ, ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿವೆ.

ಸುಳ್ಳು ಆರೋಪ: ಎಎಪಿಗೆ ಹೈಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರ ವಿರುದ್ಧ 'ಸುಳ್ಳು' ಆರೋಪಗಳನ್ನು ಮಾಡದಂತೆ ಆಮ್ ಆದ್ಮಿ ಪಾರ್ಟಿ (ಎಎಪಿ) ನಾಯಕರಿಗೆ ದೆಹಲಿ ಹೈಕೋರ್ಟ್ ಮಂಗಳವಾರ ಆದೇಶಿಸಿದೆ.



ಅಲ್ಲದೆ, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಲಾಗಿರುವ, ಗವರ್ನರ್ ವಿರುದ್ಧದ ಮಾನಹಾನಿಕರ ಪೋಸ್ಟ್‌ಗಳು, ವಿಡಿಯೊಗಳು ಹಾಗೂ ಟ್ವೀಟ್‌ಗಳನ್ನು ಹಿಂಪಡೆಯುವಂತೆಯೂ ಹೈಕೋರ್ಟ್ ನಿರ್ದೇಶನ ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಮಿತ್ ಬನ್ಸಲ್, 'ಅರ್ಜಿದಾರರ ಪರವಾಗಿ ಈ ಮಧ್ಯಂತರ ತಡೆಯಾಜ್ಞೆಯನ್ನು ಹೊರಡಿಸಲಾಗಿದೆ' ಎಂದು ಪ್ರಕಟಿಸಿದರು. ಆದೇಶ ತಲುಪಿದ 48 ಗಂಟೆಗಳ ಒಳಗಾಗಿ ಕ್ರಮ ಕೈಗೊಳ್ಳುವಂತೆ ಎಎಪಿ ನಾಯಕರಿಗೆ ಸೂಚಿಸಲಾಗಿದೆ.

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ (ಕೆವಿಐಸಿ) ಚೇರಮನ್ ಆಗಿದ್ದ ಸಂದರ್ಭದಲ್ಲಿ, 2016ರಲ್ಲಿ ಸಕ್ಸೇನಾ ಅವರು ಅಮಾನ್ಯಗೊಂಡ ನೋಟುಗಳ ಚಲಾವಣೆ ಮಾಡಿದ್ದರು ಎಂದು ಎಎಪಿ ನಾಯಕರು ಆರೋಪಿಸಿದ್ದಾರೆ. ₹ 1,400 ಕೋಟಿಯಷ್ಟು ಅವ್ಯವಹಾರವಾಗಿರುವ ಈ ಹಗರಣದಲ್ಲಿ ಸಕ್ಸೇನಾ ಅವರೂ ಶಾಮೀಲಾಗಿದ್ದಾರೆ ಎಂದೂ ಆರೋಪಿಸಿದ್ದಾರೆ.

ಪಾಕ್ ವ್ಯಕ್ತಿ ಬಂಧನ

ನವದೆಹಲಿ (ಪಿಟಿಐ): 20 ವರ್ಷ ವಯಸ್ಸಿನ ಪಾಕಿಸ್ತಾನಿ ವ್ಯಕ್ತಿಯನ್ನು ರಾಜಸ್ಥಾನದ ಶ್ರೀ ಗಂಗನಗರ ವಲಯದ ಭಾರತ– ಪಾಕಿಸ್ತಾನ ಗಡಿ ಬಳಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಸಿಬ್ಬಂದಿ ಮಂಗಳವಾರ ಬಂಧಿಸಿದ್ದಾರೆ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ.

ಅಬಕಾರಿ ನೀತಿ ಹಗರಣ: ಉದ್ಯಮಿ ಬಂಧನ

ನವದೆಹಲಿ (ಪಿಟಿಐ): ನವದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಉದ್ಯಮಿ ವಿಜಯ್ ನಾಯರ್ ಅವರನ್ನು ಸಿಬಿಐ ಮಂಗಳವಾರ ಬಂಧಿಸಿದೆ. ಈ ಹಗರಣದಲ್ಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯ ಅವರೂ ಆರೋಪಿಯಾಗಿದ್ದಾರೆ.

'ನಾಯರ್ ಕೆಲ ದಿನಗಳಿಂದ ವಿದೇಶದಲ್ಲಿದ್ದರು. ವಿಚಾರಣೆಗೆ ಹಾಜರಾಗುವಂತೆ ಅವರಿಗೆ ಸಿಬಿಐ ಸೂಚಿಸಿತ್ತು. ಅಬಕಾರಿ ಲೈಸೆನ್ಸ್ ನೀಡುವ ಅಕ್ರಮದ ಸಂಚಿನಲ್ಲಿ ಇವರು ಭಾಗಿಯಾಗಿರುವ ಆರೋಪದಡಿ ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ವಾಯುಗಡಿ ರಕ್ಷಣಾ ಉದ್ದೇಶದ ಕ್ಷಿಪಣಿ: ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ಹತ್ತಿರದ ವ್ಯಾಪ್ತಿ ಪ್ರದೇಶದಲ್ಲಿ ವಾಯುಗಡಿಯ ಸಂರಕ್ಷಣೆಗಾಗಿ ಅಭಿವೃದ್ಧಿಪಡಿಸಲಾಗಿರುವ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮಂಗಳವಾರ ಇಲ್ಲಿ ಯಶಸ್ವಿಯಾಗಿ ಕೈಗೊಂಡಿತು.

ದೇಶೀಯವಾಗಿ, ಹೈದರಾಬಾದ್‌ನಲ್ಲಿನ ಇಮರತ್ ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿಪಡಿಸಿರುವ ಈ ವಾಯುಗಡಿ ರಕ್ಷಣಾ ವ್ಯವಸ್ಥೆಯ ಪ್ರಯೋಗವು ಒಡಿಶಾದ ಕಡಲತೀರ ಪ್ರದೇಶ ಚಾಂಡಿಪುರದಲ್ಲಿ ನಡೆಯಿತು. ಡಿಆರ್‌ಡಿಒ ಈ ಕುರಿತಂತೆ ಟ್ವೀಟ್ ಮಾಡಿದೆ.

'ಉಲ್ಲೇಖಿತ ಕ್ಷಿಪಣಿ ವ್ಯವಸ್ಥೆಯಲ್ಲಿ ಹಲವು ನೂತನ ತಂತ್ರಜ್ಞಾನ ಅಳವಡಿಸಿದ್ದು, ಪರೀಕ್ಷಾರ್ಥ ಪ್ರಯೋಗದಲ್ಲಿ ನಿರೀಕ್ಷಿತ ಫಲಿತಾಂಶ ವ್ಯಕ್ತವಾಗಿದೆ. ಎಂದು ರಕ್ಷಣಾ ಸಚಿವಾಲಯವು ಪ್ರತಿಕ್ರಿಯಿಸಿದೆ.

ಪರಿಶಿಷ್ಟ ವಿದ್ಯಾರ್ಥಿ ಸಾವು, ಶಿಕ್ಷಕ ನಾಪತ್ತೆ

ತರಗತಿ ಪರೀಕ್ಷೆಯಲ್ಲಿ ತಪ್ಪು ಉತ್ತರ ಬರೆದಿದ್ದಕ್ಕೆ ತೀವ್ರ ಹಲ್ಲೆ

ಪ್ರಜಾವಾಣಿ ವಾರ್ತೆ

ಲಖನೌ: ತರಗತಿ ಪರೀಕ್ಷೆಯಲ್ಲಿ ತಪ್ಪು ಉತ್ತರವನ್ನು ಬರೆದಿದ್ದಾನೆ ಎಂದು ಶಿಕ್ಷಕ ತೀವ್ರವಾಗಿ ಥಳಿಸಿದ್ದರಿಂದಾಗಿ ಗಂಭೀರವಾಗಿ ಗಾಯಗೊಂಡು ಪ್ರಜ್ಞಾಹೀನನಾಗಿದ್ದ ಪರಿಶಿಷ್ಟ ಜಾತಿಯ, 10ನೇ ತರಗತಿ ವಿದ್ಯಾರ್ಥಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಉತ್ತರ ಪ್ರದೇಶದ ಔರೈಯ ಜಿಲ್ಲೆ ಅಚಲ್ದಾದಲ್ಲಿ 15 ದಿನದ ಹಿಂದೆ ಹಲ್ಲೆ ನಡೆದಿತ್ತು. ತರಗತಿ ಕೊಠಡಿಯಲ್ಲೇ ಪ್ರಜ್ಞಾಹೀನನಾಗಿದ್ದ ವಿದ್ಯಾರ್ಥಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ವಿದ್ಯಾರ್ಥಿ ಸೋಮವಾರ ಮೃತಪಟ್ಟಿದ್ದಾನೆ.

ಕುಟುಂಬದವರ ದೂರು ಆಧರಿಸಿ ಆರೋಪಿ, ಸಮಾಜವಿಜ್ಞಾನ ಶಿಕ್ಷಕ ಅಶ್ವಿನಿ ಸಿಂಗ್ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿ ಶಿಕ್ಷಕನು ಸದ್ಯ ತಲೆಮರೆಸಿಕೊಂಡಿದ್ದು, ಸದ್ಯ, ಸರ್ಕಾರ ಆತನನ್ನು ಸೇವೆಯಿಂದ ಅಮಾನತು ಪಡಿಸಿದೆ.



ಉತ್ತರಪ್ರದೇಶದ ಔರೈಯದಲ್ಲಿ ಶಿಕ್ಷಕನ ತೀವ್ರ ಹಲ್ಲೆಯಿಂದಾಗಿ ಮೃತಪಟ್ಟಿದ್ದ ವಿದ್ಯಾರ್ಥಿಯ ಬಂಧುವಿಗೆ ಪೊಲೀಸ್ ಅಧಿಕಾರಿ ಸಾಂತ್ವನ ಹೇಳಿದರು –ಪಿಟಿಐ ಚಿತ್ರ

ಉದ್ವಿಗ್ನ ಸ್ಥಿತಿ: ವಿದ್ಯಾರ್ಥಿಯ ಸಾವಿಗೆ ಅಚಲ್ದಾದಲ್ಲಿ ತೀವ್ರ ಆಕ್ರೋಶ ಕಂಡು ಬಂದಿದ್ದು, ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು. ಜನರು ಬೀದಿಗಿಳಿದು ರಸ್ತೆತಡೆ ನಡೆಸಿ ವಾಹನಗಳ ಮೇಲೆ ಕಲ್ಲುತೂರಿದರು. ಗುಂಪು ಪೊಲೀಸರ ಮೇಲೂ ಹಲ್ಲೆಗೆ ಮುಂದಾಗಿದ್ದು, ಪರಿಸ್ಥಿತಿ ನಿಯಂತ್ರಣ ತಪ್ಪಿತು.

'ಮರಣೋತ್ತರ ಪರೀಕ್ಷೆಯಲ್ಲಿ ಮೇಲ್ನೋಟಕ್ಕೆ ವಿದ್ಯಾರ್ಥಿಯ ದೇಹದ ಮೇಲೆ ಗಾಯದ ಗುರುತುಗಳಿಲ್ಲ. ಆತನಿಗೆ ಕಿಡ್ನಿವೈಫಲ್ಯ ಸಮಸ್ಯೆ ಇತ್ತು. ಎರಡು ವರ್ಷದಿಂದ ಚಿಕಿತ್ಸೆ ಪಡೆಯುತ್ತಿದ್ದ. ಸೋಂಕಿನಿಂದ ರಕ್ತ ಕಲುಷಿತಗೊಂಡಿರುವುದು (ಸೆಪ್ಟಿಸೆಮಿಯಾ) ಸಾವಿಗೆ ಕಾರಣ ಎಂದು ಮರಣೋತ್ತರ ಪರೀಕ್ಷೆಯಿಂದ ತಿಳಿದುಬಂದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಇಡಬ್ಲ್ಯುಎಸ್ ಕೋಟ: ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ಒದಗಿಸುವ ಸಂವಿಧಾನದ 103ನೇ ತಿದ್ದುಪಡಿಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿರುವ ಸುಪ್ರೀಂಕೋರ್ಟ್, ಮಂಗಳವಾರ ತನ್ನ ತೀರ್ಪನ್ನು ಕಾಯ್ದಿರಿಸಿತು.

ಮುಖ್ಯನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ಐವರು ಸದಸ್ಯರನ್ನು ಒಳಗೊಂಡ ಸಾಂವಿಧಾನಿಕ ಪೀಠವು ಈ ವಿಷಯಕ್ಕೆ ಸಂಬಂಧಿಸಿ ಕಳೆದ 6 ದಿನಗಳ ಕಾಲ ವಾದ–ಪ್ರತಿವಾದಗಳನ್ನು ಆಲಿಸಿದೆ. ನ್ಯಾಯಮೂರ್ತಿಗಳಾದ ದಿನೇಶ ಮಾಹೇಶ್ವರಿ, ಎಸ್.ರವೀಂದ್ರ ಭಟ್, ಬೇಲಾ ಎಂ.ತ್ರಿವೇದಿ, ಜೆ.ಬಿ. ಪಾರ್ದಿ ವಾಲಾ ಅವರು ಈ ಪೀಠದಲ್ಲಿದ್ದಾರೆ.

ಈ ತಿದ್ದುಪಡಿಯ ಸಿಂಧುತ್ವವನ್ನು ಪ್ರಶ್ನಿಸಿ 40ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ರವಿವರ್ಮ ಕುಮಾರ್, ಪಿ.ವಿಲ್ಸನ್, ಮೀನಾಕ್ಷಿ ಅರೋರಾ, ಸಂಜಯ್ ಪಾರೀಖ್ ಹಾಗೂ ಇತರರು ವಾದ ಮಂಡಿಸಿದ್ದರು.

ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ್ದರು.

ಮೂರ್ತಿಗಳ ವಿರೂಪ: ಮುಸ್ಲಿಂ ಸಹೋದರಿಯರ ಬಂಧನ

ಹೈದರಾಬಾದ್: ದುರ್ಗೆಯ ಹಾಗೂ ಮಾತೆ ಮೇರಿಯ ಮೂರ್ತಿಯನ್ನು ಕಲ್ಲು ಹೊಡೆದು ವಿರೂಪಗೊಳಿಸಿದ ಇಬ್ಬರು ಬುರ್ಖಾ ಧರಿಸಿದ್ದ ಮುಸ್ಲಿಂ ಸಹೋದರಿಯರನ್ನು ಹೈದರಾಬಾದ್ ಪೊಲೀಸರು ಮಂಗಳವಾರ ಬೆಳಿಗ್ಗೆ ಬಂಧಿಸಿದ್ದಾರೆ.

'ಸಹೋದರಿಯರು ಸುಮಾರು 20 ವರ್ಷ ಆಸುಪಾಸಿನವರು. ತುಂಬಾ ವಿದ್ಯಾವಂತರಂತೆ ಕಾಣುತ್ತಾರೆ. ಮಸಬ್ ಟ್ಯಾಂಕ್ ಬಳಿ ಅವರು ವಾಸವಿದ್ದಾರೆ. ಆದರೆ, ಮಾನಸಿಕವಾಗಿ ಅಸ್ವಸ್ಥರಂತೆ ಕಾಣುತ್ತಿದ್ದಾರೆ' ಎಂದು ಡಿಜಿಪಿ ರಾಜೇಶ್ ಚಂದ್ರ ಹೇಳಿದರು.


ಮಂಗಳವಾರ ಸಂಜೆ ವೇಳೆವರೆಗೂ ಈ ಸಹೋದರಿಯರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಿಲ್ಲ.

ಪೊಲೀಸರ ನಡೆಗೆ ವಿರೋಧ: ಬಲಪಂಥೀಯ ಹೋರಾಟಗಾರರು ತೆಲಂಗಾಣ ಪೊಲೀಸರ ನಡೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಹೋದರಿಯರನ್ನು ಮಾನಸಿಕ ಅಸ್ವಸ್ಥರು ಎಂದು ಬಿಂಬಿಸುತ್ತಿದ್ದಾರೆ. ಆ ಮೂಲಕ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿದ್ದಾರೆ ಎಂದಿದ್ದಾರೆ.

ಎಂ.ಜಿ.ಆರ್ ಪ್ರತಿಮೆಗೆ ಹಾನಿ

ಚೆನ್ನೈ (ಪಿಟಿಐ): ಇಲ್ಲಿನ ತೇನಾಂಪೇಟೆಯಲ್ಲಿರುವ ಎಂ.ಜಿ. ರಾಮಚಂದ್ರನ್ (ಎಂ.ಜಿ.ಆರ್) ಅವರ ಪ್ರತಿಮೆಯನ್ನು ಧ್ವಂಸಗೊಳಿಸಲಾಗಿದ್ದು ತಕ್ಷಣವೇ ದುಷ್ಕರ್ಮಿಗಳನ್ನು ಬಂಧಿಸಬೇಕು ಎಂದು ತಮಿಳುನಾಡಿನ ವಿರೋಧ ಪಕ್ಷ ಎಐಎಡಿಎಂಕೆಯು, ಆಡಳಿತರೂಢ ಸರ್ಕಾರವನ್ನು ಆಗ್ರಹಿಸಿದೆ.

'ನಮ್ಮ ನಾಯಕನ ಗೌರವಕ್ಕೆ ಕಳಂಕ ತರಲು ಹಾಗೂ ಸಾರ್ವಜನಿಕ ಶಾಂತಿ ಕದಡಲು ಬಯಸುವವರನ್ನು ಬಂಧಿಸುವಂತೆ ಆಗ್ರಹಿಸುತ್ತೇನೆ' ಎಂದರು.



ಸುಭಾಷಿತ

ಶಿಕ್ಷಣ ಎನ್ನುವುದು ಸಮೃದ್ಧಿಯಲ್ಲಿ ಆಭರಣ ಇದ್ದಂತೆ,
ಪ್ರತಿಕೂಲ ಸಂದರ್ಭದಲ್ಲಿ ಆಶ್ರಯತಾಣದಂತೆ.
-ಅರಿಸ್ಟಾಟಲ್

ಮುಖ್ಯಮಂತ್ರಿ ಬದಲಾವಣೆ: ಪಂಜಾಬ್ ಹಾದಿಯಲ್ಲಿ ರಾಜಸ್ಥಾನವೂ ಸಾಗುತ್ತಿದೆಯೇ?

ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರಿಗೆ ನಿಷ್ಠರಾಗಿರುವ ಶಾಸಕರ ಬಂಡಾಯದಿಂದಾಗಿ ಕಾಂಗ್ರೆಸ್ ಪಕ್ಷದ ರಾಜಸ್ಥಾನ ಘಟಕದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟನ್ನು ಯಾವುದೇ ರೀತಿಯಲ್ಲಿ ಪರಿಹರಿಸಿದರೂ ಪಕ್ಷವು ಇನ್ನಷ್ಟು ದುರ್ಬಲಗೊಳ್ಳುವುದು ಖಚಿತ. ಜತೆಗೆ, ಪಕ್ಷದ ನಾಯಕತ್ವದ ವಿಶ್ವಾಸಾರ್ಹತೆ ಮತ್ತು ಪ್ರಭಾವ ಇನ್ನಷ್ಟು ಕುಸಿತ ಕಾಣುತ್ತದೆ. ಮುಂದಿನ ತಿಂಗಳು ನಡೆಯಲಿರುವ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚು ಎಂದು ಬಿಂಬಿತವಾಗಿದ್ದ ಗೆಹಲೋತ್ ಅವರೇ ಈಗಿನ ಬಿಕ್ಕಟ್ಟಿನ ಹಿಂದೆ ಇದ್ದಾರೆ ಎಂಬುದೇ ಪರಿಸ್ಥಿತಿಯ ವ್ಯಂಗ್ಯ. ಹೈಕಮಾಂಡ್‌ನ ವಿಶ್ವಾಸ ಗಳಿಸಿಕೊಂಡವರು ಮತ್ತು ಹೈಕಮಾಂಡ್‌ನ ಒತ್ತಾಸೆಯಿಂದಲೇ ಅವರು ಸ್ಪರ್ಧೆಗೆ ಇಳಿಯಲಿದ್ದಾರೆ ಎಂದು ಹೇಳಲಾಗಿತ್ತು. ಅಧ್ಯಕ್ಷ ಹುದ್ದೆಯ ಸ್ಪರ್ಧೆಗೆ ಅವರು ನಾಮಪತ್ರ ಸಲ್ಲಿಸಲಿದ್ದಾರೆ ಎಂಬುದು ಕೂಡ ಬಹುತೇಕ ಖಚಿತವಾಗಿತ್ತು. ಕಾಂಗ್ರೆಸ್ ಪಕ್ಷದಲ್ಲಿ ಹೈಕಮಾಂಡ್ ಎಂದರೆ ನೆಹರೂ–ಗಾಂಧಿ ಕುಟುಂಬ. ಪಕ್ಷವು ಪ್ರಜಾಸತ್ತಾತ್ಮಕವಾಗಿಯೇ ನಡೆಯುತ್ತಿದೆ ಎಂದು ಎಷ್ಟೇ ಹೇಳಿಕೊಂಡರೂ ಪಕ್ಷದ ಮೇಲೆ ಆ ಕುಟುಂಬ ಹೊಂದಿರುವ ಹಿಡಿತ ಸಡಿಲವಾಗದು. ಆದರೆ, ಈಗ ಹೈಕಮಾಂಡ್‌ನ ವಿಶ್ವಾಸಾರ್ಹ ವ್ಯಕ್ತಿಯೇ ಪಕ್ಷವನ್ನು ಮುಜುಗರಕ್ಕೆ ಈಡು ಮಾಡಿದ್ದಾರೆ. ಏಕೆಂದರೆ, ರಾಜಸ್ಥಾನದ ಮುಖ್ಯಮಂತ್ರಿ ಸ್ಥಾನಕ್ಕೆ ಗೆಹಲೋತ್ ಬಳಿಕ ಸಚಿನ್ ಪೈಲಟ್ ಅವರನ್ನು ನೇಮಿಸಲು ಹೈಕಮಾಂಡ್ ನಿರ್ಧಾರ ಮಾಡಿತ್ತು, ಎರಡು ವರ್ಷಗಳ ಹಿಂದೆ ಪೈಲಟ್ ಅವರು ಭಿನ್ನಮತ ತೋರಿದಾಗ ಮುಖ್ಯಮಂತ್ರಿ ಹುದ್ದೆಗೆ ಅವರನ್ನು ನೇಮಿಸುವ ಭರವಸೆಯನ್ನು ಹೈಕಮಾಂಡ್ ನೀಡಿತ್ತು ಎಂಬ ವರದಿಗಳಿವೆ. ಆ ಭರವಸೆಗೆ ಗೆಹಲೋತ್ ಅವರು ಈಗ ಸವಾಲೆಸೆದಿದ್ದಾರೆ.



ರಾಜಸ್ಥಾನದಲ್ಲಿ ಉಂಟಾಗಿರುವ ಈಗಿನ ಸ್ಥಿತಿಯು ಹಲವು ಪ್ರಶ್ನೆಗಳಿಗೆ ಕಾರಣವಾಗಿದೆ

ಕಾಂಗ್ರೆಸ್ ಪಕ್ಷದ ರಾಜ್ಯ ಘಟಕವೊಂದು ಹೈಕಮಾಂಡ್ ಇಚ್ಛೆಯ ವಿರುದ್ಧ ಈ ರೀತಿಯಲ್ಲಿ ಬಂಡಾಯ ಎದ್ದಿದ್ದು ಇದೇ ಮೊದಲು. ತೀರಾ ಇತ್ತೀಚಿನ ವರೆಗೆ ಇಂತಹ ಬಂಡಾಯವನ್ನು ಊಹಿಸುವುದೂ ಸಾಧ್ಯವಿರಲಿಲ್ಲ. ರಾಜಸ್ಥಾನದಲ್ಲಿ ಉಂಟಾಗಿರುವ ಈಗಿನ ಸ್ಥಿತಿಯು ಹಲವು ಪ್ರಶ್ನೆಗಳಿಗೆ ಕಾರಣವಾಗಿದೆ. ಮುಖ್ಯಮಂತ್ರಿಯಾಗಿ ಗೆಹಲೋತ್ ಅವರ ಉತ್ತರಾಧಿಕಾರಿ ಯಾರು ಎಂಬುದನ್ನು ಅವರು ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸುವ ನಿರ್ಧಾರ ಕೈಗೊಳ್ಳುವ ಮುಂಚೆಯೇ ಚರ್ಚಿಸಲಿಲ್ಲವೇ? ಉತ್ತರಾಧಿಕಾರಿ ಆಯ್ಕೆಯ ವಿಚಾರದಲ್ಲಿ ರಾಜಸ್ಥಾನ ಕಾಂಗ್ರೆಸ್ ಶಾಸಕಾಂಗ ಪಕ್ಷ ಮತ್ತು ಪಕ್ಷದ ರಾಜ್ಯ ಘಟಕವನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲವೇ? ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರೂ ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳಬೇಕು ಎಂಬ ಇಚ್ಛೆ ಇದೆ ಎಂಬುದನ್ನು ಗೆಹಲೋತ್ ಅವರು ಬಹಿರಂಗವಾಗಿಯೇ ಹೇಳಿದ್ದರು. ಆದರೆ, ‘ಭಾರತ ಜೋಡೊ ಯಾತ್ರೆ’ ಕೈಗೊಂಡಿರುವ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ‘ಪಕ್ಷದಲ್ಲಿ ಒಬ್ಬರಿಗೆ ಒಂದೇ ಹುದ್ದೆ’ ಎಂಬ ತತ್ವವನ್ನು ಉಲ್ಲೇಖಿಸಿದ್ದರು. ಗೆಹಲೋತ್ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಶಾಸಕಾಂಗ ಪಕ್ಷದ ಸಭೆಯನ್ನು ಕರೆಯಲಾಗಿತ್ತು. ಪಕ್ಷದ ವೀಕ್ಷಕರಾದ ಮಲ್ಲಿಕಾರ್ಜುನ ಖರ್ಗೆ, ಅಜಯ ಮಾಕನ್ ಮತ್ತು ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ರಾಜ್ಯದಲ್ಲಿ ಪಕ್ಷದ ಸ್ಥಿತಿಗತಿ ಹೇಗಿದೆ ಎಂಬುದನ್ನು ಈ ಸಭೆ ಆಯೋಜನೆಗೂ ಮೊದಲೇ ಅಂದಾಜಿಸಿರಲಿಲ್ಲವೇ? ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಗೆಹಲೋತ್ ಅವರು ನಾಮಪತ್ರ ಸಲ್ಲಿಸುವುದಕ್ಕೂ ಮುನ್ನವೇ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಆತುರ ಏನಿತ್ತು?

ಈ ಪ್ರಶ್ನೆಗಳು ಅಥವಾ ಇಂತಹ ಇನ್ನಾವುದೇ ಪ್ರಶ್ನೆಗಳಿಗೆ ಸಿಗುವ ಉತ್ತರವು ಪಕ್ಷದ ವರ್ಚಸ್ಸನ್ನು ಖಂಡಿತವಾಗಿಯೂ ಹೆಚ್ಚಿಸುವುದಿಲ್ಲ. ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿರುವ ಎರಡು ರಾಜ್ಯಗಳಲ್ಲಿ ರಾಜಸ್ಥಾನವೂ ಒಂದು. ಇಂತಹ ಸ್ಥಿತಿಯಲ್ಲಿಯೂ ಪಕ್ಷದ ಆಂತರಿಕ ವಿಚಾರಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಲ್ಲಿ ನಾಯಕತ್ವವು ವಿಫಲವಾಗಿದೆ. ಪಂಜಾಬ್ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ಬದಲಾಯಿಸಲಾಗಿತ್ತು. ಪಂಜಾಬ್‌ನಲ್ಲಿ ನಡೆಸಿದ ಈ ಪ್ರಯೋಗವು ದಯನೀಯವಾಗಿ ವಿಫಲವಾಗಿತ್ತು. ಪಕ್ಷವು ಹೀನಾಯವಾಗಿ ಸೋತಿತ್ತು. ರಾಜಸ್ಥಾನದ ಬೆಳವಣಿಗೆಯು ಪಂಜಾಬ್‌ನ ಬೆಳವಣಿಗೆಯನ್ನೇ ಹೋಲುತ್ತಿದೆ. ರಾಜಸ್ಥಾನ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿದೆ. ಚುನಾವಣೆಯ ಮೂಲಕ ಅಧ್ಯಕ್ಷರ ಆಯ್ಕೆಯು ಪಕ್ಷವನ್ನು ಬಲಪಡಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ, ಚುನಾವಣೆಗೆ ಮುಂಚೆಯೇ ಅದು ಕಾಂಗ್ರೆಸ್ ಪಕ್ಷಕ್ಕೆ ಹಲವು ಸಮಸ್ಯೆಗಳನ್ನು ಸೃಷ್ಟಿಸಿದೆ.

ದಿನದ ಟ್ವೀಟ್

ಸಾಲ ಮತ್ತು ದುಃಸ್ವಪ್ನ



ನಮ್ಮ ಕನಸುಗಳಿಗೆ ತಕ್ಕಂತೆ ಬದುಕುವುದಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ. ಆದರೆ, ಕನಸುಗಳನ್ನು ಸಾಲ ಪಡೆದು ನನಸು ಮಾಡಿಕೊಳ್ಳಲು ಮುಂದಾದರೆ ಅವು ದುಃಸ್ವಪ್ನವಾಗುತ್ತವೆ.

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ಕೇರಳವು ಭಯೋತ್ಪಾದನೆಯ ಹಾಟ್‌ಸ್ಪಾಟ್ ಆಗುತ್ತಿದೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿದ್ದಾರೆ. ಇಂತಹ ಸುಳ್ಳು ಆರೋಪದಿಂದ, ಕೇರಳದಲ್ಲಿ ಆರ್‌ಎಸ್‌ಎಸ್ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಗಳು ಹತ್ಯೆಗಳು ಹಾಗೂ ಪ್ರತೀಕಾರದ ಹತ್ಯೆಗಳಲ್ಲಿ ತೊಡಗಿಕೊಂಡಿರುವ ಕಾರಣದಿಂದಾಗಿ ರಾಜಕೀಯ ಹಿಂಸಾಚಾರವು ನಿರಂತರವಾಗಿ ಸಾಗಿರುವುದನ್ನು ಮುಚ್ಚಿಹಾಕಲು ಸಾಧ್ಯವಿಲ್ಲ.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 28-9-1997

- **ಕಯ್ಯಾರ ಕಿಞ್ಞಣ್ಣ ರೈ: 66ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷ**

ಕಲಬುರಗಿ, ಸೆ. 27– ‘ಬೆಂಕಿ ಬಿದ್ದಿದೆ ಮನೆಗೆ’ ಎಂದು ಕನ್ನಡದ ಸ್ಥಿತಿಯ ಬಗ್ಗೆ ಇಡೀ ರಾಜ್ಯದ ಗಮನ ಸೆಳೆದಿದ್ದ ಹಿರಿಯ ಸಾಹಿತಿ ಕಯ್ಯಾರ ಕಿಞ್ಞಣ್ಣ ರೈ ಅವರು ಮಂಗಳೂರಿನಲ್ಲಿ ನಡೆಯಲಿರುವ 66ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡರು.

ಇಂದು ಇಲ್ಲಿನ ಐವಾನ್ ಷಾಹಿ ಅತಿಥಿಗೃಹದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್‌ನ ಕಾರ್ಯಕಾರಿ ಸಮಿತಿಯು ಮಧ್ಯಾಹ್ನ 1.50ಕ್ಕೆ ಈ ವಿಷಯವನ್ನು ಚರ್ಚೆಗೆತ್ತಿಕೊಂಡು ಕೇವಲ ಹತ್ತು ನಿಮಿಷಗಳಲ್ಲಿ ಕಯ್ಯಾರರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಬಗ್ಗೆ ಒಮ್ಮತಕ್ಕೆ ಬಂದಿತು.

ಅಧ್ಯಕ್ಷ ಸ್ಥಾನಕ್ಕೆ ಕಯ್ಯಾರ ಕಿಞ್ಞಣ್ಣ ರೈ ಅವರ ಹೆಸರಿನೊಂದಿಗೆ ಡಾ. ಕಮಲಾ ಹಂಪನಾ, ಡಾ. ಎಸ್.ವಿ. ಪರಮೇಶ್ವರ ಭಟ್, ಶಾಂತರಸ ಅವರ ಹೆಸರು ಪ್ರಸ್ತಾಪಕ್ಕೆ ಬಂದಿತಾದರೂ ಎಲ್ಲರೂ ಕಯ್ಯಾರರ ಆಯ್ಕೆಗೆ ಸಹಮತ ವ್ಯಕ್ತಪಡಿಸಿದರು.

- **ಕೇಂದ್ರಕ್ಕೆ ಮತ್ತೆ ಕಾಂಗ್ರೆಸ್ ಎಚ್ಚರಿಕೆ**

ನವದೆಹಲಿ, ಸೆ. 27– ಕೇಂದ್ರ ಸರ್ಕಾರದ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಪರಿಸ್ಥಿತಿ ಇನ್ನಷ್ಟು ಹದಗೆಡಲು ಕಾಂಗ್ರೆಸ್ ಅವಕಾಶ ಕೊಡುವುದಿಲ್ಲ ಎಂದು ಸಂಯುಕ್ತರಂಗ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಹೊಸದಾಗಿ ರಚಿತವಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಇಂದು ಇಲ್ಲಿ ಮೊದಲ ಬಾರಿಗೆ ಸಭೆ ಸೇರಿ, ಕೇಂದ್ರ ಸರ್ಕಾರದ ಅನೇಕ ವೈಫಲ್ಯಗಳನ್ನು ಚರ್ಚಿಸಿತು. ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರದ ಪ್ರಯೋಗ ವಿಫಲವಾಗಿದೆ ಎಂದು ಸಭೆ ಅಂಗೀಕರಿಸಿದ ನಿರ್ಣಯದಲ್ಲಿ ಹೇಳಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 28-9-1972

- **ಸಂಸ್ಥಾ ಕಾಂಗ್ರೆಸ್ ಭದ್ರನೆಲೆಗೆ ಪೆಟ್ಟು: ಮಂಡ್ಯ ಜಿಲ್ಲೆ ಹಲವು ಪ್ರಮುಖರು ಆಡಳಿತ ಕಾಂಗ್ರೆಸ್ ಪಕ್ಷಕ್ಕೆ**

ಮಂಡ್ಯ, ಸೆ. 27– ಸಂಸ್ಥಾ ಕಾಂಗ್ರೆಸ್ಸಿನ ಭದ್ರ ನೆಲೆಗಳಲ್ಲಿ ಒಂದಾಗಿದ್ದ ಮಂಡ್ಯ ಜಿಲ್ಲೆಯಲ್ಲಿ ಅದರ ಹಲವು ಪ್ರಮುಖ ನಾಯಕರು ಆಡಳಿತ ಕಾಂಗ್ರೆಸ್ಸಿಗೆ ಇಂದು ಸೇರಿದ್ದರಿಂದ ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸ್ಸಿಗೆ ಭಾರಿ ಪೆಟ್ಟು ಬಿದ್ದಿದೆ. ಮೈಸೂರು ಪ್ರದೇಶ ಸಂಸ್ಥಾ ಕಾಂಗ್ರೆಸ್ ಉಪಾಧ್ಯಕ್ಷರೂ ಜಿಲ್ಲೆಯ ಪ್ರಮುಖ ನಾಯಕರೂ ಮಾಜಿ ಮಂತ್ರಿಗಳೂ ಆದ ಶ್ರೀ ಕೆ.ವಿ. ಶಂಕರಗೌಡ ಮತ್ತು ಜಿಲ್ಲಾ ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಜಿ. ಮಾದೇಗೌಡ ಅವರು ಇಂದು ಆಡಳಿತ ಕಾಂಗ್ರೆಸ್ಸಿಗೆ ಸೇರಿದ ಪ್ರಮುಖರಲ್ಲಿ ಸೇರಿದ್ದಾರೆ.

‘ಯಾವ ಪೂರ್ವಭಾವಿ ಷರತ್ತೂ ಇಲ್ಲದೆ’ ಆಡಳಿತ ಕಾಂಗ್ರೆಸ್ಸಿಗೆ ಸೇರಿದ್ದಾರೆಂದು ಹೇಳಲಾಗಿದೆ.

ಕಂದಾಯ ಸಚಿವ ಶ್ರೀ ಎನ್. ಹುಚ್ಚಮಾಸ್ತಿ ಗೌಡ, ಎಂ.ಪಿ.ಸಿ.ಸಿ (ಆ) ಪ್ರಧಾನ ಕಾರ್ಯದರ್ಶಿ ಶ್ರೀ ರಾಘವೇಂದ್ರ ರಾವ್ ಜಹಗೀರ್‌ದಾರ್ ಅವರು ಈ ಸಂದರ್ಭದಲ್ಲಿ ಹಾಜರಿದ್ದರು.

- **ಹೋಲ್ಡಿಂಗ್ ಕಂಪನಿ ಆಗಿ ಎಚ್.ಎಂ.ಟಿ**

ನವದೆಹಲಿ, ಸೆ. 27– ಹಿಂದೂಸ್ತಾನ್ ಮೆಷಿನ್ ಟೂಲ್ಸ್ ಕಾರ್ಖಾನೆಯನ್ನು ‘ಹೋಲ್ಡಿಂಗ್ ಕಂಪನಿ’ಯಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಇಂಥ ಹೋಲ್ಡಿಂಗ್ ಕಂಪನಿಯಲ್ಲಿ ಎಚ್.ಎಂ.ಟಿ ಎರಡನೆಯದು. ಉಕ್ಕು ಮತ್ತು ಅದಕ್ಕೆ ಸಂಬಂಧಿಸಿದ ಉದ್ಯಮಗಳಿಗಾಗಿ ‘ಹೋಲ್ಡಿಂಗ್ ಕಂಪನಿ’ಯೊಂದನ್ನು ನವೆಂಬರ್ ಅಂತ್ಯದ ವೇಳೆಗೆ ಸ್ಥಾಪಿಸಲು ಸರ್ಕಾರ ಈಗಾಗಲೇ ನಿರ್ಧರಿಸಿದ್ದು ಎಂ.ಎ.ವಾದೂದ್ ಖಾನ್ ಎಂಬುವರನ್ನು ಇದರ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಮತದಾರನ ಭಾವನೆಗೆ ಚಿಕ್ಕಾಸಿನ ಬೆಲೆಯನ್ನೂ ಕೊಡದ ರಾಜಕಾರಣಿಗಳು

‘ಪೇ ಪೀಪಲ್’ ಎನಬಾರದೇ?



ಅನುಸಂಧಾನ

ರವೀಂದ್ರ ಭಟ್ಟ

ರಾಜ್ಯದಲ್ಲಿ ಈಗ ಪೇಸಿಎಂ ಗುಲ್ಲು. ಇಂತಹದ್ದೊಂದು ಅಭಿಯಾನಕ್ಕೆ ಮುಖ್ಯಮಂತ್ರಿ ಹೆಸರು ಬಳಸಿಕೊಂಡಿದ್ದು ತಪ್ಪು ಎಂದು ಆಡಳಿತಾರೂಢ ಬಿಜೆಪಿ ವಾದಿಸಿದರೆ, ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು ಅದನ್ನು ಸಂಕೇತಿಸುವಂತೆ ಈ ಅಭಿಯಾನವನ್ನು ಆರಂಭಿಸಲಾಗಿದೆ ಎನ್ನುತ್ತಿದೆ ವಿರೋಧ ಪಕ್ಷ ಕಾಂಗ್ರೆಸ್. ‘ನಮ್ಮ ಗುರಿ ಭ್ರಷ್ಟ ವ್ಯವಸ್ಥೆಯೇ ವಿನಾ ವೈಯಕ್ತಿಕ ನಿಂದನೆಯೂ ಅಲ್ಲ, ಮುಖ್ಯಮಂತ್ರಿ ಕುರ್ಚಿಯೂ ಅಲ್ಲ’ ಎಂದು ಕೂಡ ಹೇಳುತ್ತಿದೆ ಕಾಂಗ್ರೆಸ್.

ಕಾಂಗ್ರೆಸ್ ಬಿಟ್ಟ ಈ ಬ್ರಹ್ಮಾಸ್ತ್ರಕ್ಕೆ ಬಿಜೆಪಿ ಕಕ್ಕಾಬಿಕ್ಕಿಯಾಗಿರುವುದಂತೂ ನಿಜ. ಜನರು ಇದನ್ನು ಬೆಂಬಲಿಸುತ್ತಾರೆ, ಇದರಿಂದಾಗಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ಬರುತ್ತದೆ ಎಂಬ ಗ್ಯಾರಂಟಿ ಇಲ್ಲ. ಆದರೆ ಪೇಸಿಎಂ ಅಭಿಯಾನವನ್ನು ಸಾಮಾನ್ಯ ಜನರು ಮೊನಚಿನ ಸೊಗಸಿನ ಟೀಕೆ ಎಂಬಂತೆ ಆಸ್ವಾದಿಸುತ್ತಿದ್ದಾರೆ. ನಮ್ಮ ಆರೋಗ್ಯ ಸಚಿವರು ಈ ವಿಷಯಕ್ಕೆ ಜಾತಿಯ ಲೇಪವನ್ನೂ ಹಚ್ಚಿದ್ದಾರೆ. ‘ಕಾಂಗ್ರೆಸ್ ಪಕ್ಷ ಲಿಂಗಾಯತ ಮತ್ತು ಬ್ರಾಹ್ಮಣ ವಿರೋಧಿ’ ಎಂದು ಹೇಳುವ ಮೂಲಕ ಹೊಸ ತಿರುವು ನೀಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೆ ಅವರಿಗಾಗಲೀ ಇವರಿಗಾಗಲೀ ಮತದಾರರ ಬಗ್ಗೆ ಗೌರವ ಇದ್ದ ಹಾಗೆ ಕಾಣುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ನಿಜವಾಗಿ ಬೇಕಿರುವುದು ಪೇಸಿಎಂ ಅಲ್ಲ, ಬೇಕಾಗಿರುವುದು ‘ಪೇ ಪೀಪಲ್’. ಅಂದರೆ ಹಣವನ್ನು ಜನರಿಗಾಗಿ ವೆಚ್ಚ ಮಾಡಬೇಕು. ಜನರ ಕಲ್ಯಾಣಕ್ಕೆ ಸರ್ಕಾರದ ಹಣ ಸಂಪೂರ್ಣವಾಗಿ ವಿನಿಯೋಗವಾಗುವ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ಅದು ಜನರೇ ಕೊಟ್ಟ ಹಣ. ಅವರಿಗಾಗಿಯೇ ವ್ಯಯವಾಗಬೇಕು.

ಈಗ ವ್ಯವಸ್ಥೆ ಹೇಗಾಗಿದೆ ಎಂದರೆ, ಚುನಾವಣೆ ಬಂದಾಗ ಎಲ್ಲ ರಾಜಕಾರಣಿಗಳೂ ‘ಪೇ ಪೀಪಲ್’ ಮಾಡುತ್ತಾರೆ. ಗೆದ್ದು ಬಂದ ನಂತರ ‘ಪೀಪಲ್ ವಿಲ್ ಪೇ’ ಎನ್ನುವ ಹಾಗೆ ಆಗಿದೆ. ಹಣ ಪಡೆದು ಮತ ಮಾರಿಕೊಂಡವರಿಗೆ ಮಾತನಾಡಲು ಅಧಿಕಾರವಿಲ್ಲ. ‘ಕೊಟ್ಟವ ಕೋಡಂಗಿ ಇಸಕೊಂಡವ ಈರಭದ್ರ’ ಎನ್ನುವ ಗಾದೆ ಇಲ್ಲಿ ಉಲ್ಟಾ ಆಗಿದೆ. ರಾಜಕಾರಣದ ಚದುರಂಗದಾಟದಲ್ಲಿ ‘ಕೊಟ್ಟವನೇ ಈರಭದ್ರ. ಇಸಗೊಂಡವನೇ ಕೋಡಂಗಿ’.

ಪೇಸಿಎಂ ಅಭಿಯಾನದಿಂದ ಲಿಂಗಾಯತರ ಭಾವನೆಗೆ ಧಕ್ಕೆಯಾಗಿದೆ ಎಂಬ ಆರೋಗ್ಯ ಸಚಿವರ ಮಾತಿಗೆ ಬರೋಣ. ಲಿಂಗಾಯತರ ಭಾವನೆಗೆ ಧಕ್ಕೆಯಾಗಿದೆ, ಹಿಂದೂಗಳ ಭಾವನೆಗೆ ಧಕ್ಕೆಯಾಗಿದೆ, ಮುಸ್ಲಿಮರ ಭಾವನೆಗೆ ಧಕ್ಕೆಯಾಗಿದೆ ಎನ್ನುವಂತಹದು ನಮ್ಮ ದೇಶದಲ್ಲಿ ಆಗಾಗ ಕೇಳಿಬರುವ ಮಾತು. ಅದರ ಹೆಸರಲ್ಲಿ ಅಥವಾ ಅದರಿಂದಾಗಿ ಸಂಘರ್ಷವೂ ಆಗುತ್ತದೆ, ಹಿಂಸಾಚಾರವೂ ನಡೆಯುತ್ತದೆ, ಹತ್ಯೆಗಳೂ ಆಗಿವೆ. ಆದರೆ ಯಾರೂ ಮತದಾರರ ಭಾವನೆಗೆ ಧಕ್ಕೆಯಾಗಿರುವ ಬಗ್ಗೆ ಯೋಚಿಸುವುದೇ ಇಲ್ಲ. ಅದಕ್ಕಾಗಿ ಅಭಿಯಾನವೂ ನಡೆಯುವುದಿಲ್ಲ.

ನಿರ್ಮಾಪಕಿ ಲೀನಾ ಮಣಿಮೇಕಲೈ ಅವರು ತಮ್ಮ ‘ಕಾಳಿ’ ಚಿತ್ರದ ಪೋಸ್ಟರ್‌ನಲ್ಲಿ ಕಾಳಿ ದೇವಿ ಕೈಯಲ್ಲಿ ಸಿಗರೇಟ್ ಹಿಡಿಸಿದ್ದಾರೆ, ಇದು ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದೆ ಎಂದು ಹೇಳಲಾಯಿತು. ಅದೇ ರೀತಿ ತ್ರಿಷಾ, ಹೃತಿಕ್ ರೋಷನ್, ಪ್ರಕಾಶ್ ರಾಜ್ ಮುಂತಾದವರೂ ಬೇರೆ ಬೇರೆ ಸಂದರ್ಭಗಳಲ್ಲಿ ಹಿಂದೂಗಳ ಭಾವನೆಗೆ ಧಕ್ಕೆ ತಂದ ಆರೋಪಕ್ಕೆ ಗುರಿಯಾದರು. ಇದೇ ಕಾರಣಕ್ಕಾಗಿಯೇ ಸಾಹಿತಿಗಳಾದ ಕೆ.ಎಸ್. ಭಗವಾನ್, ಕುಂವೀ, ಬಿ.ಎಲ್.ವೇಣು ಮುಂತಾದವರಿಗೆ ಜೀವ ಬೆದರಿಕೆಯೂ ಇದೆ. ಹಿಂದೂಗಳ ಭಾವನೆಗೆ ಧಕ್ಕೆ ತಂದರು ಎಂಬ ಕಾರಣಕ್ಕೆ ಎಂ.ಎಂ.ಕಲಬುರ್ಗಿ, ಗೌರಿ ಲಂಕೇಶ್ ಅವರ ಹತ್ಯೆಯೂ ಆಗಿದೆ. ಅದೇ ರೀತಿ ಪ್ರವಾದಿ ಮೊಹಮ್ಮದ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದರಿಂದ ಬಿಜೆಪಿ ನಾಯಕಿ ನೂಪುರ್ ಶರ್ಮಾ ಅವರೂ ಜೀವ ಬೆದರಿಕೆ ಎದುರಿಸುತ್ತಿದ್ದಾರೆ. ಆದರೆ ಈ ದೇಶದಲ್ಲಿ ಮತದಾರರ ಭಾವನೆಗೆ ಧಕ್ಕೆ ತಂದ ಕಾರಣಕ್ಕೆ ಯಾರೂ ಜೀವ ಬೆದರಿಕೆಯನ್ನೂ ಎದರಿಸುತ್ತಿಲ್ಲ, ಸಂಕಷ್ಟಕ್ಕೂ ಸಿಲುಕಿಲ್ಲ, ಅವರ ಅಟಾಟೋಪಗಳಿಗೆ ಬ್ರೇಕ್ ಕೂಡ ಬಿದ್ದಿಲ್ಲ. ಏನಿದರ ಮ್ಯಾಜಿಕ್?

ಹೌದು, ಹಿಂದೂಗಳ ದೇವರ ಬಗ್ಗೆಯಾಗಲೀ ಮುಸ್ಲಿಮರ ದೇವರ ಬಗ್ಗೆಯಾಗಲೀ ಅಥವಾ ಯಾವುದೇ ಧರ್ಮದ ದೇವರು, ಸಂಸ್ಕೃತಿಯ ಬಗ್ಗೆಯಾಗಲೀ ಅವಹೇಳನ ಮಾಡಿದರೆ ಆಯಾ ಧರ್ಮದವರಿಗೆ ಬೇಸರವಾಗುತ್ತದೆ ನಿಜ. ಆ ರೀತಿ ಯಾರೂ ಮಾಡಬಾರದು. ಒಂದೊಮ್ಮೆ ಯಾರಾದರೂ ಹಾಗೆ ಮಾಡಿದರೆ ಅದಕ್ಕೆ ತಕ್ಕ ಶಿಕ್ಷೆಯಾಗಬೇಕು. ಅದನ್ನು ಕಾನೂನುಬದ್ಧವಾಗಿ ಬಗೆಹರಿಸಿಕೊಳ್ಳಬೇಕು. ಕಾನೂನು ಕೈಗೆ ತೆಗೆದುಕೊಳ್ಳುವ ಕೆಲಸವನ್ನು ಯಾರೂ ಮಾಡಬಾರದು. ಆದರೆ ಸಂವಿಧಾನ ಬದ್ಧವಾಗಿ ಅಧಿಕಾರ ಸ್ವೀಕರಿಸಿದವರು, ಸಂವಿಧಾನಬದ್ಧವಾಗಿ ನಡೆದುಕೊಳ್ಳುತ್ತೇನೆ ಎಂದು ಪ್ರಮಾಣವಚನ ಸ್ವೀಕರಿಸಿದವರು ಭ್ರಷ್ಟಾಚಾರದಲ್ಲಿ ತೊಡಗಿದರೆ, ಸ್ವಜನ ಪಕ್ಷಪಾತ ಮಾಡಿದರೆ ಯಾರ ಭಾವನೆಗೂ ಧಕ್ಕೆ ಯಾಗುವುದಿಲ್ಲವೇ? ರಾಜ್ಯದ ಎಲ್ಲ ಜಾತಿ– ಧರ್ಮದ ಜನರನ್ನೂ ಸಂರಕ್ಷಿಸುವ ಹೊಣೆ ಹೊತ್ತ ಮುಖ್ಯಮಂತ್ರಿಯನ್ನು ಲಿಂಗಾಯತ ಸಮುದಾಯಕ್ಕೆ ಸೀಮಿತಗೊಳಿಸಿದರೆ ಇತರರ ಭಾವನೆಗೆ ಧಕ್ಕೆಯಾಗುವುದಿಲ್ಲವೇ?




ಇನ್ನೊಂದು ದಿಕ್ಕಿನಿಂದ ಆಲೋಚಿಸೋಣ. ಬಿಬಿಎಂಪಿ ಚುನಾವಣೆ ಕಳೆದ ವರ್ಷವೇ ನಡೆಯಬೇಕಿತ್ತು. ಕುಂಟು ನೆಪಗಳಿಂದ ಅದನ್ನು ಮುಂದಕ್ಕೆ ಹಾಕಲಾಗಿದೆ. ಚುನಾವಣೆ ನಡೆಸುವಂತೆ ನ್ಯಾಯಾಲಯಗಳು ಹೇಳಿದ್ದರೂ ಅದನ್ನು ನಡೆಸದೇ ಕಾಲ ದೂಡುವುದು ಹೇಗೆ ಎಂಬ ಬಗ್ಗೆಯೇ ನಮ್ಮ ರಾಜಕಾರಣಿಗಳು ಚಿಂತನೆ ನಡೆಸಿದ್ದಾರೆ. ಅದೇ ರೀತಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನೂ ನಡೆಸಬೇಕಿತ್ತು. ಅವುಗಳನ್ನೂ ನಡೆಸದೇ ಇರುವುದಕ್ಕೆ ರಾಜಕಾರಣಿಗಳ ಬಳಿ ಕಾರಣಗಳಿವೆ. ಇವೆಲ್ಲಾ ಪ್ರಜಾಪ್ರಭುತ್ವದ ಅವಹೇಳನ ಅಲ್ಲವೇ?

ಕಾಂಗ್ರೆಸ್ ಪಕ್ಷದಿಂದ ಗೆದ್ದು ಬಂದ 8 ಶಾಸಕರು ಏಕಾಏಕಿ ಬಿಜೆಪಿ ಸೇರಿರುವುದಾಗಿ ಘೋಷಿಸಿಕೊಂಡ ಘಟನೆ ಗೋವಾದಲ್ಲಿ ನಡೆದಿದೆ. ಮಹಾರಾಷ್ಟ್ರದಲ್ಲಿಯೂ ಇಂತಹದೇ ಪ್ರಹಸನ ನಡೆದಿದೆ. ಇನ್ನೂ ಕೆಲವು ರಾಜ್ಯಗಳಲ್ಲಿ ಒಂದು ಪಕ್ಷದಿಂದ ಗೆದ್ದ ಶಾಸಕರು ಇನ್ನೊಂದು ಪಕ್ಷಕ್ಕೆ ಹಾರುವುದು ನಿಂತಿಲ್ಲ. ಪಕ್ಷಾಂತರ ನಿಷೇಧ ಕಾನೂನು ಎನ್ನುವುದು ಹಾಸ್ಯಾಸ್ಪದವಾಗಿ ಪರಿಣಮಿಸಿದೆ. ಪ್ರತಿದಿನ, ಪ್ರತಿಕ್ಷಣ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ, ಸಂವಿಧಾನದ ಕೊಲೆಯಾಗುತ್ತಿದ್ದರೂ ನಾವು ರಾಮ ರಹೀಮರಿಗೆ ಮಾತ್ರ ಅವಮಾನವಾಯಿತು ಎಂದು ಒಬ್ಬರನ್ನು ಒಬ್ಬರು ಕೊಲ್ಲುವ ಮಟ್ಟಕ್ಕೆ ಸೆಟೆದು ನಿಂತಿದ್ದೇವೆ. ಗುಲ್ಲು ಎಬ್ಬಿಸುತ್ತೇವೆ. ಹಿಂಸಾಚಾರಕ್ಕೆ ಇಳಿಯುತ್ತೇವೆ.

ಹಿಂದೂ ದೇವರುಗಳನ್ನು ಅವಹೇಳನ ಮಾಡಿದರೆ ಹಿಂದೂಗಳ ಭಾವನೆಗೆ ಧಕ್ಕೆ ಬರುವುದಾದರೆ ಹಿಂದೂ ಮಠಾಧಿಪತಿಗಳು ಲೈಂಗಿಕ ದೌರ್ಜನ್ಯದ ಆರೋಪಕ್ಕೆ ಸಿಲುಕಿದರೆ ಭಕ್ತರ ಧಾರ್ಮಿಕ ಭಾವನೆಗೆ ಧಕ್ಕೆಯಾಗುವುದಿಲ್ಲವೇ? ಹಿಂದೂ ದೇವರುಗಳ ಪೂಜಾ ಕೈಂಕರ್ಯಕ್ಕೆ ಬಳಸುವ ವಸ್ತುಗಳ ಬೆಲೆ ಏರಿಕೆಯಾದರೆ ಹಿಂದೂಗಳಿಗೆ ಏನೂ ಅನ್ನಿಸುವುದಿಲ್ಲವೇ? ಸುಮ್ಮನೆ ಹೀಗೊಂದು ಲೆಕ್ಕಾಚಾರ ಮಾಡೋಣ. ನಮ್ಮ ಕುಟುಂಬದ ಜೊತೆ ಅಂದರೆ ಗಂಡ, ಹೆಂಡತಿ, ಇಬ್ಬರು ಮಕ್ಕಳು ಈಗ ಹತ್ತು ವರ್ಷದ ಹಿಂದೆ ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಹೋಗುವ ಖರ್ಚಿಗೂ ಈಗ ಹೋಗಿ ಬರುವ ಖರ್ಚಿಗೂ ವ್ಯತ್ಯಾಸ ಇಲ್ಲವೇ? ಬೆಲೆ ಏರಿಕೆಯಿಂದ ಈಗ ತಿರುಪತಿ ಯಾತ್ರೆ ಕೂಡಾ ದುಬಾರಿಯಾಗಿದೆ. ಕಾಶಿಯಾತ್ರೆಗೆ ವಿಶೇಷ ರೈಲು ಒದಗಿಸುತ್ತೇವೆ ಎಂದು ಹೇಳಿ ಈಗ ಅದನ್ನು ರದ್ದು ಮಾಡಿದರೆ ಯಾರ ಭಾವನೆಗೆ ಧಕ್ಕೆಯಾಗುತ್ತದೆ? ಸಾಮಾನ್ಯ ಜನರು ಬಳಸುವ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಿದ್ದರೆ ಯಾರ ಮನಸ್ಸಿಗೂ ನೋವು ಆಗುವುದಿಲ್ಲವೇ? ದುಡಿಯುವ ಕೈಗಳಿಗೆ ಕೆಲಸ ಸಿಗದೇ ಇದ್ದಾಗ, ಇರುವ ಕೆಲಸ ಕೈಬಿಟ್ಟು ಹೋದಾಗ, ಸರ್ಕಾರದ ಎಲ್ಲ ನೇಮಕಾತಿಗಳಲ್ಲಿಯೂ ಅಧಿಕಾರಸ್ಥರು ಲಕ್ಷ ಲಕ್ಷ ರೂಪಾಯಿ ಲಂಚ ಕೇಳಿದಾಗ, ಸರ್ಕಾರಿ ಕಾಮಗಾರಿಗಳಲ್ಲಿ ಹತ್ತೋ ಇಪ್ಪತ್ತೋ ಅಥವಾ ನಲವತ್ತೋ ಪರ್ಸೆಂಟೇಜ್ ಪಡೆದಾಗ ಯಾರ ಹೃದಯಕ್ಕೂ ಚೂರಿಯಿಂದ ಇರಿದಂತೆ ಆಗುವುದಿಲ್ಲವೇ?

ಆಗ ಏನೂ ಆಗುವುದಿಲ್ಲ ಎಂದರೆ ನಾವು ಬದುಕಿಲ್ಲ ಎಂದೇ ಅರ್ಥ. ಪ್ರಜಾಸತ್ತೆ ನಿಜವಾದ ಅರ್ಥದಲ್ಲಿ ಸತ್ತಂತಿದೆ.

ಚುರುಮುರಿ



ಪೋಸ್ಟರ್ ಫೈಟ್

• ಮಣ್ಣೆರಾಜು

‘ರೀ, ಒಡವೆ ಅಂಗಡಿಯಲ್ಲಿ ದಸರಾ ಆಫರ್ ಅನೌನ್ಸ್ ಮಾಡಿದ್ದಾರೆ...’ ಸುಮಿ ಸಡಗರಗೊಂಡಳು.

‘ಒಂದು ಒಡವೆ ಕೊಂಡರೆ ಇನ್ನೊಂದು ಫ್ರೀ ಅಂತಾ?’ ಶಂಕ್ರಿ ಕೇಳಿದ.

‘ಅಲ್ಲಾರೀ, ಸೆಲ್ಫಿ ಫ್ರೀ ಆಫರ್. ಅಂಗಡಿಯಲ್ಲಿ ನಮಗೆ ಬೇಕಾದ ಒಡವೆ ಧರಿಸಿ ಸೆಲ್ಫಿ ತಗೋಬಹುದು, ಸಾಮರ್ಥ್ಯ ಇದ್ದರೆ ಕೊಳ್ಳಬಹುದು’ ಆಭರಣ ಮಳಿಗೆಯ ಪ್ರಚಾರ ಪೋಸ್ಟರ್ ತೋರಿಸಿದಳು.

‘ರಾಜಕೀಯ ಪೋಸ್ಟರ್‌ಗಿಂತ ಒಡವೆ ಅಂಗಡಿ ಪೋಸ್ಟರ್ ಅಪಾಯಕಾರಿ’.

‘ಒಡವೆ ಧರಿಸಿ ಫೋಟೊ ತೆಗೆದು ಪದ್ಮಾಳಿಗೆ ಪೋಸ್ಟ್ ಮಾಡಿ ಅವಳ ಹೊಟ್ಟೆ ಉರಿಸಬೇಕು’.

‘ಯಾಕೆ ಉರಿಸ್ತೀಯಾ ಅವಳು ನಿನ್ನ ಫ್ರೆಂಡ್ ಅಲ್ವಾ?’

‘ನಾವು ಜಗಳವಾಡಿಕೊಂಡು ಮುನಿಸಿಕೊಂಡಿದ್ದೀವಿ, ಎದುರು ಸಿಕ್ಕರೂ ಮಾತನಾಡಿಸಲ್ಲ, ನಮ್ಮ ನಡುವೆ ಪೋಸ್ಟರ್ ಫೈಟ್ ನಡೆಯುತ್ತಿದೆ’.

‘ಪೋಸ್ಟರ್ ಫೈಟ್ ಅನ್ನೋದು ಡರ್ಟಿ ಪಾಲಿಟಿಕ್ಸ್...’

‘ಮೊನ್ನೆ ಅವಳು ಹೋಟೆಲ್‌ನಲ್ಲಿ ಮಸಾಲೆ ದೋಸೆ ತಿನ್ನುವ ಫೋಟೊ ಪೋಸ್ಟರ್ ಹಾಕಿದ್ದಳು, ನಾನು ದೊಡ್ಡ ಹೋಟೆಲ್‌ನಲ್ಲಿ ಊಟ ಮಾಡುವ ಫೋಟೊ ಹಾಕಿ ಸೇಡು ತೀರಿಸಿಕೊಂಡೆ’.

‘ಹೌದೆ?! ವೆರಿಗುಡ್... ಏನೇ ಆಗಲಿ, ಫೋಟೊ ಫೈಟ್ ಆರೋಗ್ಯಕರ ಜಗಳ. ಫೈಟರ್‌ಗಳಿಗೆ ಗಾಸಿಯಾಗಲ್ಲ, ಗಾಯವಾಗಲ್ಲ. ಕೆಟ್ಟ ಮಾತು ಬೈಯ್ಯುವಂತಿಲ್ಲ, ಆದರೂ ಪೋಸ್ಟರ್ ಹಾಕಿ ಅವರ ಮಾನ ಕಳೆಯಬಹುದು, ನೆಮ್ಮದಿ ಹಾಳು ಮಾಡಬಹುದು... ಇನ್ನೇಲೆ ನೀನು ಅಕ್ಕಪಕ್ಕದ ಮನೆಯವರಿಗೆ ಕೇಳಿಸುವಂತೆ ಜೋರು ಜಗಳ ಮಾಡಬೇಡ, ನನ್ನ ವಾಟ್ಸ್‌ಆ್ಯಪ್‌ಗೆ ಬೈಯ್ಯುವ ಪೋಸ್ಟರ್ ಹಾಕಿ ಸಿಟ್ಟು ಶಮನ ಮಾಡಿಕೊ’.

‘ನೀವೂ ಹಾಗೇ ಮಾಡಿ, ನೆರೆಹೊರೆಯವರಿಗೆ ಕೇಳಿಸುವಂತೆ ಕೂಗಾಡಿ ನನಗೆ ನೋವು ಮಾಡಿ ನೀವೂ ಬೆಲೆ ಕಳಕೊಳ್ಳಬೇಡಿ’.

‘ಎಲ್ಲರೂ ಪೋಸ್ಟರ್ ಫೈಟ್ ಕಲ್ಚರ್ ರೂಢಿಸಿಕೊಂಡರೆ ಮೌನಕ್ರಾಂತಿ ನಡುವೆಯೂ ಸಂಸಾರದ ಮಾನ, ಶಾಂತಿ ಕಾಪಾಡಿಕೊಳ್ಳಬಹುದು ಅಲ್ವಾ?...’ ಅಂದ ಶಂಕ್ರಿ.

ಸಂಗತ

ರೇಬಿಸ್ ಸಾವು: ಶೂನ್ಯಕ್ಕಿಳಿಸುವ ಸವಾಲು

ಮಾನವ, ಪ್ರಾಣಿ ಮತ್ತು ಪರಿಸರದ ಆರೋಗ್ಯಗಳನ್ನು ಒಂದಾಗಿ ಪರಿಗಣಿಸಿ ಪರಿಹಾರ ಹುಡುಕುವ ಏಕಸ್ವಾಸ್ಥ್ಯದ ಕಾರ್ಯಾಚರಣೆ ಇಂದಿನ ಅನಿವಾರ್ಯ

• ಡಾ. ಮುರಳೀಧರ ಕಿರಣಕೆರೆ

‘ಬೆಳಿಗ್ಗೆ ಯಾವ್ದೋ ನಾಯಿ ಬಂದು ನಮ್ಮನೆ ನಾಯಿಮರಿನ ಕಚ್ಚಿ ಸಾಯ್ಸಿದೆ. ಅದು ಹುಚ್ಚುನಾಯಿನಾ ಅಂತ ಅನುಮಾನ. ನಮ್ ಪಾಪು ಅಲ್ಲೆಲ್ಲಾ ಬರಿಗಾಲಲ್ಲಿ ಓಡಾಡಿದೆ. ಏನಾದ್ರೂ ಪ್ರಾಬ್ಲಂ ಆಗುತ್ತಾ ಅಂತ ತುಂಬಾ ಹೆದ್ರಿಕೆ ಆಗ್ತಿದೆ’ ತಾಯಿಯೊಬ್ಬಳ ಆತಂಕದ ವಿಚಾರಣೆ. ಆಕೆ ವೃತ್ತಿಯಲ್ಲಿ ಶಿಕ್ಷಕಿ. ಅರಿವಿನ ಕೊರತೆಯ ಕಾರಣ ರೇಬಿಸ್ ರೋಗಾಣುಗಳ ಬಗ್ಗೆ ಸುದೀರ್ಘ ವಿವರಣೆ ಕೊಡಬೇಕಾಯಿತು. ಹೌದು, ಈ ಭಯಾನಕ ಕಾಯಿಲೆಯ ಬಗ್ಗೆ ಇಂತಹ ಹತ್ತಾರು ಆತಂಕಪೂರಿತ ಪ್ರಶ್ನೆಗಳು ಆಗಾಗ್ಗೆ ಎದುರಾಗುತ್ತಿರುತ್ತವೆ. ಸಹಸ್ರಾರು ವರ್ಷಗಳಿಂದ ಜನ-ಜಾನುವಾರುಗಳ ಜೀವಕ್ಕೆ ಕಂಟಕಕಾರಿಯಾಗಿರುವ ಈ ವ್ಯಾಧಿಯ ಬಗ್ಗೆ ಇನ್ನೂ ಸರಿಯಾದ ತಿಳಿವಳಿಕೆ ಮೂಡದಿರುವುದು ದುರದೃಷ್ಟಕರ.

ರೋಗಲಕ್ಷಣ ಆರಂಭವಾಯಿತೆಂದರೆ, ರೇಬಿಸ್‌ಗೆ ಯಾವುದೇ ಮದ್ದಿಲ್ಲ. ಕಾಯಿಲೆಗೆ ಕಾರಣವಾಗುವ ಲಿಸ್ಸಾ ಎಂಬ ವೈರಾಣುಗಳು ಪ್ರಮುಖವಾಗಿ ಹರಡುವುದು ಹುಚ್ಚುನಾಯಿ ಕಡಿತದಿಂದ. ವನ್ಯಮೃಗಗಳಾದ ನರಿ, ತೋಳ ಸೇರಿದಂತೆ ನಾಯಿ, ಹೆಗ್ಗಣಗಳಲ್ಲಿ ಸೋಂಕು ಸಾಮಾನ್ಯ. ಮಾನವನಲ್ಲದೆ ದನ, ಎಮ್ಮೆ, ಕುರಿ, ಮೇಕೆ, ಬೆಕ್ಕು, ಕುದುರೆಯಂತಹ ಬಿಸಿರಕ್ತದ ಯಾವುದೇ ಪ್ರಾಣಿಯನ್ನೂ ಕಾಯಿಲೆ ಬಾಧಿಸಬಹುದು. ಕೆಲವು ಜಾತಿಯ ಬಾವಲಿಗಳು ರೋಗಾಣುಗಳ ವಾಹಕಗಳಾಗಿದ್ದು ರೋಗ ಪ್ರಸಾರದಲ್ಲಿ ಪಾತ್ರ ವಹಿಸುತ್ತವೆ.


ಲಸಿಕೆಯ ಮೂಲಕ ನೂರಕ್ಕೆ ನೂರು ತಡೆಗಟ್ಟಬಹುದಾದ ರೇಬಿಸ್ ರೋಗಕ್ಕೆ ಪ್ರತಿವರ್ಷ ವಿಶ್ವದಲ್ಲಿ ಐವತ್ತೊಂಬತ್ತು ಸಾವಿರಕ್ಕೂ ಅಧಿಕ ಮಂದಿ ಬಲಿಯಾಗುತ್ತಿರುವುದು ಆಘಾತಕಾರಿ. ಇದರಲ್ಲಿ ಶೇ 95ರಷ್ಟು ಪ್ರಕರಣಗಳು ವರದಿಯಾಗುತ್ತಿರುವುದು ಏಷ್ಯಾ, ಆಫ್ರಿಕಾದ ರಾಷ್ಟ್ರಗಳಲ್ಲಿ. ಭಾರತದಲ್ಲಿ ಸಾವಿನ ಸಂಖ್ಯೆ ವರ್ಷಕ್ಕೆ ಇಪ್ಪತ್ತು ಸಾವಿರಕ್ಕೂ ಹೆಚ್ಚು. ಇಲ್ಲಿ ಪ್ರತಿವರ್ಷ ನಾಯಿ ಕಡಿತದ ಒಂದೂ ಮುಕ್ಕಾಲು ಕೋಟಿ ಪ್ರಕರಣಗಳು ವರದಿಯಾಗುತ್ತವೆ. ದಾಖಲಾಗದ ಪ್ರಕರಣಗಳ ಸಂಖ್ಯೆಯೂ ದೊಡ್ಡದಿದೆ!

ನಾಯಿ ಕಡಿತದ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿರುವ ಈ ಹೊತ್ತಿನಲ್ಲಿ ಮತ್ತೊಂದು ‘ವಿಶ್ವ ರೇಬಿಸ್ ದಿನ’ ಬಂದಿದೆ. ಸೆ. 28, ಶ್ರೇಷ್ಠ ಸೂಕ್ಷ್ಮಾಣು ಜೀವಿತಜ್ಞ ಲೂಯಿ ಪ್ಯಾಶ್ಚರ್ ನಿಧನರಾದ ದಿನ. ಹುಚ್ಚುನಾಯಿ ರೋಗಕ್ಕೆ ಲಸಿಕೆ ಕಂಡುಹಿಡಿದ ಈ ವಿಜ್ಞಾನಿಯ ಗೌರವಾರ್ಥ ಪ್ರತಿವರ್ಷ ಈ ದಿನವನ್ನು ವಿಶ್ವ ರೇಬಿಸ್ ದಿನವನ್ನಾಗಿ ಆಚರಿಸಲಾಗುತ್ತದೆ. ‘ರೇಬಿಸ್: ಒಂದು ಸ್ವಾಸ್ಥ್ಯ, ಶೂನ್ಯ ಸಾವು’ ಎಂಬುದು ಈ ವರ್ಷದ ಘೋಷವಾಕ್ಯ. ಕೋವಿಡ್ ತಂದಿತ್ತ ಆಘಾತಗಳ ನಂತರ ಒನ್ ಹೆಲ್ತ್ (ಒಂದು ಸ್ವಾಸ್ಥ್ಯ) ಪರಿಕಲ್ಪನೆಯ ಮಹತ್ವ ಅರಿವಾಗಿದೆ.

ಮಾನವ, ಪ್ರಾಣಿ ಮತ್ತು ಪರಿಸರದ ನಡುವೆ ಬೇರ್ಪಡಿಸಲಾಗದ ಸಂಬಂಧವಿದೆ, ಪರಸ್ಪರ ಅವಲಂಬನೆ ಇದೆ. ಒಂದರ ಅನಾರೋಗ್ಯ ಮತ್ತೊಂದನ್ನು ತೀವ್ರವಾಗಿ ಬಾಧಿಸಬಲ್ಲದು. ಈ ಮೂರೂ ಆರೋಗ್ಯಗಳನ್ನು ಒಂದಾಗಿ ಪರಿಗಣಿಸಿ ಪರಿಹಾರ ಹುಡುಕುವ ಏಕಸ್ವಾಸ್ಥ್ಯದ ಕಾರ್ಯಾಚರಣೆ ಇಂದಿನ ಅನಿವಾರ್ಯ ಕೂಡ. ವಿಶ್ವ ಆರೋಗ್ಯ ಸಂಸ್ಥೆಯು ನಾಯಿಗಳಿಂದ ಹರಡುವ ರೇಬಿಸ್ ರೋಗವನ್ನು 2030ರೊಳಗೆ ಸಂಪೂರ್ಣವಾಗಿ ನಿರ್ಮೂಲ ಮಾಡುವ ಗುರಿ ನಿಗದಿಪಡಿಸಿದೆ.

ರೇಬಿಸ್ ಸಾವುಗಳನ್ನು ಶೂನ್ಯಕ್ಕಿಳಿಸುವ ದಿಸೆಯಲ್ಲಿ ವೈದ್ಯಕೀಯ, ಪಶುವೈದ್ಯಕೀಯ ಮತ್ತು ಪರಿಸರ ಪರಿಣತರು, ವಿಜ್ಞಾನಿಗಳು, ಕ್ಷೇತ್ರ ಮಟ್ಟದ ಕಾರ್ಯಕರ್ತರು, ಸಾರ್ವಜನಿಕರು ಒಗ್ಗೂಡಿ ಪರಸ್ಪರ ಸಹಯೋಗ, ಸಮನ್ವಯದಿಂದ ಕಾರ್ಯತತ್ಪರರಾಗಬೇಕಿದೆ. ಭಾರತ ಸರ್ಕಾರವು ಈ ವಿಷಯದಲ್ಲಿ ಕಾರ್ಯಯೋಜನೆ ರೂಪಿಸಿದೆ. ಕರ್ನಾಟಕ ಸರ್ಕಾರವು ಸೆ. 15ರಿಂದ 30ರವರೆಗೆ ಸಾಕುನಾಯಿಗಳಿಗೆ ಉಚಿತವಾಗಿ ರೇಬಿಸ್ ಲಸಿಕೆ ಹಾಕುವ ಬೃಹತ್ ಆಂದೋಲನ ನಡೆಸುತ್ತಿದೆ. ಈ ಅವಧಿಯಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕಾಯಿಲೆ ಕುರಿತು ಜಾಗೃತಿ ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ.

ನಾಯಿ ಕಡಿತದ ಗಾಯಗಳ ಸಮರ್ಪಕ ನಿರ್ವಹಣೆ ಸಂಭವನೀಯ ಅಪಾಯವನ್ನು ಕನಿಷ್ಠ ಮಟ್ಟಕ್ಕಿಳಿಸುವಲ್ಲಿ ಪ್ರಮುಖ ಅಂಶ. ಕಡಿದ ಜಾಗವನ್ನು ಸಾಧ್ಯವಾದಷ್ಟು ಬೇಗ ಸ್ವಚ್ಛ ನೀರಿನಲ್ಲಿ ಸಾಬೂನು ಬಳಸಿ ಚೆನ್ನಾಗಿ ತಿಕ್ಕಿ ತೊಳೆಯಬೇಕು. ಹದಿನೈದು ನಿಮಿಷಗಳ ಕಾಲ ಹೀಗೆ ಮಾಡುವುದು ಅಪೇಕ್ಷಣೀಯ. ನಂತರದಲ್ಲಿ ಅಯೋಡಿನ್, ಸ್ಪಿರಿಟ್‌ನಂತಹ ನಂಜು ನಿವಾರಕ ದ್ರಾವಣ ಅಥವಾ ಮುಲಾಮು ಹಚ್ಚಿಕೊಳ್ಳಬೇಕು. ವಿಳಂಬ ಮಾಡದೆ ವೈದ್ಯಕೀಯ ನೆರವು ಪಡೆಯುವುದು ಅಗತ್ಯ. ಲಸಿಕೆಯ ಜೊತೆಗೆ ಗಾಯ ತೀವ್ರವಾಗಿದ್ದಲ್ಲಿ ಸುತ್ತಲೂ ರೇಬಿಸ್ ಇಮ್ಯುನೊಗ್ಲೋಬುಲಿನ್ ಚುಚ್ಚುಮದ್ದು ತೆಗೆದುಕೊಳ್ಳುವುದು ಮುಖ್ಯ.



ಅರಿವಿನ ಕೊರತೆಯಿಂದ ಹಲವು ಮೌಢ್ಯ ಪದ್ಧತಿಗಳು ಈಗಲೂ ಆಚರಣೆಯಲ್ಲಿವೆ. ಮದ್ದಾಗಿ ನೀಲಿಪುಡಿಯ ಸೇವನೆ, ಗಾಯಕ್ಕೆ ಅರಿಸಿನ, ಮೆಣಸಿನ ಪುಡಿ, ಸುಣ್ಣ, ಸಗಣಿ, ಗಿಡಮೂಲಿಕೆಗಳ ಪೇಸ್ಟ್ ಬಳಸುವುದು, ಲಸಿಕೆಯ ಬದಲು ನಾಟಿ ಔಷಧಕ್ಕೆ ಮೊರೆಹೋಗುವುದು ಸಾವಿಗೆ ಆಹ್ವಾನ ನೀಡಿದಂತೆ!

ಶ್ವಾನಗಳಿಗೆ ನಿಯಮಿತವಾಗಿ ಲಸಿಕೆ ಹಾಕಿಸುವುದು ಮಾಲೀಕರ ಗುರುತರ ಜವಾಬ್ದಾರಿ. ಬೀದಿ ನಾಯಿಗಳ ನಿಯಂತ್ರಣವೇ ರೇಬಿಸ್ ನಿರ್ಮೂಲನೆಯಲ್ಲಿ ಪ್ರಮುಖ ಸವಾಲು. ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಮೂಲಕ ಸಂಖ್ಯೆಯನ್ನು ನಿಯಂತ್ರಿಸುವುದರ ಜೊತೆಗೆ ಸಾಮೂಹಿಕ ಲಸಿಕಾ ಕಾರ್ಯಕ್ರಮಗಳು ನಿರಂತರವಾಗಿ ನಡೆದಾಗ ಮಾತ್ರ ಸಾವನ್ನು ಶೂನ್ಯಕ್ಕಿಳಿಸುವ ಯೋಜನೆ ಯಶಸ್ವಿಯಾಗಲು ಸಾಧ್ಯ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ, ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ದ್ವೇಷ ರಾಜಕಾರಣದ ಪರಾಕಾಷ್ಠೆ

ಆಂಧ್ರಪ್ರದೇಶದಲ್ಲಿ ಎನ್‌ಟಿಆರ್ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಹೆಸರನ್ನು ವೈಎಸ್‌ಆರ್ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಎಂದು ಬದಲಿಸಲು ಅಲ್ಲಿನ ಮುಖ್ಯಮಂತ್ರಿ ಜಗನ್ಮೋಹನ ರೆಡ್ಡಿ ಮುಂದಾಗಿದ್ದಾರೆ. ಅವರು ಇದನ್ನು ಬಲವಾಗಿ ಸಮರ್ಥಿಸಿಕೊಂಡರೂ ಅವರ ಈ ಕ್ರಮದಲ್ಲಿ ದ್ವೇಷ ರಾಜಕಾರಣದ ಪರಾಕಾಷ್ಠೆ ಎದ್ದು ಕಾಣುತ್ತದೆ. ಅವರು ಅಧಿಕಾರ ವಹಿಸಿಕೊಂಡ ಮೊದಲ ದಿನಗಳಲ್ಲೇ ಎನ್‌ಟಿಆರ್ ಹೆಸರಿನಲ್ಲಿರುವ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು ರದ್ದು ಮಾಡಿದ್ದರು ಅಥವಾ ಅವುಗಳ ಹೆಸರನ್ನು ಬದಲಿಸಿದ್ದರು.

ಹೆಸರನ್ನು ಬದಲಿಸುವುದರ ಬದಲಿಗೆ ಇನ್ನೊಂದು ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ವೈ.ಎಸ್. ರಾಜಶೇಖರ ರೆಡ್ಡಿ ಅವರ ಹೆಸರನ್ನು ಇಟ್ಟಿದ್ದರೆ ಅವರ ಘನತೆ ಹೆಚ್ಚುತ್ತಿತ್ತು. ರಾಜಕೀಯದಲ್ಲಿ ಯಾವುದೂ ಶಾಶ್ವತವಲ್ಲ. ಮುಂದಿನ ಚುನಾವಣೆಯಲ್ಲಿ ಅಕಸ್ಮಾತ್ ತೆಲುಗುದೇಶಂ ಪಕ್ಷ ಅಧಿಕಾರಕ್ಕೆ ಬಂದರೆ, ಈ ವಿಶ್ವವಿದ್ಯಾಲಯಕ್ಕೆ ಹಳೆ ಹೆಸರೇ ಬರುವುದು ನಿಶ್ಚಿತ. ರಾಜಕಾರಣದಲ್ಲಿ ದ್ವೇಷ ಭಾವಕ್ಕೂ ಒಂದು ಮಿತಿ ಇರಬೇಕು.

ರಮಾನಂದ ಶರ್ಮಾ, ಬೆಂಗಳೂರು

ನಾಡಹಬ್ಬದಲ್ಲಿ ಮಾಯವಾಯ್ತು ನಾಡಭಾಷೆ

ರಾಷ್ಟ್ರಪತಿ ಅವರು ಮೈಸೂರಿಗೆ ಬಂದು ನಾಡಹಬ್ಬ ದಸರಾವನ್ನು ಉದ್ಘಾಟಿಸಿದರು. ಈ ಸಮಾರಂಭದ ವೇದಿಕೆಯಲ್ಲಿ ಹಾಕಿದ್ದ ಬ್ಯಾನರ್ ಸಂಪೂರ್ಣವಾಗಿ ಇಂಗ್ಲಿಷ್‌ನಲ್ಲಿತ್ತು. ನಾಡಹಬ್ಬದಲ್ಲಿ ನಾಡಿನ ನುಡಿಗೆ ಜಾಗವಿಲ್ಲದ ಮೇಲೆ ಅಂತಹ ನಾಡಹಬ್ಬಕ್ಕೆ ಅರ್ಥವಿದೆಯೇ?

ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರವು ಮಸೂದೆ ಮಂಡಿಸಿದೆ. ಕನ್ನಡ ಭಾಷೆ ಬಳಕೆ ವಿಚಾರದಲ್ಲಿ ನಿಯಮ ಉಲ್ಲಂಘನೆಗೆ ದಂಡ ವಿಧಿಸಲು ಮುಂದಾಗಿದೆ. ಆದರೆ ಸರ್ಕಾರದ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದಲ್ಲೇ ಹೀಗೆ ಕನ್ನಡವನ್ನು ಕಡೆಗಣಿಸುವುದು ಸರಿಯೇ?

ನಾಗರಾಜ್ ಮಾದೇಗೌಡ, ಕನಕಪುರ

ಹೇಳಿಕೆ ಕಾರ್ಯರೂಪಕ್ಕೆ ಬರಲಿ

ಸಾಲ ವಸೂಲಿಗೆ ರೈತರ ಮನೆ, ಆಸ್ತಿ ಜಪ್ತಿ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿರುವುದು (ಪ್ರ.ವಾ., ಸೆ. 25) ಸ್ವಾಗತಾರ್ಹ ಕ್ರಮ. ಬ್ಯಾಂಕ್‌ಗಳಿಗೂ ಉನ್ನತ ಮಟ್ಟದಲ್ಲಿ ಇದನ್ನು ಅವರು ಮನದಟ್ಟು ಮಾಡಿಸಲಿ. ಆಗ ವಸೂಲಿಗೆ ಮೇಲಿನವರ ಒತ್ತಡ ಇರುವುದಿಲ್ಲ! ಮುಖ್ಯಮಂತ್ರಿ ಮಾತು ತುರ್ತಾಗಿ ಕಾರ್ಯರೂಪಕ್ಕೆ ಬರಲಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ದಸರಾ ಕವಿಗೋಷ್ಠಿ: ಬ್ಯಾರಿ ಭಾಷೆ ಕಡೆಗಣನೆ

ಮೈಸೂರು ದಸರಾ ಉತ್ಸವದ ಅಂಗವಾಗಿ ಏರ್ಪಡಿಸುವ ‘ದಸರಾ ಕವಿಗೋಷ್ಠಿ’ಯಲ್ಲಿ ಕನ್ನಡ ಕವಿಗಳ ಜೊತೆಗೆ ಪ್ರತಿವರ್ಷವೂ ಕರ್ನಾಟಕದ ಇತರ ಪ್ರಮುಖ ಭಾಷೆಗಳ ಕವಿಗಳಿಗೂ ಅವಕಾಶ ನೀಡಲಾಗುತ್ತದೆ. ತುಳು, ಕೊಂಕಣಿ, ಕೊಡವ, ಅರೆಭಾಷೆ ಮತ್ತು ಎರವ ಭಾಷೆಗಳ ಕವಿತೆಗಳಿಗೆ ಈ ವರ್ಷ ಅವಕಾಶ ನೀಡಲಾಗಿದೆ. ಆದರೆ ಕರಾವಳಿ ಕರ್ನಾಟಕದ ಬಹುಮುಖ್ಯ ಭಾಷೆಯಾದ ಬ್ಯಾರಿ ಭಾಷೆಯನ್ನು ಕಡೆಗಣಿಸಲಾಗಿದ್ದು, ಬ್ಯಾರಿ ಕವಿಗಳಿಗೆ ಅವಕಾಶ ನೀಡಿಲ್ಲ. ಇಂತಹ ಮಲತಾಯಿ ಧೋರಣೆ ಸರಿಯಲ್ಲ.

ರಾಜ್ಯದಲ್ಲಿ ಸುಮಾರು 12 ಲಕ್ಷಕ್ಕೂ ಹೆಚ್ಚು ಜನರು ಬ್ಯಾರಿ ಭಾಷೆಯನ್ನು ಮಾತನಾಡುತ್ತಾರೆ. ನೂರಾರು ಕವಿಗಳು ಈ ಭಾಷೆಯಲ್ಲಿ ಕವಿತೆಗಳನ್ನು ರಚಿಸುತ್ತಿದ್ದಾರೆ. ಬ್ಯಾರಿ ಭಾಷೆಯ ಬೆಳವಣಿಗೆಗೆ ರಾಜ್ಯ ಸರ್ಕಾರವೇ ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನೂ ರಚಿಸಿದೆ. ಕನ್ನಡ ಸಾಹಿತ್ಯಕ್ಕೆ ಬ್ಯಾರಿ ಮಾತೃಭಾಷೆಯ ಹತ್ತಾರು ಲೇಖಕರು ಮಹತ್ವದ ಕೊಡುಗೆ ನೀಡಿದ್ದಾರೆ. ಕನ್ನಡದ ಮುಸ್ಲಿಂ ಹಿನ್ನೆಲೆಯ ಮಹತ್ವದ ಲೇಖಕರಲ್ಲಿ ಹೆಚ್ಚಿನವರು ಬ್ಯಾರಿ ಭಾಷಿಕರು. ದಸರಾ ಕವಿಗೋಷ್ಠಿ ಉಪಸಮಿತಿಗೆ ಇದ್ಯಾವುದೂ ಗೊತ್ತಿಲ್ಲವೇ? ಅಥವಾ ಗೊತ್ತಿದ್ದೂ ತಾರತಮ್ಯ ನೀತಿ ಅನುಸರಿಸಿದೆಯೇ?

ಅಧ್ಯಕ್ಷರೂ ಇಲ್ಲದೆ, ಪೂರ್ಣಾವಧಿ ರಿಜಿಸ್ಟ್ರಾರ್ ಕೂಡಾ ಇಲ್ಲದೆ ಅಕಾಡೆಮಿಯ ಚಟುವಟಿಕೆಗಳು ಕುಂಠಿತಗೊಂಡಿವೆ. ಇದ್ದ ಅಧ್ಯಕ್ಷರನ್ನು ಸರ್ಕಾರ ಹಠಾತ್ತಾಗಿ ವಜಾ ಮಾಡಿ ಹಲವು ತಿಂಗಳಾದವು. ಹೊಸ ಅಧ್ಯಕ್ಷರ ನೇಮಕದ ಬಗ್ಗೆಯೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಲಕ್ಷ್ಯ ಮನೋಭಾವ ಹೊಂದಿದೆ. ಬ್ಯಾರಿ ಭಾಷೆಯ ಕುರಿತ ಈ ತಾರತಮ್ಯವನ್ನು ನಾವು ಖಂಡಿಸುತ್ತೇವೆ.

ಬಿ.ಎಂ.ಹನೀಫ್, ಟಿ.ಕೆ.ಷರೀಫ್, ಬೆಂಗಳೂರು

ವರಿಷ್ಠರ ಇಬ್ಬಗೆ ನಿಲುವು

‘ಕಾಂಗ್ರೆಸ್ ಪಕ್ಷ ಸೋನಿಯಾ ಗಾಂಧಿ ಕುಟುಂಬದ ಹಿಡಿತದಲ್ಲಿದೆ’ ಎಂಬ ಟೀಕೆಯನ್ನು ಈಗಿನ ನಡವಳಿಕೆಗಳು ರುಜುವಾತುಪಡಿಸುತ್ತಿವೆ. ಪಕ್ಷದ ಅಧ್ಯಕ್ಷ ಸ್ಥಾನ ‘ನಮಗೆ ಬೇಡ’ ಎಂದು ನೆಹರೂ– ಗಾಂಧಿ ಕುಟುಂಬವೇ ಹೇಳಿದೆ. ಈಗ ತಾವು ‘ಒಪ್ಪುವವರನ್ನೇ’ ಪಕ್ಷದ ಅಧ್ಯಕ್ಷರನ್ನಾಗಿ ಮಾಡಲು ಹಟ ತೊಟ್ಟಂತಿದೆ. ತಮ್ಮ ‘ಆಪ್ತ’ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಲು ಸೂಚಿಸಿತು. ಆದರೆ, ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿ ಸರ್ಕಾರವನ್ನು ಉರುಳಿಸಲು ಸಂಚು ಮಾಡಿದ ಸಚಿನ್ ಪೈಲಟ್ ಅವರನ್ನು ಮುಂದಿನ ಮುಖ್ಯಮಂತ್ರಿಯಾಗಿ ನೇಮಿಸುವುದು ಬೇಡ ಎಂದು ಗೆಹಲೋತ್ ಬೆಂಬಲಿಗರು ಹೇಳಿದ್ದಕ್ಕೆ, ಪಕ್ಷಕ್ಕೆ ‘ನಿಷ್ಠ’ರಾಗಿದ್ದ ಗೆಹಲೋತ್ ಈಗ ತಮಗೆ ನಿಷ್ಠರಾಗಿಲ್ಲ ಎಂದು ಅವರ ಮೇಲೇ ಗರಂ ಆಗಿ, ಅವರ ಬದಲು ಮತ್ತೊಬ್ಬ ಆಪ್ತರನ್ನು ಹುಡುಕಲಾಗುತ್ತಿದೆ.

ಹೆಚ್ಚಿನ ಶಾಸಕರು ‘ನಮ್ಮ ನಾಯಕನನ್ನು ನೆಹರೂ–ಗಾಂಧಿ ಕುಟುಂಬವೇ ನಿರ್ಧರಿಸಲಿ’ ಎಂದಾಗ ನಾಯಕತ್ವವು ತಲೆದೂಗುತ್ತದೆ. ರಾಜಸ್ಥಾನದಲ್ಲಿ ಈಗ ಹೆಚ್ಚಿನ ಶಾಸಕರು ‘ನಮ್ಮ ನಾಯಕನನ್ನು ನಾವೇ ಆರಿಸುತ್ತೇವೆ’ ಎಂದಾಗ ಅವರಿಗೆ ಪಕ್ಷ ವಿರೋಧಿ ಎಂಬ ಹಣೆಪಟ್ಟಿ ಹಾಕುವುದು ಸರಿಯೇ? ಪಕ್ಷವು ಕುಟುಂಬದ ಸ್ವತ್ತೇ?

ಪಿ.ಸಿ.ಕೇಶವ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಕರಣ – 1

ಆಕೆ ಪ್ರೌಢಶಾಲೆಯ ಹುಡುಗಿ. ಇನ್‌ಸ್ಟಾಗ್ರಾಂ ಮೂಲಕ ಪುರುಷನೊಂದಿಗೆ ಪರಿಚಯ, ಸಂದೇಶ ವಿನಿಮಯ. ಮುಖಾಮುಖಿ ಭೇಟಿಯೂ ಆಯಿತು. ಆದರೆ, ಅಲ್ಲಿ ಹೋಗಿ ನೋಡಿದರೆ, ಆತನಿಗೆ ಮದುವೆ ಆಗಿದೆ. ಅಷ್ಟೇ ಅಲ್ಲ, ಈ ಹುಡುಗಿಯದ್ದೇ ವಯಸ್ಸಿನ ಒಬ್ಬ ಮಗಳೂ ಇದ್ದಾಳೆ.

ಪ್ರಕರಣ – 2

ಈ ಹುಡುಗಿಯೂ ಅಷ್ಟೇ, ಪ್ರೌಢಶಾಲೆಯಲ್ಲಿಯೇ ಓದುತ್ತಿರುವವಳು. ಸಾಮಾಜಿಕ ಜಾಲತಾಣದ ಮೂಲಕ ಪುರುಷನೊಂದಿಗೆ ಪರಿಚಯ. ಪರಿಚಯ ಸಲಿಗೆಗೂ ತಿರುಗಿದೆ. ಇಬ್ಬರೂ ಸೇರಿ ನಡೆಸಿದ ಲೈಂಗಿಕ ಕ್ರಿಯೆಯನ್ನು ವಿಡಿಯೊ ಮಾಡಿಕೊಂಡಿದ್ದಾರೆ. ಸ್ವಲ್ಪ ದಿನಗಳ ನಂತರ ಇಬ್ಬರ ಮಧ್ಯೆ ಸಣ್ಣ ಬಿರುಕು ಮೂಡುತ್ತದೆ. ಇನ್ನೊಂದೆಡೆ, ತನ್ನ ಸ್ನೇಹಿತರೊಂದಿಗೆ ಜಂಬ ತೋರಿಸಲು ಆ ಪುರುಷ ಆ ವಿಡಿಯೊವನ್ನು ಶೇರ್ ಮಾಡಿಕೊಳ್ಳುತ್ತಾನೆ. ಇದು ನೂರಾರು ಶೇರ್ ಆಗುತ್ತದೆ. ಕೊನೆಗೆ ಒಂದು ದಿನ ಆ ಹುಡುಗಿಯ ತಂದೆ–ತಾಯಿಗೆ ಈ ವಿಡಿಯೊ ಸಿಗುತ್ತದೆ. ನಂತರ ಹುಡುಗಿಯ ತಾಯಿ ಆತ್ಮಹತ್ಯೆಗೆ ಯತ್ನಿಸುತ್ತಾರೆ.


ಪ್ರಕರಣ – 3

ಈಕೆ ಹದಿಹರೆಯದ ಹುಡುಗಿ. ಸಾಮಾಜಿಕ ಜಾಲತಾಣಗಳ ಮೂಲಕ ಬೇರೆ ರಾಜ್ಯದ ಹುಡುಗನ ಪರಿಚಯ. ಇಬ್ಬರಿಗೂ ಪರಸ್ಪರರ ಭಾಷೆ ಬರುವುದಿಲ್ಲ. ಇಂಗ್ಲಿಷ್ ಬಳಕೆಯೂ ಹೆಚ್ಚಿಗೆ ಬರುವುದಿಲ್ಲ. ಇಬ್ಬರೂ ಇಮೋಜಿಗಳ ಮೂಲಕ ಮಾತನಾಡಿಕೊಳ್ಳುತ್ತಾರೆ. ಲೈಂಗಿಕವಾಗಿ ಪ್ರಚೋದನಕಾರಿ ವಿಡಿಯೊ ಮತ್ತು ಫೋಟೊಗಳನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ನಂತರ ಇಬ್ಬರೂ ಭೇಟಿ ಆಗಿ ಲೈಂಗಿಕ ಕ್ರಿಯೆ ನಡೆಸುತ್ತಾರೆ.

ಪ್ರಕರಣ – 4

ಚಿಕ್ಕ ವಯಸ್ಸಿನ ಹುಡುಗಿ. ಸಾಮಾಜಿಕ ಜಾಲತಾಣಗಳ ಮೂಲಕ ಯುವಕನೊಬ್ಬನ ಪರಿಚಯ. ಪರಸ್ಪರ ಭೇಟಿ. ಲೈಂಗಿಕ ಕ್ರಿಯೆ ನಡೆಸಬೇಕಾದರೆ, ಮದುವೆ ಆಗಬೇಕು ಎಂದು ಸಾಮಾನ್ಯವಾಗಿ ಹಿರಿಯರು ಮನೆಯಲ್ಲಿ ಮಾತನಾಡಿದ್ದನ್ನು ಕೇಳಿಸಿಕೊಂಡಿದ್ದಾರೆ. ಹಾಗಾಗಿ ಹದಿಹರೆಯದಲ್ಲೇ ಮದುವೆಯೇ ಆಗಿಬಿಟ್ಟಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು



2014–15 ನೇ ಸಾಲಿನ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಕೆಲವು ಅಧಿಕಾರಿಗಳನ್ನು ಸಿಐಡಿ ಬಂಧಿಸಿದೆ. ಅಂದರೆ, ಇದರಲ್ಲಿ ಪ್ರಭಾವಿ ರಾಜಕಾರಣಿಗಳೂ ಶಾಮೀಲಾದ ಸಾಧ್ಯತೆ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಬಾಲಕಿಯರ ಬಾಲ್ಯ ಕಸಿದ ಮೊಬೈಲ್ ಮಾಯಾಲೋಕ

• ಸುಕೃತ ಎಸ್.

ಇಂತಹ ಹತ್ತಾರು ಪ್ರಕರಣಗಳು ರಾಜ್ಯದ ಎಲ್ಲ ಭಾಗಗಳಲ್ಲಿಯೂ ನಡೆದಿವೆ. ಕೆಲವು ವರದಿಯಾದರೆ, ಹೆಚ್ಚಿನವು ಬೆಳಕಿಗೇ ಬರುವುದಿಲ್ಲ. ಮೊಬೈಲ್, ಸಾಮಾಜಿಕ ಜಾಲತಾಣ ಬಳಕೆ ಹೆಚ್ಚಳದಿಂದಾದ ಈ ಹೊಸ ಪ್ರವೃತ್ತಿಯ ಕಾರಣ, ಪರಿಣಾಮ, ತಡೆಯುವ ವಿಧಾನಗಳು ಹೀಗಿವೆ:

ಈ ಎಲ್ಲಾ ಪ್ರಕರಣಗಳಲ್ಲೂ ಹುಡುಗಿಯರ ವಯಸ್ಸು 14 ವರ್ಷದಿಂದ 17 ವರ್ಷ. ಚಿಕ್ಕ ವಯಸ್ಸಿನಲ್ಲಿಯೇ ಸಾಮಾಜಿಕ ಜಾಲತಾಣಗಳಲ್ಲಿ ಖಾತೆಗಳನ್ನು ಮಾಡಿಕೊಳ್ಳುವ ಮಕ್ಕಳು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಆದರೆ, ಇಲ್ಲಿ ಎಲ್ಲೂ ಬಲವಂತವಿಲ್ಲ. ತಾವಾಗಿಯೇ, ಇಷ್ಟಪಟ್ಟು ಈ ರೀತಿ ಮಾಡಿಕೊಳ್ಳುತ್ತಿದ್ದಾರೆ ಎನ್ನುವುದು ಗಮನಾರ್ಹ ಅಂಶ ಎನ್ನುತ್ತಾರೆ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯೆ ಶಿವಮೊಗ್ಗದ ಎಂ.ವಿ. ಪ್ರತಿಭಾ.



ಎಂ.ವಿ. ಪ್ರತಿಭಾ

ಕೊರೊನಾ ತಂದ ಲಾಕ್‌ಡೌನ್ ಲಕ್ಷಾಂತರ ಜನರ ಬದುಕನ್ನು ಕಸಿದುಕೊಂಡಿತು. ಆದರೆ, ಇದು ಮಕ್ಕಳ ಮೇಲೆ ಬೀರಿದ ಪರಿಣಾಮ ಹೆಚ್ಚು ಭೀಕರವಾಗಿದೆ. ಲಾಕ್‌ಡೌನ್ ಆಗಿದ್ದರಿಂದ ತರಗತಿಗಳು ಆನ್‌ಲೈನ್ ಆದವು. ಇದಕ್ಕಾಗಿ ಎಲ್ಲಾ ಮಕ್ಕಳ ಕೈಗೆ ಮೊಬೈಲ್ ಸಿಕ್ಕಿತು. ಅಲ್ಲಿಯ ವರೆಗೆ ಅಪ್ಪ–ಅಮ್ಮನ ಮೊಬೈಲ್ ಬಳಸುತ್ತಿದ್ದ ಕೈಗಳಿಗೆ ತಮ್ಮದೇ ಆದ ಮೊಬೈಲ್ ಸಿಕ್ಕಿದಂತಾಯಿತು. ಇಡೀ ದಿನ ಅವರ ಕೈಯಲ್ಲೇ ಮೊಬೈಲ್ ಉಳಿಯುವಂತಾಯಿತು. ಇದು ಈ ಎಲ್ಲಾ ಅನಾಹುತಗಳಿಗೆ ಕಾರಣವಾಯಿತು ಎಂದು ಪ್ರತಿಭಾ ಅಭಿಪ್ರಾಯಪಡುತ್ತಾರೆ.

ಈ ರೀತಿಯ ಪ್ರವೃತ್ತಿ ಗಂಡುಮಕ್ಕಳಲ್ಲೂ ಇದೆ. ಸಾಮಾನ್ಯವಾಗಿ ಪ್ರೌಢಶಾಲೆ ಹಂತದಲ್ಲಿರುವ ಗಂಡುಮಕ್ಕಳಿಗೆ ಇಷ್ಟೆಲ್ಲ ಧೈರ್ಯವಾಗಲಿ, ಆರ್ಥಿಕ ಸಬಲತೆಯಾಗಲಿ ಇರುವುದಿಲ್ಲ. ಆದರೂ, ಕೆಲವರು ತಮ್ಮ ವಯಸ್ಸಿನ ಹೆಣ್ಣುಮಕ್ಕಳೊಂದಿಗೆ ಈ ರೀತಿಯ ಚಟುವಟಿಕೆಯಲ್ಲಿ ತೊಡಗಿರುತ್ತಾರೆ. ಪ್ರೌಢಶಾಲಾ ಹಂತದಿಂದ ಸ್ವಲ್ಪ ಮೇಲೆ ಬರುವ ಗಂಡುಮಕ್ಕಳಲ್ಲಿ ಗುಂಪು ವೀಕ್ಷಣೆ (ಅಶ್ಲೀಲ ವಿಡಿಯೊ) ಪ್ರವೃತ್ತಿ ಇರುತ್ತದೆ. ಜೊತೆಗೆ, ಗುಂಪಾಗಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಸಗುವ ಪ್ರಕರಣಗಳೂ ಇವೆ ಎನ್ನುತ್ತಾರೆ ಅವರು.

14ರಿಂದ 17 ವರ್ಷದ ಹುಡುಗಿಯರಿಗೆ ಪುರುಷರ ಬಗ್ಗೆಯೇ ಹೆಚ್ಚು ಆಕರ್ಷಣೆ ಇರುತ್ತದೆ. ಇದಕ್ಕೆ ಹಲವು ಕಾರಣಗಳಿವೆ. ಒಂದು, ಪುರುಷರ ಬಳಿ ಕಾರು ಅಥವಾ ಬೈಕು ಇರುತ್ತದೆ. ದುಡ್ಡೂ ಇರುತ್ತದೆ. ಆದ್ದರಿಂದ ಬೇಕಾದಲ್ಲಿಗೆ ಹೋಗಬಹುದು. ಜೊತೆಗೆ ಲಾಡ್ಜ್‌ಗಳಲ್ಲಿ ಕೊಠಡಿ ಮಾಡುವ ಆರ್ಥಿಕ ಶಕ್ತಿ ಇರುತ್ತದೆ ಇತ್ಯಾದಿ. ಆದ್ದರಿಂದಲೇ ಹೆಣ್ಣುಮಕ್ಕಳು ಪುರುಷರಿಂದ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ ಎನ್ನುತ್ತಾರೆ.



ಮಕ್ಕಳಲ್ಲಿ ಈ ರೀತಿಯ ಪ್ರವೃತ್ತಿ ಯಾಕಾಗಿ ಹೆಚ್ಚಾಗಿದೆ?

- ಅಂತರ್ಜಾಲ ಎಷ್ಟು ಉಪಯುಕ್ತವೋ ಅಷ್ಟೇ ಅಪಾಯಕಾರಿ ಕೂಡ. ಈಗಿನ ಮಕ್ಕಳು ಎಲ್ಲವನ್ನೂ ಇಲ್ಲಿ ನೋಡಿಯೇ ಕಲಿಯುತ್ತಿದ್ದಾರೆ. ಲೈಂಗಿಕತೆಯ ಬಗ್ಗೆ ಶಿಕ್ಷಣ ಕೊಡುವುದಕ್ಕಾಗಿ ಮಾಡಿರುವ ವಿಡಿಯೊಗಳನ್ನು ನೋಡಿಯೂ ಮಕ್ಕಳು ಕಲಿಯುತ್ತಾರೆ. ಅಷ್ಟೇ ಅಲ್ಲದೆ, ಲೈಂಗಿಕ ಕ್ರಿಯೆ ನಡೆಸುವಾಗ ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗೆಗೂ ಇಲ್ಲಿಯೇ ಮಾಹಿತಿ ಪಡೆಯುತ್ತಾರೆ.
- ಒಂದೇ ಮಗು ಸಾಕು ಎಂಬ ಪ್ರವೃತ್ತಿ ಈಗ ಇದೆ. ಇದರಿಂದಾಗಿ ಮನೆಯಲ್ಲಿ ಅವರಿಗೆ ಜೊತೆಗಾರರು ಇರುವುದಿಲ್ಲ. ಮನೆಯಲ್ಲಿ ಅವರಿಗೆ ಪ್ರತ್ಯೇಕ ಕೋಣೆ ಇರುತ್ತದೆ; ಕೈಯಲ್ಲಿ ಮೊಬೈಲ್ ಇದೆ. ಆಗಷ್ಟೇ ವಯಸ್ಸಿಗೆ ಬರುತ್ತಿರುವ ಮಕ್ಕಳ ಮೇಲೆ ಈ ಎಲ್ಲವೂ ಪರಿಣಾಮ ಬೀರುತ್ತಿದೆ. ಲೈಂಗಿಕತೆ, ಅಪರಾಧ ಕೃತ್ಯಗಳ ವಿಡಿಯೊಗಳನ್ನು ಸತತವಾಗಿ ನೋಡುವುದರಿಂದ ಮಕ್ಕಳ ಹಾರ್ಮೋನ್‌ಗಳಲ್ಲಿ ವ್ಯತ್ಯಾಸವಾಗುತ್ತದೆ.
- ಒಟಿಟಿ ವೇದಿಕೆಯಲ್ಲಿ ಸಿಗುವ ವಿದೇಶಿ ಸಿನಿಮಾಗಳು, ವೆಬ್ ಸರಣಿಗಳಲ್ಲಿನ ಲೈಂಗಿಕತೆ ಹೆಚ್ಚಿರುವ ಅಥವಾ ಲೈಂಗಿಕ ಪ್ರಚೋದನಕಾರಿ ದೃಶ್ಯಗಳು ಮಕ್ಕಳನ್ನು ಹೆಚ್ಚಿಗೆ ಆಕರ್ಷಿಸುತ್ತಿವೆ.
- ಈ ರೀತಿಯ ಸಿನಿಮಾ, ವೆಬ್ ಸರಣಿಗಳಲ್ಲಿನ ಪಾತ್ರಗಳನ್ನು ನಕಲು (ಇಮಿಟೇಟ್) ಮಾಡುವ ಪ್ರವೃತ್ತಿ ಮಕ್ಕಳಲ್ಲಿ ಹೆಚ್ಚುತ್ತಿದೆ. ಅವರು ತಿಂದಂತೆ ತಿನ್ನುವುದು, ಕುಡಿಯುವ ಚಟ ಬೆಳೆಸಿಕೊಳ್ಳುವುದು, ಆ ಪಾತ್ರ ತೊಟ್ಟಂತೆ ಬಟ್ಟೆ ತೊಡುವುದು, ಸಿನಿಮಾದಲ್ಲಿ ವಾಹನ ಚಲಾಯಿಸಿದಂತೆಯೇ ವಾಹನ ಚಲಾಯಿಸುವುದು ಮಾಡುತ್ತಾರೆ. ನಂತರ ಅದು ಲೈಂಗಿಕತೆ ವರೆಗೂ ಬಂದು ನಿಲ್ಲುತ್ತದೆ. ಅಪ್ಪನೋ ಅಮ್ಮನೋ ಅಥವಾ ಸುತ್ತಲಿನ ಯಾರೂ ಮಕ್ಕಳಿಗೆ ಆದರ್ಶವಾಗಿ ಕಾಣುತ್ತಿಲ್ಲ. ಬದಲಿಗೆ ಆ ಪಾತ್ರಗಳೇ ಅವರಿಗೆ ಮಾದರಿಯಾಗಿವೆ.

ಇದೇನು ತಪ್ಪಲ್ಲ: ಆಪ್ತಸಮಾಲೋಚನೆ ವೇಳೆ ಮಕ್ಕಳ ಹೇಳಿಕೆ

ಮಕ್ಕಳನ್ನು ರಕ್ಷಿಸಿ ಕರೆದುಕೊಂಡು ಬಂದ ಬಳಿಕ ಅವರಿಗೆ ಆಪ್ತಸಮಾಲೋಚನೆ ಮಾಡಲಾಗುತ್ತಿದೆ. ಈ ವೇಳೆ ಮಕ್ಕಳಿಗೆ ತಾವು ಮಾಡಿರುವುದು ತಪ್ಪು ಅಥವಾ ಈ ವಯಸ್ಸಿಗೆ ಇದನ್ನೆಲ್ಲಾ ಮಾಡಬಾರದಾಗಿತ್ತು ಎನ್ನುವ ಬಗ್ಗೆ ಪಶ್ಚಾತ್ತಾಪವಾಗಲಿ, ಭಯವಾಗಲಿ ಇರಲಿಲ್ಲ. ಇದು ಬಹಳ ಅಪಾಯಕಾರಿ ಬೆಳವಣಿಗೆ ಎನ್ನುತ್ತಾರೆ ಪ್ರತಿಭಾ.

'ಏನೋ ಒಂದು ಆಗಿಹೋಯಿತು. ಇದೆಲ್ಲ ತಪ್ಪಲ್ಲ. ನಾವು ಸುರಕ್ಷಾ ಕ್ರಮಗಳನ್ನು ತೆಗೆದುಕೊಂಡಿದ್ದೆವು' ಎನ್ನುತ್ತಾರೆ ಮಕ್ಕಳು ಎಂದು ಅವರು ಕಳವಳ ವ್ಯಕ್ತಪಡಿಸಿದರು. ತಪ್ಪು ನಡೆದು ಹೋಯಿತು ಎನ್ನುವುದಕ್ಕಿಂತ, ಇದೆಲ್ಲ ನಾಲ್ಕು ಜನರಿಗೆ ಗೊತ್ತಾಯಿತಲ್ಲ ಎಂದು ಕೆಲವು ಮಕ್ಕಳು ಖಿನ್ನತೆಗೆ ಒಳಗಾಗುತ್ತಿದ್ದಾರೆ ಎಂದರು.

'ಐಟಿ ಕಾಯ್ದೆ ಪಾಠ ಮಾಡಿ'

ಅಂತರ್ಜಾಲ, ಮೊಬೈಲ್ ಅಥವಾ ಸಾಮಾಜಿಕ ಜಾಲತಾಣಗಳ ಬಳಕೆಯು ಹೊಣೆಗಾರಿಕೆಯಿಂದ ಕೂಡಿರಬೇಕು.

ಒಂದು ಉದಾಹರಣೆಯ ಮೂಲಕ ಇಡೀ ವಿಷಯವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡೋಣ. ವಾಹನ ಚಾಲನಾ ಪರವಾನಗಿ ಪಡೆಯಬೇಕು ಎಂದಾದರೆ, ಮೊದಲಿಗೆ ಸಂಚಾರ ನಿಯಮಗಳನ್ನು ತಿಳಿದುಕೊಂಡಿರಬೇಕಾಗುತ್ತದೆ. ಅದೇ ರೀತಿ ಮೊಬೈಲ್ ಬಳಕೆ ಮಾಡುವುದಕ್ಕೂ ಮೊದಲು ಮಕ್ಕಳಿಗೆ ಮಾಹಿತಿ ತಂತ್ರಜ್ಞಾನ ಕಾಯ್ದೆಯನ್ನು ತಿಳಿಸಿಕೊಡಬೇಕಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ ಸೈಬರ್ ಕಾನೂನು ಮತ್ತು ಸುರಕ್ಷಾ ತಜ್ಞ ಡಾ. ಅನಂತ ಪ್ರಭು ಜಿ.



ಡಾ. ಅನಂತ ಪ್ರಭು ಜಿ.

ಈ ಕಾಯ್ದೆಯ ಪ್ರಕಾರ, ಒಬ್ಬರ ಖಾಸಗಿ ಚಿತ್ರವನ್ನು ಹಂಚಿಕೊಂಡರೆ, ಅವರಿಗೆ ಮೂರು ವರ್ಷ ಜೈಲು ಮತ್ತು ₹2 ಲಕ್ಷ ದಂಡ ವಿಧಿಸಬಹುದು. ಪಾಸ್‌ವರ್ಡ್ ಬಳಕೆ ಮಾಡಿದರೆ, ಮೂರು ವರ್ಷ ಜೈಲು, ₹1 ಲಕ್ಷ ದಂಡ ಹಾಕಬಹುದು. ಈ ಎಲ್ಲಾ ವಿಷಯಗಳು ಮಕ್ಕಳಿಗೆ ತಿಳಿದಿರಬೇಕು ಎನ್ನುವುದು ಅವರ ಅಭಿಮತ

ಸಿನಿಮಾಗಳಿಗೆ ಯು/ಎ, ಯು ಪ್ರಮಾಣಪತ್ರವಿದ್ದಂತೆ ಆ್ಯಪ್‌ಗಳಿಗೂ ರೇಟಿಂಗ್ ಇದೆ. ಎಂಟರ್‌ಟೇನ್‌ಮೆಂಟ್ ಸಾಫ್ಟ್‌ವೇರ್ ರೇಟಿಂಗ್ ಬೋರ್ಡ್ ಈ ರೇಟಿಂಗ್ ನೀಡುತ್ತದೆ. ಆ್ಯಪ್‌ಗಳಿಗೆ ಇ.ಸಿ ರೇಟಿಂಗ್ ಎಂದಿರುತ್ತದೆ. ಈ ರೇಟಿಂಗ್ ಇದ್ದ ಆ್ಯಪ್‌ಗಳನ್ನು ಮಕ್ಕಳು ಬಳಸಬಹುದು. ಕೆಲವು ಆ್ಯಪ್‌ಗಳಿಗೆ ಇ (ಎವ್ರಿವನ್) ಎಂದಿರುತ್ತದೆ. ಕೆಲವು ಆ್ಯಪ್‌ಗಳಿಗೆ 13+, 17+ ಮತ್ತು 18+ ಎಂದಿರುತ್ತವೆ. ಈ ಬಗ್ಗೆ ಪೋಷಕರು ಗಮನಹರಿಸಬೇಕು ಎಂದರು.

'ಗೂಗಲ್ ಫ್ಯಾಮಿಲಿ ಲಿಂಕ್' ಅಂತ ಒಂದು ಆ್ಯಪ್ ಇದೆ. ಇದರಲ್ಲಿ ಮಕ್ಕಳ ವಯಸ್ಸನ್ನು ನಮೂದಿಸಿದರೆ, ಆ ವಯಸ್ಸಿನ ಮಕ್ಕಳು ನೋಡುವ ಕಂಟೆಂಟ್ ಅನ್ನು ಮಾತ್ರ ತೋರಿಸುತ್ತದೆ. ಮಕ್ಕಳ ಕೈಗೆ ಮೊಬೈಲ್ ಕೊಡುವುದಕ್ಕೆ ಮೊದಲು ಇದನ್ನು ಅಳವಡಿಸಿಕೊಳ್ಳಬೇಕು. ನಾನು ಸಣ್ಣ ಸಮೀಕ್ಷೆ ನಡೆಸಿದ್ದೇನೆ. ಶಾಲೆಗಳಿಗೆ ಭೇಟಿ ನೀಡಿ, ಈ ರೀತಿಯ ಪೇರೆಂಟಲ್ ಕಂಟ್ರೋಲ್ ವ್ಯವಸ್ಥೆ ಇದೆಯೇ ಎಂದು ಗಮನಿಸಿದ್ದೇನೆ. ಆದರೆ, ಇಂಥ ಯಾವುದೇ ವ್ಯವಸ್ಥೆ ನನಗೆ ಕಾಣಲಿಲ್ಲ.

'ಆಫ್‌ಟೈಮ್, ಆ್ಯಂಟಿ ಸೋಷಿಯಲ್ ಮತ್ತು ಅನ್‌ವರ್ಡ್ ಎನ್ನುವ ಆ್ಯಪ್‌ಗಳನ್ನು ಮಕ್ಕಳ ಸ್ಕ್ರೀನ್ ಟೈಮ್ ಅನ್ನು ಕಡಿಮೆ ಮಾಡುವುದಕ್ಕೆ ಬಳಸಲಾಗುತ್ತದೆ. ಈ ಆ್ಯಪ್‌ಗಳಲ್ಲಿ ಸಮಯ ನಿಗದಿ ಮಾಡಬಹುದು. ಒಂದುವೇಳೆ ಒಂದು ತಾಸು ಎಂದು ಈ ಆ್ಯಪ್‌ಗಳಲ್ಲಿ ನಮೂದಿಸಿದರೆ, ಇದಕ್ಕೂ ಮೀರಿ ಮೊಬೈಲ್ ಬಳಸಿದರೆ, ಸ್ಕ್ರೀನ್ ಕಪ್ಪು, ಬಿಳಪು ಆಗುತ್ತದೆ. ಈ ಎಲ್ಲದರ ಕುರಿತು ಪೋಷಕರು ತಿಳಿದುಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಅಪಾಯ ತಪ್ಪಿದ್ದಲ್ಲ' ಎನ್ನುತ್ತಾರೆ ಅನಂತ.

'ಲೈಂಗಿಕ ಶಿಕ್ಷಣ ಅಗತ್ಯ'

ಮಕ್ಕಳಲ್ಲಿ ಲೈಂಗಿಕತೆಯ ಬಗ್ಗೆ ಆಸಕ್ತಿ ಮೂಡಲು ಮತ್ತು ಲೈಂಗಿಕ ವಿಚಾರಗಳಲ್ಲಿ ಇಷ್ಟೊಂದು ತೊಡಗಿಕೊಳ್ಳಲು ಲೈಂಗಿಕ ಶಿಕ್ಷಣ ಇಲ್ಲದಿರುವುದೇ ಮುಖ್ಯ ಕಾರಣ ಎಂದು ಕ್ರೈಸ್ಟ್ ವಿಶ್ವವಿದ್ಯಾಲಯದ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ಮಂಜುಳಾ ಎಂ.ವೈ ಅಭಿಪ್ರಾಯಪಡುತ್ತಾರೆ.



ಮಂಜುಳಾ ಎಂ.ವೈ

ಸಂಗಾತಿ ಬೇಕು ಅಥವಾ ನನ್ನ ಜೊತೆಗೆ ಯಾರಾದರು ಬೇಕು ಎಂದು ಮಕ್ಕಳಿಗೆ ಅನ್ನಿಸುವುದು ನೈಸರ್ಗಿಕವಾದುದ್ದು. ಇದು ತಪ್ಪಲ್ಲ. ಆದರೆ, ಇಂಥ ಆಲೋಚನೆ ಮತ್ತು ಭಾವನೆಗಳ ಮೇಲೆ ಯಾವ ರೀತಿ ಹಿಡಿತ ಸಾಧಿಸಬೇಕು ಎನ್ನುವುದನ್ನು ತಿಳಿಸಿ ಹೇಳಬೇಕು. ಇದನ್ನು ಲೈಂಗಿಕ ಶಿಕ್ಷಣ ಮಾಡುತ್ತದೆ. ಲೈಂಗಿಕ ಶಿಕ್ಷಣ ಎಂದರೆ ಲೈಂಗಿಕ ಕ್ರಿಯೆ ಬಗ್ಗೆ ಪಾಠ ಮಾಡುವುದಲ್ಲ. ಬದಲಿಗೆ ಲೈಂಗಿಕತೆಯ ಬಗ್ಗೆ ಅರಿವು ಮೂಡಿಸುವುದು ಎನ್ನುತ್ತಾರೆ ಅವರು.

ತಮಗೆ ಏನೋ ಒಂದು ಬೇಕು ಎಂದಾದರೆ, ಅದು ತಕ್ಷಣದಲ್ಲಿ ಆಗಬೇಕು ಮತ್ತು ಅದರಿಂದ ತೃಪ್ತಿ ಸಿಗಬೇಕು ಎನ್ನುವ ಸ್ವಭಾವ ಮಕ್ಕಳಲ್ಲಿ ಇರುತ್ತದೆ. ಉದಾಹರಣೆಗೆ, ಬೆತ್ತಲೆ ಚಿತ್ರಗಳನ್ನು ತೆಗೆದುಕೊಳ್ಳಬೇಕು ಎಂದು ಅನ್ನಿಸಿದರೆ, ಮುಂದಿನ ಪರಿಣಾಮದ ಬಗ್ಗೆ ಅರಿವೇ ಇಲ್ಲದೆ, ಮಕ್ಕಳು ತಕ್ಷಣವೇ ಚಿತ್ರ ತೆಗೆದುಕೊಳ್ಳಬಹುದು. ಆದ್ದರಿಂದ ತಮ್ಮಲ್ಲಿ ಮೂಡಿದ ಭಾವನೆಗಳನ್ನು ಹೇಗೆ ನಿಯಂತ್ರಿಸಿಕೊಳ್ಳಬೇಕು ಎಂದು ಅವರಿಗೆ ತಿಳಿಸಿ ಹೇಳಬೇಕು ಎನ್ನುತ್ತಾರೆ.

ಮಕ್ಕಳಲ್ಲಿ ಜಾಗೃತಿ ಮೂಡಿಸುವಲ್ಲಿ ಪೋಷಕರ ಪಾತ್ರ ಮಹತ್ವದ್ದು. ತಮ್ಮ ಬಳಿ ಏನನ್ನಾದರೂ ಹೇಳಿಕೊಳ್ಳಬಹುದು ಎಂದು ಮಕ್ಕಳಿಗೆ ಅನ್ನಿಸುವಂಥ ವಾತಾವರಣವನ್ನು ಪೋಷಕರು ಸೃಷ್ಟಿ ಮಾಡಬೇಕು. ಆಗ ಮಾತ್ರ ಈ ಎಲ್ಲಾ ಸಮಸ್ಯೆಗಳನ್ನು ನಿಯಂತ್ರಿಸಬಹುದಾಗಿದೆ. ಈ ಎಲ್ಲವನ್ನೂ ಮೀರಿ ಮಕ್ಕಳು ತಪ್ಪು ಮಾಡಿದಾಗ ಅವರನ್ನು ದೂಷಿಸದೆ, ಅವರಿಗೆ ನಿಧಾನವಾಗಿ ಬುದ್ಧಿವಾದ ಹೇಳಬೇಕು. ನಮ್ಮ ಕ್ರಿಯೆಗಳು ಹೇಗೆ ನಮ್ಮ ಭವಿಷ್ಯವನ್ನು ಹಾಳು ಮಾಡುತ್ತವೆ, ಅದರ ಪರಿಣಾಮ ಎಷ್ಟು ಅಸಹನೀಯವಾಗಿರುತ್ತದೆ ಎನ್ನುವುದನ್ನು ತಿಳಿಸಿ ಹೇಳಬೇಕು ಎಂದು ಪೋಷಕರಿಗೆ ಸಲಹೆ ನೀಡುತ್ತಾರೆ.



ಶಿವನಿಂದ ಪಾರ್ವತಿಯ ಪರೀಕ್ಷೆ

'ಮಾನ್ಯರೇ, ನನ್ನ ಸಖಿ ಹೇಳಿದ ನನ್ನ ವೃತ್ತಾಂತವೆಲ್ಲವೂ ನಿಜವಾದುದು. ಶಂಕರನನ್ನೇ ನಾನು ತ್ರಿಕರಣಪೂರ್ವಕವಾಗಿ ವರಿಸಿದ್ದೇನೆ. ಮಹಾಮಹಿಮ ಶಂಕರ ಎಲ್ಲರಿಗೂ ಸುಲಭವಾಗಿ ಸಿಗುವುದಿಲ್ಲ. ಅವನನ್ನು ನಾನು ಪಡೆಯುವುದು ಕಷ್ಟಸಾಧ್ಯ ಎಂಬುದನ್ನು ತಿಳಿದಿದ್ದೇನೆ. ಆದರೂ ನನ್ನ ಮನಸ್ಸಿನ ಬಲದ ಮೇಲೆ, ಶಂಕರ ನನಗೆ ಸಿಗುತ್ತಾನೆಂಬ ಅಚಲ ನಂಬಿಕೆ ಮೇಲೆ ತಪಸ್ಸನ್ನು ಮಾಡುತ್ತಿದ್ದೇನೆ' ಎಂದಳು, ಪಾರ್ವತಿ.

ಪಾರ್ವತಿ ಹೇಳಿದ ಮಾತನ್ನು ಕೇಳಿ ವೃದ್ಧವೇಷಧಾರಿ ರುದ್ರ, 'ನಿನ್ನ ಅಪೇಕ್ಷೆ ಏನು ಎಂಬುದನ್ನು ನಿನ್ನಿಂದಲೇ ತಿಳಿದುಕೊಳ್ಳಲು ಬಯಸಿದ್ದೆ. ಅದೀಗ ತಿಳಿದಂತಾಯಿತು. ಈಗ ನಾನು ಹೊರಡುತ್ತೇನೆ. ನಿನಗೆ ಇಷ್ಟ ಬಂದಂತೆ ಮಾಡು. ಈಗ ನಿನಗೇನೂ ಹೇಳಿದರೂ ಅರ್ಥವಾಗುವುದಿಲ್ಲ. ನಿನಗೆ ಕೆಡುಕಾಗುವುದನ್ನು ಹೇಳಿದರೆ ನೀನು ನಂಬುವುದಿಲ್ಲ. ಸತ್ಯ ಮರೆಮಾಚಿ, ಸುಳ್ಳು ಹೇಳಿದರೆ ನೀನು ನಂಬಬಹುದು. ಅಂಥ ಸುಳ್ಳು ನಮ್ಮಿಬ್ಬರ ಸ್ನೇಹಕ್ಕೆ ಪರಮಘಾತುಕವಾದುದು. ಆದುದರಿಂದ ನಿನ್ನಿಷ್ಟ ಬಂದಂತೆ ಮಾಡು' ಎಂದು ನಿಷ್ಠೂರವಾಗಿ ಹೇಳಿ ಹೊರಡಲು ಉದ್ಯುಕ್ತನಾದ.


ಅಷ್ಟರಲ್ಲಿ ಪಾರ್ವತಿ ಅವನಿಗೆ ಅಡ್ಡ ನಿಂತು ನಮಸ್ಕರಿಸಿ ಹೇಳಿದಳು, 'ಹಿರಿಯರೇ, ಈಗಲೇ ಹೊರಡಬೇಕೇ? ಯಾವುದೋ ಸತ್ಯ ನನ್ನಿಂದ ಮರೆಮಾಚಿ ಹೋಗುತ್ತಿರುವಂತಿದೆ. ಸತ್ಯವೇನೆಂದು ನನಗೆ ತಿಳಿಸಿ ಹೋಗಿ' ಎಂದು ಒತ್ತಾಯಿಸಿದಳು. ಆಗ ರುದ್ರ, 'ದೇವಿ, ನನ್ನ ಮಾತನ್ನು ಆದರದಿಂದ ಕೇಳಲು ನನ್ನನ್ನು ತಡೆದು ನಿಲ್ಲಿಸುವ ಉದ್ದೇಶ ನಿನಗಿದ್ದರೆ, ನಿಜಾಂಶವೆಲ್ಲವನ್ನೂ ಹೇಳುತ್ತೇನೆ. ಇಲ್ಲದಿದ್ದರೆ ನಾನು ಹೊರಡುತ್ತೇನೆ, ನನ್ನ ತಡೆಯಬೇಡ' ಎಂದ.

'ನಿಮ್ಮ ಮಾತು ಅದೆಷ್ಟೇ ಕಠೋರವಾಗಿದ್ದರು ನಾನು ಕೇಳುತ್ತೇನೆ. ಅದನ್ನು ನಂಬಬೇಕೇ ಬೇಡವೇ ಎಂಬುದನ್ನು ಯುಕ್ತಾ-ಯುಕ್ತವಾಗಿ ಯೋಚಿಸಿದ ನಂತರ ತೀರ್ಮಾನಿಸುತ್ತೇನೆ. ದಯವಿಟ್ಟು ಹೇಳಿ' ಎಂದಳು ಪಾರ್ವತಿ.

ಶಿವನ ವೃತ್ತಾಂತವನ್ನು ವೃದ್ಧವೇಷಧಾರಿ ರುದ್ರ ಹೇಳತೊಡಗಿದ: 'ಬಾಲೆ, ಎಲ್ಲ ವರ್ಣದವರಿಗೂ ಗುರುವಾದ ನಾನು ನಿಜವಾದುದನ್ನೇ ಹೇಳುತ್ತೇನೆ. ಸಾವಧಾನದಿಂದ ಕೇಳು. ಆ ಮಹಾದೇವನನ್ನು ನಾನು ಚೆನ್ನಾಗಿ ಬಲ್ಲೆ. ಆತ ಮುದಿ ಎತ್ತನ್ನು ಏರಿ ಸಂಚರಿಸುವ ಅಲೆಮಾರಿ. ಸದಾ ಮೈತುಂಬ ಬೂದಿ ಬಳಿದುಕೊಂಡು, ಕೆದರಿದ ಜಟೆಯನ್ನು ಬಿಟ್ಟುಕೊಂಡಿರುತ್ತಾನೆ. ಬಟ್ಟೆ ಇಲ್ಲದೆ ಅರೆಬೆತ್ತಲೆಯಾಗಿ ಹುಲಿಯ ಚರ್ಮವನ್ನುಟ್ಟು, ಆನೆಯ ಚರ್ಮವನ್ನು ಹೊದೆದುಕೊಂಡಿರುತ್ತಾನೆ. ಅವನು ಅಶುದ್ಧವಾದ ನರಶಿರಸ್ಸನ್ನು ಹೊಂದಿದ್ದಾನೆ. ಮೈತುಂಬಾ ಹಾವುಗಳನ್ನು ಸುತ್ತಿಕೊಳ್ಳುತ್ತಾನೆ. ಅವನ ಕತ್ತಿನಲ್ಲಿ ವಿಷ ಹತ್ತಿಕೊಂಡಿದೆ. ಎಲ್ಲರಂತೆ ಅವನಿಗೆ ಎರಡು ಕಣ್ಣುಗಳಿಲ್ಲದೆ, ವಿಕಾರವಾದ ಮೂರು ಕಣ್ಣುಗಳಿವೆ. ಜೊತೆಗೆ ಹತ್ತು ಕೈಗಳಿವೆ. ಅದರಿಂದ ಅವನು ಭಯಂಕರವಾಗಿ ಕಾಣುತ್ತಾನೆ.

ಅವನು ಎಲ್ಲಿ ಹುಟ್ಟಿದನೋ ಯಾರಿಗೂ ತಿಳಿಯದು. ಸಂಸಾರಸುಖ ಎಂಬುದು ಅವನ ಪಾಲಿಗೆ ಇಲ್ಲವೇ ಇಲ್ಲ. ಹಗಲು-ರಾತ್ರಿ ಎನ್ನದೆ, ದಿಗಂಬರನಾಗಿ ತಿರುಗಾಡುತ್ತಿರುತ್ತಾನೆ. ಸದಾ ಅವನ ಹಿಂದೆ ಮುಂದೆ ಭೂತಪ್ರೇತಗಳು ಓಡಾಡಿಕೊಂಡಿರುತ್ತವೆ. ಇಂಥ ಅವಲಕ್ಷಣದವನನ್ನು ಯಾವ ಕಾರಣದಿಂದ ನೀನು ಪತಿಯಾಗಬೇಕೆಂದು ಇಚ್ಛಿಸುವೆ? ನಾನು ಶಿವನ ಭಯಂಕರವಾದ ವರ್ತಮಾನವನ್ನು ಕೇಳಿದ್ದೇನೆ. ನಿನಗೂ ಕೇಳಬೇಕೆಂಬ ಆಸೆ ಇದ್ದರೆ ಹೇಳುತ್ತೇನೆ ಕೇಳು.'

ಗುಂಡಣ್ಣ



ಬೆರಗಿನ ಬೆಳಕು ಗುರುರಾಜ ಕರಜಗಿ

ಯಾವುದೂ ಅತಿಯಾಗದಿರಲಿ

ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ |
ಹಿತವಿರಲಿ ವಚನದಲಿ, ಋತವ ಬಿಡದಿರಲಿ ||
ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ |
ಅತಿಬೇಡವೆಲ್ಲಿಯುಂ- ಮಂಕುತಿಮ್ಮ || 724 ||

ಪದ-ಅರ್ಥ: ಸ್ಮಿತವಿರಲಿ = ಸ್ಮಿತ(ನಗು) + ಇರಲಿ, ವದನ = ಮುಖ, ಋತ = ಸತ್ಯ, ಧರ್ಮ, ಮನಸಿನು-ದ್ವೇಗದಲಿ = ಮನಸಿನ = ಉದ್ವೇಗದಲಿ, ಅತಿಬೇಡ-ವೆಂಲ್ಲಿಯುಂ = ಅತಿ + ಬೇಡ + ಎಲ್ಲಿಯುಂ

ವಾಚ್ಯಾರ್ಥ: ಮುಖದಲ್ಲಿ ನಗುವಿರಲಿ ಆದರೆ ಅಟ್ಟಹಾಸವಾಗದಿರಲಿ. ಮಾತಿನಲ್ಲಿ ಹಿತವಿರಲಿ. ಅದು ಸತ್ಯವನ್ನು, ಧರ್ಮವನ್ನು ಬಿಡದಿರಲಿ. ಮನಸ್ಸಿನ ಉದ್ವೇಗದಲ್ಲಿ, ಭೋಗದಲ್ಲಿ ಮಿತಿ ಇರಲಿ. ಎಲ್ಲಿಯೂ ಅತಿಯಾಗದಿರಲಿ.

ವಿವರಣೆ: ಈ ಚೌಪದಿಯ ನಾಲ್ಕು ಸಾಲುಗಳನ್ನು ಓದಿದಾಗ ನನ್ನ ಮನಸ್ಸಿನ ಮುಂದೆ ನಿಂತ ಚಿತ್ರ ಡಾ. ಕಲಾಂ ರವರದು. ಅವರನ್ನು ನಾನು ಹತ್ತಿರದಿಂದ ಕಂಡವನು. ಈ ಕಗ್ಗದ ಎಲ್ಲ ಗುಣಗಳನ್ನು ಅವರಲ್ಲಿ ಕಂಡಿದ್ದೆ. ಅವರು ಯಾವಾಗಲೂ ಹಸನ್ಮುಖಿ. ಯಾರಾದರೂ ಎದುರಿಗೆ ಬಂದರೆ ಅವರಿಗಿಂತ ಮುಂದಾಗಿ ಇವರೇ "ನಮಸ್ಕಾರ, ಚೆನ್ನಾಗಿದ್ದೀರಾ?" ಎಂದು ಕೇಳುವವರು. ಅವರು ಯಾರ ಬಗ್ಗೆಯೂ ಕೆಟ್ಟ ಮಾತನಾಡಿದ್ದನ್ನಾಗಲೀ, ಮತ್ತೊಬ್ಬರನ್ನು ಹೀಯಾಳಿಸಿ ನಕ್ಕಿದ್ದಾಗಲಿ ಕಾಣಲಿಲ್ಲ. ಅವರದು ಯಾವಾಗಲೂ ಮೆಚ್ಚಿಗೆಯ ಮಾತೇ. ಏನಾದರು ಇಷ್ಟವಾಗದೆ ಹೋದರೆ, ಟೀಕೆ ಮಾಡದೆ ಸುಮ್ಮನಿದ್ದುಬಿಡುವರು. ಮಾತು ಎಂದೂ ತೂಕ ತಪ್ಪಿದ್ದಾಗಲೀ, ಅಸತ್ಯದ್ದಾಗಲಿ ಬರಲಿಲ್ಲ. ಡಾ. ಕಲಾಂರವರು ಅತಿಯಾದ ಉದ್ವೇಗವನ್ನು ಪ್ರಕಟಿಸಿದ್ದೇ ಇಲ್ಲ ಎನ್ನಿಸುತ್ತದೆ. ನಾನು ಅವರನ್ನು ರಾಷ್ಟ್ರಪತಿಯಾಗುವುದಕ್ಕಿಂತ ಮೊದಲು ಮತ್ತು ಆಮೇಲೆ ನೋಡಿದವನು. ರಾಷ್ಟ್ರಪತಿಯ ಹುದ್ದೆ ಅವರಲ್ಲಿ ಯಾವ ವ್ಯತ್ಯಾಸವನ್ನು ತಂದಿರಲಿಲ್ಲ. ಅದೇ ಮಗುತನ ಕಡೆಯವರೆಗೂ ಉಳಿದಿತ್ತು. ಬಹುಶ: ಎಷ್ಟೋ ಬಾರಿ ಅವರಿಗೆ, "ಸರ್, ನೀವು ಈಗ ರಾಷ್ಟ್ರಪತಿ" ಎಂದು ನೆನಪು ಮಾಡಿ ಕೊಡಬೇಕಿತ್ತು. ಭಾರತ ರತ್ನದ ಕಿರೀಟವೂ ಅವರ ತಲೆಯ ಮೇಲೆ ತುಂಬ ಹಗುರವಾಗಿ ಕುಳಿತಿತ್ತು. ಒಂದು ಬಾರಿ ಚಂಡೀಗಡದಲ್ಲಿ ರಾತ್ರಿ ಎಂಟು ಗಂಟೆಗೆ ವಿಮಾನ ನಿಲ್ದಾಣಕ್ಕೆ ಹೊರಟಿದ್ದಾರೆ. ರಾಷ್ಟ್ರಪತಿಗಳು ಹೋಗುತ್ತಾರೆಂದರೆ ರಸ್ತೆಗಳನ್ನು ಖಾಲಿ ಮಾಡಿದ್ದರು. ಅವರದು ಮಧ್ಯದ ಕಾರು. ಹಿಂದೆ, ಮುಂದೆ ಹತ್ತಾರು ಕಾರುಗಳು, ಪೊಲೀಸ್ ವಾಹನಗಳು. ಆಗ ಎಕಾಏಕಿ ವಾಹನಗಳು ನಿಂತುಬಿಟ್ಟವು. ಏನೋ ಅಪಾಯವೆಂದು ಬೆಂಗಾವಲಿನ ಸಂರಕ್ಷಕರು ಹಾರಿ ರಾಷ್ಟ್ರಪತಿಯ ಕಾರನ್ನು ಸುತ್ತುವರೆದರು. ಡಾ. ಕಲಾಂ ನಿಧಾನಕ್ಕೆ ಕಾರಿನಿಂದಿಳಿದು ರಸ್ತೆಯ ಬದಿಗೆ ನಡೆದರು. ಅಲ್ಲೊಬ್ಬ ಪುಟ್ಟ ಹುಡುಗಿ ಕೈಯಲ್ಲಿ ಮಾಲೆ ಹಿಡಿದು ನಿಂತಿದ್ದಾಳೆ! ಕಲಾಂ ಹೋಗಿ ಹಾರ ಹಾಕಿಸಿಕೊಂಡು, ತಮ್ಮ ಜೇಬಿನಲ್ಲಿದ್ದ ಪೆನ್ನನ್ನು ಆಕೆಗೆ ಕೊಟ್ಟು ಕೆನ್ನೆ ತಟ್ಟಿ ನಗುತ್ತ ಮರಳಿ ಬಂದರು. ರಾಷ್ಟ್ರಪತಿಯ ಹುದ್ದೆಯ ತುತ್ತತುದಿಯಲ್ಲಿದ್ದ ವ್ಯಕ್ತಿಗೆ, ಆ ರಾತ್ರಿ, ರಸ್ತೆಯ ಪಕ್ಕ ನಿಂತಿದ್ದ ಪುಟ್ಟ ಹುಡುಗಿಯ ಪ್ರೀತಿ ಸೆಳೆದಿತ್ತು. ಅವರದು ಒಂದು ರೀತಿಯಲ್ಲಿ ಸನ್ಯಾಸಿ ಜೀವನ. ತಮ್ಮ ಅಧಿಕಾರಾವಧಿ ಮುಗಿದ ನಂತರ ಅತ್ಯಂತ ಕಡಿಮೆ ಸಾಮಾನುಗಳೊಂದಿಗೆ ಹೊರಬಂದ ಅಪರೂಪದ ವ್ಯಕ್ತಿ ಅವರು. ಅವರ-ದ್ದಾದದ್ದು ಕೆಲವು ಪುಸ್ತಕಗಳು ಮತ್ತು ಒಂದೆರಡು ಬಟ್ಟೆಗಳು. ಭೋಗದಲ್ಲಿ ಅತಿಯಾದ ಮಿತಿ ಅವರದು. ಈ ಕಗ್ಗ ಹೇಳುವುದು ಇವೇ ಗುಣಗಳನ್ನು. "ಅತಿಸರ್ವತ್ರ ವರ್ಜಯೇತ್" ಎನ್ನುವುದು ಪೂರ್ವಿಕರ ಮಾತು. ಯಾವುದೂ ಅತಿಯಾಗದಿರಲಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಸೆಪ್ಟೆಂಬರ್ 28, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಅಶ್ವಯುಜ ಶುಕ್ಲ ತೃತೀಯ ಗಂ. 25-28 ನಕ್ಷತ್ರ: ಚಿತ್ತಾ ಗಂ. 06-14 ಯೋಗ: ವೈಧೃತಿ ಗಂ. 27-06, ಕರಣ: ತೈತಿಲ ಗಂ. 14-01, ಕನ್ಯಾ ಮಾಸದ 11 ನೇ ದಿನ. ರಾಹುಕಾಲ : ಮಧ್ಯಾಹ್ನ 12:00–01:30 ಸೂರ್ಯೋದಯ : 06-23 ಸೂರ್ಯಾಸ್ತ : 06-19, ಮುಸ್ಲಿಂ ದಿನಾಂಕ : 01 ರಬೀಉಲ್ಲಾವಲ್

ಅದೃಷ್ಟ ಸಂಖ್ಯೆ : 4, 5

ಮೇಷ: ನಿಮ್ಮ ಸಾಮರ್ಥ್ಯ ಮತ್ತು ಸೃಜನಶೀಲತೆಯನ್ನು ಪ್ರದರ್ಶಿಸಲು ಬೇಕಾದಷ್ಟು ಅವಕಾಶಗಳು ಒದಗಿ ಬರುವವು. ಉತ್ಸಾಹವನ್ನು ಹೆಚ್ಚಿಸಿಕೊಳ್ಳುವ ಸಮಯವಾಗಿದೆ. ಶತ್ರುಗಳ ಬಲೆಗೆ ಬೀಳದಂತೆ ಈ ದಿನ ಎಚ್ಚರವಹಿಸಬೇಕು.

ವೃಷಭ: ನೀವು ಅಪೇಕ್ಷಿಸಿದ ಪ್ರಗತಿಯನ್ನು ಅನಾಯಾಸವಾಗಿ ಸಂಪಾದಿಸುವಿರಿ. ಕೆಲಸ ಬದಲಿಸುವ ಯೋಚನೆಯನ್ನು ಮಾಡುವವರಿಗೆ ಇಂದು ಸಕಾಲ. ಇತರರಿಗಿಂತ ಭಿನ್ನವಾದ ಹಾಗೂ ಧನಾತ್ಮಕನಿರ್ಧಾರ ತೆಗೆದುಕೊಳ್ಳುವಿರಿ.

ಮಿಥುನ: ಷೇರು ವ್ಯವಹಾರದಲ್ಲಿ ಮತ್ತು ಎಲೆಕ್ಟ್ರಾನಿಕ್ ವ್ಯವಹಾರದಲ್ಲಿ ಲಾಭ ಪಡೆಯುವಿರಿ, ಆದರೆ ಹಣ ಕೈಯಲ್ಲಿ ಉಳಿಯುವುದು ಕಷ್ಟಕರ ವಿಷಯ. ಕಾರ್ಯಕ್ಷೇತ್ರದಲ್ಲಿ ಹೊಸ ವಿಚಾರಗಳ ಅನ್ವೇಷಣೆ ಉತ್ತಮ ಫಲ ನೀಡಲಿವೆ.

ಕರ್ಕಾಟಕ: ನಿಮ್ಮದೇ ಜನರನ್ನು ನೀವು ನಿಯಂತ್ರಿಸುವ ಕೆಲಸದಲ್ಲಿ ಚಾಣಾಕ್ಷತನ ತೋರಿಸುವುದು ಅನಿವಾರ್ಯವಾಗುತ್ತದೆ. ಈ ದಿನದ ವ್ಯಾಪಾರ ವ್ಯವಹಾರದಲ್ಲಿ ಚೆಕ್ ಸಂಬಂಧಿತ ವ್ಯವಹಾರದಲ್ಲಿ ತುಸು ಎಚ್ಚರ ಇರಬೇಕಾಗುವುದು.

ಸಿಂಹ: ಉನ್ನತ ಶಿಕ್ಷಣ ಪಡೆಯುವ ನಿಮ್ಮ ಗುರಿಗೆ ಇನ್ನೂ ಹೆಚ್ಚಿನ ಪರಿಶ್ರಮ ಅಗತ್ಯವಾಗುವುದು. ದುರ್ಗಾಪರಮೇಶ್ವರಿಯ ಆರಾಧನೆಯಿಂದ ಕೆಟ್ಟ ಕನಸಿನ ಭಯದಿಂದ ಹೊರಬರಬಹುದು. ಹೆದರುವ ಅವಶ್ಯಕತೆ ಇಲ್ಲ.

ಕನ್ಯಾ: ಒಂದು ವಿಚಾರದ ಬಗ್ಗೆ ಸಲಹೆ ಸ್ವೀಕರಿಸುವ ವಿಚಾರವಾಗಿ ಕೇಳಿದಾಗ ಹತ್ತಾರು ಸಲಹೆ ಬಂದು ಗೊಂದಲಮಯವಾಗುತ್ತದೆ. ಆದ್ದರಿಂದ ನಿಮ್ಮ ಸ್ವ ಇಚ್ಛೆಯೇ ಅಂತಿಮವಾಗಿರಲಿ. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ತುಲಾ: ಯಾರನ್ನು ನಿರ್ಲಕ್ಷ್ಯ ಮಾಡುತ್ತಿರುವಿರೋ ಅವರಿಂದಲೇ ಕೆಲಸ ಆಗುವ ಸಾಧ್ಯತೆಗಳಿವೆ. ನೂತನ ವಾಹನ ಖರೀದಿಯ ಯೋಜನೆಗೆ ತಂದೆಯಿಂದ ಒಪ್ಪಿಗೆ ಮತ್ತು ಸಹಾಯ ಸಿಗಲಿದೆ. ಉದ್ಯೋಗ ಲಾಭ ತೋರಿ ಬರಲಿದೆ.

ವೃಶ್ಚಿಕ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧ ಮುಂದುವರಿಯಲಿದೆ. ಹಣಕ್ಕಿಂತ ಸ್ನೇಹ ಸಂಬಂಧಗಳು ಮುಖ್ಯವೆಂದು ಅರಿವಾಗಲಿದೆ. ಗರ್ವ ತೋರಿಸುವ ಜನರನ್ನು ದೂರವಿಡಿ.

ಧನು: ವಿದ್ಯಾಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಲಭಿಸಲಿದೆ. ಅಪರೂಪದ ಸಮಾರಂಭಕ್ಕೆ ಆಹ್ವಾನ ಬರುವುದು. ಹಾಲು ಮಾರಾಟಗಾರರಿಗೆ ಲಾಭ ಬರುವುದು. ಕೆಲಸದ ಬಾಕಿ ಹಣವು ಇಂದು ಸಂದಾಯವಾಗುವುದು.

ಮಕರ: ಎಲ್ಲರನ್ನೂ ಪ್ರೀತಿಯಿಂದ ಗೆಲ್ಲಬೇಕೆಂಬ ಮಾತಿನ ಮಹತ್ವ ನಿಮಗೆ ಅನುಭವದಿಂದಾಗಿ ತಿಳಿದುಬರಲಿದೆ. ಮನೆಯ ರಿಪೇರಿ ಕೆಲಸಗಳು ಅನಿವಾ-ರ್ಯವಾಗುವುದು ಮತ್ತು ಅಧಿಕ ಹಣ ವ್ಯಯವಾಗುತ್ತದೆ

ಕುಂಭ: ಕಾರ್ಯ ಕ್ಷೇತ್ರದಲ್ಲಿ ಸಕ್ರಿಯರಾಗಿ ಮತ್ತು ಧೈರ್ಯದಿಂದ ಮುನ್ನುಗ್ಗಿ. ಕಷ್ಟಪಟ್ಟು ದುಡಿಯುವುದರಿಂದ ಹಣ ಕೈಯಲ್ಲಿ ನಿಲ್ಲುವುದು. ಅದರಿಂದಾಗಿ ಹಣಕಾಸಿನ ವಿಚಾರದಲ್ಲಿ ನೀವು ಇನ್ನೊಂದು ಮೆಟ್ಟಿಲು ಹತ್ತುವಂತೆ ಆಗಲಿದೆ.

ಮೀನ: ಕೈಗಾರಿಕೋದ್ಯಮಿಗಳಿಗೆ ವೃತ್ತಿಯಲ್ಲಿ ನಾಯಕತ್ವ ಹೊಂದುವ ಅವಕಾಶ. ವಿವಾಹ ವಿಷಯಗಳು ನಿಶ್ಚಿತಗೊಂಡಿದ್ದರೂ ದೃಢಪಡಿಸಿಕೊಳ್ಳುವು-ದು ಉತ್ತಮ. ಹಿಂದೆ ತೆಗೆದುಕೊಂಡ ನಿಲುವು ಬದಲಾಯಿಸಬೇಡಿ.

ಪದಬಂಧ 5093


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರತಿಪಾದನೆ ಮಾಡಿಯೇ ನೆಲೆಗೊಳಿಸುವುದು! (5)
3.ಆ ಸಾರಿ ನೀಡಿದ ಆಶ್ರಯ! (3)
5.ಶಿರೋನಾಮೆಯನ್ನು ಹೀಗೆನ್ನಿ (5)
7.ಜನರು ಒಪ್ಪಿಸಿದ ಕಾಣಿಕೆ (3)
9.ವಠಾರದವರು ಹಿಡಿದಿರುವ ಕೊಡಲಿ! (3)
11.ವಿಷ್ಣುವಿನ ದಶಾವತರದಲ್ಲಿ ಐದನೆಯದು (3)
13.ಲೋಹದ ಹಕ್ಕಿಯಲ್ಲಿನ ಪಯಣ (5)
15.ಕನ್ನಡಿಗ ನೀಡಿದ ಡೊನೇಷನ್! (3)
16.ನೀರಿನಿಂದಾದ ಅನಿಲ (5)

ಮೇಲಿಂದ ಕೆಳಕ್ಕೆ

1.ಕೊನೆಗೆ ಜನವಿದ್ದಾಗಲೇ ಇದು ಉಪಯೋಗ! (4)
2.ಪರ್ವ ಕಾಲದಲ್ಲಿ ಏರಿದ ಬೆಟ್ಟ (3)
4.ಹತ್ತಿರಕ್ಕೊಂದು ಪರ್ಯಾಯ ಪದ (3)
6.ಬರದಲ್ಲಿ ಅಸಂಸ್ಕೃತ ಕಾಣುತ್ತಿರುವನಲ್ಲಾ! (3)
8.ಕುಸ್ತಿ ಮಾಡುವ ಕಸುಬಿನವನು (2)
9.ಒಳ್ಳೆಯ ಕುಲದಲ್ಲಿ ಹುಟ್ಟಿದವ (3)
10.ಹೊಗೆ ಇಲ್ಲಿ ಆವರಿಸಿದೆ (2)
12.ಅತ್ಯಂತ ರುಚಿಕಟ್ಟಾದ ಅಡುಗೆ (4)
13.ಮರವೆ ಹೀಗೆ ಬಂದಿದೆಯಲ್ಲಾ? (3)
14.ಕುಲದವರಿಗೆಲ್ಲಾ ಕಾಣಿಸಿರುವ ಮುಂಗುಸಿ! (3)



5092ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂಧಕಾರ 3.ನವರಾತ್ರಿ 5.ವಾರಸು 6.ಅಪಕಾರ 8.ಮರೀಚಿಕೆ 10.ಪರಧನ 12.ಸವಕಲು 13.ವಜೀರ 16.ಪದ್ಮರಾಗ 17.ತಿದ್ದುಪಡಿ

ಮೇಲಿಂದ ಕೆಳಕ್ಕೆ:
1.ಅಂಬು 2.ರವಿವಾರ 3.ನವಸುಮ 4.ತ್ರಿಪು 7.ಪದರ 9.ಚಿಲಕ 11.ನವರಂಗ 12.ಸರಸ್ವತಿ 14.ಕೂಪ 15.ನಾಡಿ

ಸುಡೊಕು 5479

	5		7		2		8	
						3		4
	7	8	3		9		1	
1							2	3
	2							
8		7			1		5	9
2		3	9		6	5		8
	4	6		8			9	7
	8		5		4		3	2


5478 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಷೇರುಪೇಟೆ ವಹಿವಾಟು 37



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,807
ಇಂದಿನ ಅಂತ್ಯ	17,153
▼	69
ದಿನದ ಕನಿಷ್ಠ	17,076

ವಿನಿಮಯ ದರ

$ ಡಾಲರ್	81.53
£ ಪೌಂಡ್	88.02
€ ಯುರೊ	78.37
¥ ಯೆನ್ (100ಕ್ಕೆ)	56.38

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹432

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1150 (1140)
ಸೂರ್ಯಕಾಂತಿ (ರಿಫೈನ್ಡ್)	₹1300 (1310)
ಪಾಮೋಲಿನ್	₹880 (872)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹600-1000
ಸಣ್ಣ	₹200-600

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹131.50

ಅದಾನಿ ಸಮೂಹದಿಂದ ₹ 8.14 ಲಕ್ಷ ಕೋಟಿ ಹೂಡಿಕೆ


ಗೌತಮ್ ಅದಾನಿ

ನವದೆಹಲಿ (ಪಿಟಿಐ): ಗೌತಮ್ ಅದಾನಿ ಮಾಲೀಕತ್ವದ ಅದಾನಿ ಸಮೂಹವು ಒಂದು ದಶಕದ ಅವಧಿಯಲ್ಲಿ ಒಟ್ಟು 100 ಬಿಲಿಯನ್ ಡಾಲರ್ (ಅಂದಾಜು ₹ 8.14 ಲಕ್ಷ ಕೋಟಿ) ಹೂಡಿಕೆ ಮಾಡಲಿದೆ. ಇದರಲ್ಲಿ ಹೆಚ್ಚಿನ ಪಾಲು ನವ ಇಂಧನಗಳಲ್ಲಿ, ದತ್ತಾಂಶ ಕೇಂದ್ರಗಳಲ್ಲಿ ಹೂಡಿಕೆ ಆಗಲಿದೆ.

ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರು ಮಂಗಳವಾರ ಈ ವಿಷಯ ತಿಳಿಸಿದ್ದಾರೆ. ಈ ಹೂಡಿಕೆ ಮೊತ್ತದಲ್ಲಿ ಇಂಧನ ವಲಯದಲ್ಲಿ ಶೇಕಡ 70ರಷ್ಟು ಪಾಲನ್ನು ತೊಡಗಿಸಲಾಗುತ್ತದೆ ಎಂದು ಅವರು ಸಿಂಗಪುರದಲ್ಲಿ ನಡೆದ ಫೋರ್ಬ್ಸ್ ಜಾಗತಿಕ ಸಿಇಒ ಸಮಾವೇಶದಲ್ಲಿ ಹೇಳಿದ್ದಾರೆ.

ಅದಾನಿ ಸಮೂಹವು ತನ್ನ ಇಂಧನ ಉತ್ಪಾದನಾ ವಿಭಾಗದಲ್ಲಿ 45 ಗಿಗಾವಾಟ್ ಸಾಮರ್ಥ್ಯದ ಹೈಬ್ರಿಡ್, ನವೀಕರಿಸಬಹುದಾದ ವಿದ್ಯುತ್ ತಯಾರಿಕಾ ಘಟಕವನ್ನು ಆರಂಭಿಸಲಿದೆ. ಸೌರ ಫಲಕ, ಪವನ ವಿದ್ಯುತ್ ಟರ್ಬೈನ್ ಮತ್ತು ಹೈಡ್ರೊಜನ್ ಎಲೆಕ್ಟ್ರೊಲೈಸರ್ ತಯಾರಿಕೆಗೆ ಮೂರು ಗಿಗಾ ಫ್ಯಾಕ್ಟರಿಗಳನ್ನು ನಿರ್ಮಿಸಲಿದೆ.

ಅದಾನಿ ಸಮೂಹವು ಭಾರತದಲ್ಲಿ ವಿಮಾನ ನಿಲ್ದಾಣ ಹಾಗೂ ಬಂದರು ನಿರ್ವಹಣೆ ಮಾಡುವ ಅತಿದೊಡ್ಡ ಕಂಪನಿಯನ್ನು ಹೊಂದಿದೆ. ಅಲ್ಲದೆ, ದೇಶದಲ್ಲಿ ಅತಿಹೆಚ್ಚಿನ ಬಂಡವಾಳ ಮೌಲ್ಯದ ಎಫ್‌ಎಂಸಿಜಿ ಕಂಪನಿ ಕೂಡ ಅದಾನಿ ಸಮೂಹಕ್ಕೆ ಸೇರಿದೆ.

'ಚೀನಾ ಏಕಾಂಗಿ': ರಾಷ್ಟ್ರೀಯವಾದ ಹೆಚ್ಚುತ್ತಿರುವುದು, ಪೂರೈಕೆ ವ್ಯವಸ್ಥೆಯಲ್ಲಿ ಬದಲಾವಣೆ ಆಗಿರುವುದು ಮತ್ತು ತಂತ್ರಜ್ಞಾನದ ಮೇಲೆ ನಿರ್ಬಂಧಗಳನ್ನು ಹೇರಿರುವ ಕಾರಣದಿಂದಾಗಿ ಚೀನಾದ ಅರ್ಥ ವ್ಯವಸ್ಥೆಗೆ ಸಮಸ್ಯೆ ಎದುರಾಗಿದೆ, ಚೀನಾ ಇನ್ನಷ್ಟು ಏಕಾಂಗಿ ಆಗಲಿದೆ ಎಂದು ಅದಾನಿ ಭವಿಷ್ಯ ನುಡಿದಿದ್ದಾರೆ.

ಚೀನಾ ಆರಂಭಿಸಿರುವ ಬೆಲ್ಟ್ ಆ್ಯಂಡ್ ರೋಡ್ ಯೋಜನೆಗೆ ಹಲವು ದೇಶಗಳಿಂದ ಪ್ರತಿರೋಧ ವ್ಯಕ್ತವಾಗಿದೆ ಎಂದು ಅದು ಹೇಳಿದ್ದಾರೆ.

ಎಪ್ಸಿಲಾನ್‌ನಿಂದ ₹ 550 ಕೋಟಿ ಹೂಡಿಕೆ



ಬೆಂಗಳೂರು: ಕಾರ್ಬನ್ ಬ್ಲಾಕ್ ಉತ್ಪಾದಕ ಕಂಪನಿ 'ಎಪ್ಸಿಲಾನ್ ಕಾರ್ಬನ್' ವಿಜಯನಗರ ಜಿಲ್ಲೆಯಲ್ಲಿರುವ ತನ್ನ ಉತ್ಪಾದನಾ ಘಟಕದ ಸಾಮರ್ಥ್ಯವನ್ನು ಹೆಚ್ಚಿಸಲು ₹ 550 ಕೋಟಿ ಹೂಡಿಕೆ ಮಾಡಲಿದೆ.

ವಿಜಯನಗರದಲ್ಲಿರುವ ಉತ್ಪಾದನಾ ಘಟಕದ ಸಾಮರ್ಥ್ಯಕ್ಕೆ ಹೆಚ್ಚುವರಿಯಾಗಿ 1 ಲಕ್ಷ ಟನ್ ಸೇರ್ಪಡೆ ಮಾಡಲು ಕಂಪನಿ ಮುಂದಾಗಿದೆ. ಇದ ರಿಂದಾಗಿ ಕಂಪನಿಯ ಕಾರ್ಬನ್ ಬ್ಲಾಕ್ ಉತ್ಪಾದನಾ ಸಾಮರ್ಥ್ಯವು 2.15 ಲಕ್ಷ ಟನ್‌ಗೆ ಏರಿಕೆ ಆಗಲಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

'2023–23ನೇ ಹಣಕಾಸು ವರ್ಷ ಕೊನೆಗೊಳ್ಳುವ ಮೊದಲು ಘಟಕದ ಸಾಮರ್ಥ್ಯ ವಿಸ್ತರಣೆ ಆಗಲಿದೆ' ಎಂದು ಎಪ್ಸಿಲಾನ್ ಕಾರ್ಬನ್‌ನ ವ್ಯವಸ್ಥಾಪಕ ನಿರ್ದೇಶಕ ವಿಕ್ರಮ್ ಹಂಡಾ ಹೇಳಿದ್ದಾರೆ.



ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ಜಗತ್ತಿನ ಆರನೆಯ ಅತಿದೊಡ್ಡ ಚಿನ್ನಾಭರಣ ಸಮೂಹ ಎಂಬ ಹೆಗ್ಗಳಿಕೆಗೆ ಪಾತ್ರವಾದ ಕಾರಣಕ್ಕೆ, ಅಖಿಲ ಭಾರತ ಮುತ್ತು ಮತ್ತು ಚಿನ್ನಾಭರಣ ಮಂಡಳಿಯು (ಜಿಜೆಸಿ), ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಅವರನ್ನು ಮುಂಬೈನಲ್ಲಿ ಈಚೆಗೆ ಸನ್ಮಾನಿಸಿತು. ಸಮೂಹದ ಅಧಿಕಾರಿಗಳಾದ ಒ. ಅಶರ್, ಎ.ಕೆ. ನಿಷಾದ್, ಜಿಜೆಸಿ ಅಧ್ಯಕ್ಷ ಆಶಿಷ್ ಪೆಠೆ ಮತ್ತಿತರರು ಚಿತ್ರದಲ್ಲಿದ್ದಾರೆ.

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಕೊಬ್ಬರಿ ಧಾರಣೆ

ಅರಸೀಕೆರೆ	₹13000-13820
ಪುತ್ತೂರು (ಇತರ)	₹4000-8500
ತುರುವೇಕೆರೆ	₹14000-14000

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಚನ್ನಗಿರಿ	
ರಾಶಿ	46110-51299
ಕಾರ್ಕಳ	
ಹೊಸತು	40000-47500
ಪುತ್ತೂರು	
ಕೋಕ	11000-26000
ಹೊಸತು	34500-47500
ಸಾಗರ	
ಬಿಳಿಗೋಟು	31410-32137
ಚಾಲಿ	37899-38799
ಕೋಕ	35199-35237
ರಾಶಿ	46599-49889
ಸಿಪ್ಪೆಗೋಟು	22109-22389
ಶಿವಮೊಗ್ಗ	
ಗೊರಬಲು	17100-38199
ರಾಶಿ	46009-50789
ಸಿದ್ದಾಪುರ	
ಬಿಳಿಗೋಟು	28099-34019
ಚಾಲಿ	37249-41399
ಕೋಕ	26109-33399
ಕೆಂಪುಗೋಟು	34089-35999
ರಾಶಿ	48399-49599
ತಟ್ಟಿಬೆಟ್ಟೆ	42169-49299
ಶಿರಸಿ	
ಬೆಟ್ಟೆ	31709-48009
ಬಿಳಿಗೋಟು	16099-37199
ಚಾಲಿ	36299-43399
ಕೆಂಪುಗೋಟು	17619-30007
ರಾಶಿ	44199-50399
ಸೊರಬ	
ಚಾಲಿ	40000-40000
ರಾಶಿ	49700-49700
ಯಲ್ಲಾಪುರ	
ಆಪಿ	61899-61899
ಬಿಳಿಗೋಟು	24612-36319
ಚಾಲಿ	37699-42599
ಕೋಕ	21899-32899
ಕೆಂಪುಗೋಟು	26899-36219
ರಾಶಿ	47860-55499
ತಟ್ಟಿಬೆಟ್ಟೆ	39000-46869

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15900	16150	221.30 ಸೆಂಟ್ಸ್
ಎಸಿ	9100	8500	8850	
ಆರ್‌ಪಿ	9800	9750	9800	ಲಂಡನ್
ಆರ್‌ಸಿ	4800	4500	4750	2226ಡಾಲರ್ಸ್

ಆರ್ಥಿಕ ಹಿಂಜರಿತದತ್ತ ಜಗತ್ತು: ವಿಶ್ವ ವ್ಯಾಪಾರ ಸಂಘಟನೆ

ಜಿನೆವಾ (ಎಎಫ್‌ಪಿ): ಜಗತ್ತು ಆರ್ಥಿಕ ಹಿಂಜರಿತದ ಕಡೆ ಸಾಗುತ್ತಿದೆ, ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ತೀವ್ರ ಕ್ರಮಗಳನ್ನು ಕೈಗೊಳ್ಳುವ ಅಗತ್ಯ ಇದೆ ಎಂದು ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ಮಹಾನಿರ್ದೇಶಕಿ ಎಂಗೊಜಿ ಒಕೊಂಜೊ ಐವಿಲಾ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧ, ಹವಾಮಾನ ಬಿಕ್ಕಟ್ಟು, ಆಹಾರ ವಸ್ತುಗಳ ಬೆಲೆ ಹಾಗೂ ಇಂಧನ ಬೆಲೆ ಹೆಚ್ಚಳ, ಕೋವಿಡ್–19 ಪರಿಣಾಮಗಳು ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಪೂರಕವಾದ ವಾತಾವರಣ ಸೃಷ್ಟಿ ಮಾಡುತ್ತಿವೆ ಎಂದು ಅವರು ಹೇಳಿದ್ದಾರೆ.

ಹುಬ್ಬಳ್ಳಿಯ ನವೋದ್ಯಮದಿಂದ ಪಿಸ್ತೂಲ್ ತಯಾರಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ದೇಶೀಯವಾಗಿ ವಿನ್ಯಾಸಗೊಳಿಸಿದ ಪಿಸ್ತೂಲ್ ಹಾಗೂ ರೈಫಲ್‌ಗಳ ಮಾದರಿ ಯನ್ನು ಅಸ್ತ್ರ ಡಿಫೆನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಿದ್ಧಪಡಿಸಿದ್ದು, ಅವುಗಳ ಉತ್ಪಾದನಾ ಘಟಕವನ್ನು ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಕಾಡನಕೊಪ್ಪ ಗ್ರಾಮ ದಲ್ಲಿ ನವೆಂಬರ್‌ನಲ್ಲಿ ಉದ್ಘಾಟಿಸಲಾಗುವುದು' ಕಂಪನಿಯ ಸಿಇಒ ಅಂಕುಶ ಕೊರವಿ ಹೇಳಿದರು.

'ಅಟಲ್' ಪಿಸ್ತೂಲ್ ಮಾದರಿ ಗಳನ್ನು ನಮ್ಮಲ್ಲಿಯೇ ವಿನ್ಯಾಸ ಮಾಡಿ, ಅಭಿವೃದ್ಧಿಪಡಿಸಲಾಗಿದೆ. ಅಟಲ್ 9x19ಎಂ.ಎಂ (ಕ್ಯಾಲಿಬರ್) ಪಿಸ್ತೂಲ್ ಹಾಗೂ ಅಟಲ್ 0.32 (ಕ್ಯಾಲಿಬರ್) ಪಿಸ್ತೂಲ್ ತಯಾರಿಸಲಾಗು ವುದು. ಆಯುಧಗಳನ್ನು ತಯಾರಿಸುವ ಖಾಸಗಿ ವಲಯದ ಮೊದಲ ಸ್ವದೇಶಿ ಕಂಪನಿ ಇದು' ಎಂದು ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

'ಅನುಭವಿ ಮಿಲಿಟರಿ ಮತ್ತು ಪೊಲೀಸ್ ಅಧಿಕಾರಿಗಳ ಮಾರ್ಗದರ್ಶನದಲ್ಲಿ ನೂತನ ತಂತ್ರಜ್ಞಾನ ಬಳಸಿ, ಆಯುಧಗಳ ಮಾದರಿ ತಯಾರಿಸಲಾಗಿದೆ. ನಮ್ಮ ಕಂಪನಿಯ ಕಾರ್ಯಕ್ಷಮತೆ ಸಾಮರ್ಥ್ಯ ಗುರುತಿಸಿದ ರಕ್ಷಣಾ ಇಲಾಖೆಯು, ಅ. 18ರಿಂದ 22ರವರೆಗೆ ಗುಜರಾತಿನಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ರಕ್ಷಣಾ ಆಯುಧಗಳ 'ಡೆಫ್ ಎಕ್ಸ್‌ಪೋ–2022'ದ ಇಂಡಿಯಾ ಪೆವಿಲಿಯನ್‌ನಲ್ಲಿ ನಮ್ಮ ಮಾದರಿ ಗಳನ್ನು ಪ್ರದರ್ಶಿಸಲು ಅವಕಾಶ ನೀಡಿದೆ' ಎಂದರು.

ಮುಂಬೈ ಧಾರಣೆ

ಶೇಂಗಾ

27-9-2022

ಜಾವಾ 70/80(ಹೊಸ)	11700-11750
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	10850-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1080 (1080)
ಪಾಮ್ ವಾರದ ಡೆಲಿವರಿ	878 (870)
ಸೂರ್ಯಕಾಂತಿ ಎಣ್ಣೆ ಕಚ್ಚಾ	1220 (1220)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,250 (49,350)
ಬೆಳ್ಳಿ ಕೆ.ಜಿ 55,350 (55,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೆಂಕಟರಾಜು, ಊರು ಬೇಡ

- **ಪ್ರಶ್ನೆ:** ಅಕ್ಟೋಬರ್ 1ರಿಂದ ಅಟಲ್ ಪಿಂಚಣಿ ಯೋಜನೆಗೆ ಆದಾಯ ತೆರಿಗೆದಾರರು ಸದಸ್ಯರಾಗುವಂತಿಲ್ಲ ಎಂದು ಸರ್ಕಾರ ಹೇಳಿದೆ. ಈವರೆಗೆ ಈ ಯೋಜನೆಗೆ ಸದಸ್ಯರಾಗಿ ನಿಗದಿತವಾಗಿ ಹಣ ಕಟ್ಟುತ್ತಿದ್ದವರು ಆದಾಯ ತೆರಿಗೆದಾರರಾಗಿದ್ದರೆ ಅವರು ಅದನ್ನು ನಿಲ್ಲಿಸಬೇಕೇ? ಹಿಂದೆ ಆದಾಯ ತೆರಿಗೆ ವ್ಯಾಪ್ತಿಗೆ ಬಾರದೆ, ಈಗ ತೆರಿಗೆ ವ್ಯಾಪ್ತಿಗೆ ಬಂದಿದ್ದರೆ ಅವರು ಏನು ಮಾಡಬೇಕು? ಎನ್‌ಪಿಎಸ್ ಯೋಜನೆಯ ಸ್ಥೂಲ ವಿವರ ನೀಡಿ.

ಉತ್ತರ: ಅಟಲ್ ಪಿಂಚಣಿ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಬಡ ವರ್ಗಗಳಿಗೆ ಸೇರಿದ ಜನರಿಗೆ 60 ವರ್ಷ ವಯಸ್ಸು ದಾಟಿದೊಡನೆ ಪಿಂಚಣಿ ಲಭಿಸುವಂತೆ ಮಾಡುವ ಉದ್ದೇಶದಿಂದ 2015ರಲ್ಲಿ ಆರಂಭಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದಿರುವ ಇನ್ನಷ್ಟು ವರ್ಗಗಳಿಗೆ ಯೋಜನೆಯ ಪ್ರಯೋಜನ ಸಿಗಬೇಕು ಎಂಬ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದೆ.

ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಅಧಿಸೂಚನೆ ಪ್ರಕಾರ, ಹೊಸದಾಗಿ ಈ ಯೋಜನೆಗೆ ಸೇರಬೇಕೆನ್ನುವವರು, ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಬಂದಿರಬಾರದು. ಯಾರು ತಮ್ಮ ಗಳಿಕೆಯ ಮೇಲೆ ತೆರಿಗೆ ಪಾವತಿಸಲು ಬಾಧ್ಯಸ್ಥರಲ್ಲವೋ ಅವರಷ್ಟೇ ಅಟಲ್ ಪಿಂಚಣಿ ಯೋಜನೆ ಸೇರಬಹುದು. ಈ ನಿಯಮ ಅಕ್ಟೋಬರ್ 1ರಿಂದ ಅನ್ವಯವಾಗುತ್ತದೆ. ಯಾರು ಈ ದಿನಾಂಕಕ್ಕೆ ಮೊದಲೇ ಯೋಜನೆಗೆ ಸೇರಿಕೊಂಡಿರುತ್ತಾರೋ ಅವರು ಪಾವತಿ ಮುಂದುವರಿಸುವುದಕ್ಕೆ ತೊಂದರೆ ಇರುವುದಿಲ್ಲ. ಅಕ್ಟೋಬರ್ 1ರ ನಂತರ ಖಾತೆ ತೆರೆಯುವವರು ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಇದ್ದವರಾದರೆ, ಸರ್ಕಾರವು ಅವರ ಖಾತೆಯನ್ನು ಸ್ಥಗಿತಗೊಳಿಸಿ ಹಣವನ್ನು ಹಿಂದಿರುಗಿಸುವ ಅಧಿಕಾರ ಹೊಂದಿದೆ.

ರಾಷ್ಟ್ರೀಯ ಪಿಂಚಣಿ ಯೋಜನೆ (NPS) ಬಗ್ಗೆ: ಇದರಲ್ಲಿ ಹಣ ತೊಡಗಿಸುವುದರ ಮೂಲ ಉದ್ದೇಶ, ನಿವೃತ್ತಿ ಜೀವನದ ಆರ್ಥಿಕ ವೆಚ್ಚ ಭರಿಸುವುದು. ಎನ್‌ಪಿಎಸ್ ಅಡಿಯಲ್ಲಿ ಸಂಗ್ರಹವಾದ ಮೊತ್ತವನ್ನು ವೃತ್ತಿಪರರು ನಿರ್ವಹಣೆ ಮಾಡುತ್ತಾರೆ. ಇದಕ್ಕೆ ಪಿಂಚಣಿ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಪ್ರಾಧಿಕಾರದ ಹೂಡಿಕೆ ಮಾರ್ಗಸೂಚಿಗಳ ಪ್ರಕಾರ ವೃತ್ತಿಪರರು ನಿಧಿ ನಿರ್ವಾಹಕರು ಸರ್ಕಾರಿ ಬಾಂಡ್, ಬಿಲ್, ಕಾರ್ಪೊರೇಟ್ ಡಿಬೆಂಚರ್ ಮತ್ತು ಷೇರುಗಳನ್ನು ಒಳಗೊಂಡಿರುವ ವೈವಿಧ್ಯಮಯ ಪೋರ್ಟ್‌ಫೋಲಿಯೊಗಳಲ್ಲಿ ತೊಡಗಿಸುತ್ತಾರೆ. ದೀರ್ಘಾವಧಿಯಲ್ಲಿ ಅದು ಆಯ್ಕೆ ಮಾಡಿದ ಯೋಜನೆಗೆ ಅನುಗುಣವಾಗಿ ಉತ್ತಮ ಆದಾಯ ಕೊಡುತ್ತದೆ. ಎನ್‌ಪಿಎಸ್ ಖಾತೆ ತೆರೆಯಲು ಶಾಶ್ವತ ನಿವೃತ್ತಿ ಖಾತೆ ಸಂಖ್ಯೆಯನ್ನು (PRAN) ಹೊಂದಿರಬೇಕಾಗುತ್ತದೆ. ಇದು ಒಂದು ಅನನ್ಯ ಸಂಖ್ಯೆ ಮತ್ತು ಇದು ಚಂದಾದಾರರ ಜೀವಿತಾವಧಿಯಲ್ಲಿ ಎನ್‌ಪಿಎಸ್ ಸಂಬಂಧಿ ವ್ಯವಹಾರಗಳಿಗೆಲ್ಲ ಬಳಕೆ ಆಗುತ್ತದೆ.

ಭರತ್ ಪಾಠಕ್, ಬೆಂಗಳೂರು

- **ಪ್ರಶ್ನೆ:** ನಾನು ಮಾಧ್ಯಮಗಳಲ್ಲಿ, ಷೇರುಗಳ ಬದಲಾಗಿ ಇಟಿಎಫ್ ಕೊಂಡುಕೊಳ್ಳಿ, ರಿಸ್ಕ್ ತುಂಬಾ ಕಡಿಮೆ ಎನ್ನುವ ಮಾಹಿತಿಯನ್ನು ಇತ್ತೀಚೆಗೆ ಕೇಳಿರುವೆ. ಈ ಮಾತು ಸರಿಯೇ? ಇಟಿಎಫ್ ಹೂಡಿಕೆ ಷೇರುಗಳಿಗಿಂತ ಭಿನ್ನವೇ? ನಾವು ಹೂಡಿಕೆ ಮಾಡಿ ಲಾಭ ಗಳಿಸಬಹುದೇ? ತಿಳಿಸಿಕೊಡಿ.

ಉತ್ತರ: ಭಾರತೀಯ ಬಂಡವಾಳ ಮಾರುಕಟ್ಟೆಯಲ್ಲಿ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳು (ಇಟಿಎಫ್) ಇತ್ತೀಚಿನ ದಿನಗಳಲ್ಲಿ ಬಹಳ ಪ್ರಾಮುಖ್ಯತೆ ಪಡೆಯುತ್ತಿವೆ. ಒಂದೆಡೆ ಇವು ಷೇರುಗಳ ಸ್ವಭಾವವನ್ನು, ಇನ್ನೊಂದೆಡೆ ಮ್ಯೂಚುವಲ್ ಫಂಡ್‌ಗಳ ಸ್ವಭಾವವನ್ನೂ ಹೊಂದಿದ ಹೂಡಿಕೆ ಉತ್ಪನ್ನವಾಗಿವೆ. ಇಟಿಎಫ್‌ಗಳನ್ನು ಷೇರುಗಳಂತೆ ಪ್ರತಿ ಕ್ಷಣ ಮಾರುಕಟ್ಟೆ ಅವಧಿಯಲ್ಲಿ ನಿಮ್ಮ ಅನುಕೂಲಕರ ಬೆಲೆಗೆ ಖರೀದಿ ಹಾಗೂ ಮಾರಾಟ ಮಾಡಬಹುದು. ಹೂಡಿಕೆದಾರರ ಡಿಮ್ಯಾಟ್ ಖಾತೆಯಲ್ಲಿ ಇವುಗಳ ಖರೀದಿ ಮತ್ತು ಮಾರಾಟವನ್ನು ಷೇರುಗಳಂತೆಯೇ ದಾಖಲಿಸಲಾಗುತ್ತದೆ.

ಹೂಡಿಕೆದಾರ ತನ್ನ ನೆಚ್ಚಿನ ಕ್ಷೇತ್ರವನ್ನು ಆಯ್ಕೆ ಮಾಡಿ ಹೂಡಿಕೆ ಮಾಡುವ ಅವಕಾಶವನ್ನು ಇಟಿಎಫ್ ಕೊಡುತ್ತದೆ. ಉದಾಹರಣೆಗೆ, ಹೂಡಿಕೆದಾರ ಬ್ಯಾಂಕಿಂಗ್ ಕ್ಷೇತ್ರದ ಮೇಲೆ ಹೆಚ್ಚಿನ ಭರವಸೆ ಹೊಂದಿದ್ದು, ಯಾವುದೇ ನಿರ್ದಿಷ್ಟ ಬ್ಯಾಂಕಿನ ಷೇರುಗಳಲ್ಲಿ ಹೂಡಿಕೆಗೆ ಆಸಕ್ತನಿಲ್ಲದಿದ್ದಲ್ಲಿ ಅಂಥವರು ಒಟ್ಟು ಮಾರುಕಟ್ಟೆ ಪರಿಸ್ಥಿತಿಯನ್ನು ಅವಲೋಕಿಸಿ ಮಾರುಕಟ್ಟೆ ಕೆಳಕ್ಕೆ ಬಂದಾಗ ಇಟಿಎಫ್ ಖರೀದಿಸಬಹುದು. ಇಲ್ಲಿ ಷೇರು ಮಾರುಕಟ್ಟೆಯ ಕೆಲವು ಷೇರುಗಳು ಕಾಣುವ ಭಾರೀ ಏರಿಳಿತ ಇರುವುದಿಲ್ಲ. ಕಾರಣ, ಮ್ಯೂಚುವಲ್ ಫಂಡ್‌ಗಳಂತೆ ಒಂದು ಸೂಚ್ಯಂಕವನ್ನು ಮಾನದಂಡವನ್ನಾಗಿಸಿ ಅದರಲ್ಲಿರುವ ಷೇರುಗಳ ಪ್ರಮಾಣಕ್ಕೆ ಅನುಗುಣವಾಗಿ ಇಟಿಎಫ್ ನಿರ್ವಹಣಾ ಸಂಸ್ಥೆಗಳು ಹೂಡಿಕೆ ಮಾಡುತ್ತವೆ. ಹೀಗಾಗಿ ಅತೀ ದೊಡ್ಡ ಪ್ರಮಾಣದ ಏರಿಳಿತಗಳು ಹೆಚ್ಚಿನ ಅಪಾಯ ತರದಂತೆ ಸಹಕರಿಸುತ್ತವೆ.

ಎಲ್ಲಾ ಹೂಡಿಕೆಗಳಿಗಿರುವ ಅನುಕೂಲ ಹಾಗೂ ಅನನುಕೂಲಗಳು ಇಟಿಎಫ್‌ಗಳ ವಿಚಾರದಲ್ಲಿಯೂ ಇವೆ. ಇದರಲ್ಲಿನ ಹೂಡಿಕೆಗೂ ಮಾರುಕಟ್ಟೆ ವ್ಯವಹಾರದ ಸಾಮಾನ್ಯ ಕೌಶಲ ಬೇಕಾಗುತ್ತದೆ. ಲಾಭ–ನಷ್ಟ ನಾವು ಆಯ್ಕೆ ಮಾಡುವ ಒಟ್ಟಾರೆ ಕ್ಷೇತ್ರದ ಭವಿಷ್ಯದ ಮೇಲೆ ಅವಲಂಬಿತವಾಗಿರುವ ಕಾರಣ ಯಾವುದೇ ಇಟಿಎಫ್ ಕೊಳ್ಳುವ ಮೊದಲು ಒಂದಷ್ಟು ಕ್ಷೇತ್ರಗಳ ವ್ಯವಹಾರದ ಸಾಧಕ ಮತ್ತು ಬಾಧಕ ಅವಲೋಕಿಸಿ ಅಂತಹ ಕ್ಷೇತ್ರದಲ್ಲಿ ಹೆಚ್ಚು ವ್ಯವಹರಿಸಲ್ಪಡುವ ಇಟಿಎಫ್ ಖರೀದಿಸುವುದು ಉತ್ತಮ ಲಾಭಗಳಿಸಲು ನೆರವಾಗಬಲ್ಲದು. ಷೇರು ಸೂಚ್ಯಂಕವಷ್ಟೇ ಅಲ್ಲದೆ, ಹೂಡಿಕೆದಾರ ಯಾವುದೇ ನಿರ್ದಿಷ್ಟ ಉತ್ಪನ್ನಗಳ ಬೆಲೆಗಳಲ್ಲಿ ಏರುಗತಿ ನಿರೀಕ್ಷಿಸುತ್ತಿದ್ದರೆ, ಅಂತಹ ಇಟಿಎಫ್‌ಗಳನ್ನೂ ಹೂಡಿಕೆಗೆ ಆಯ್ಕೆ ಮಾಡಿಕೊಳ್ಳಬಹುದು. ಉದಾಹರಣೆಗೆ ಚಿನ್ನ, ಕಚ್ಚಾ ತೈಲ, ನೈಸರ್ಗಿಕ ಅನಿಲ ಇತ್ಯಾದಿಗಳ ಬೆಲೆಯಲ್ಲಿ ಏರಿಕೆಯಾಗುವ ನಿರೀಕ್ಷೆ ಇದ್ದರೆ, ಆಯಾ ವರ್ಗದ ಇಟಿಎಫ್ ಖರೀದಿಸಬಹುದು. ವಿದೇಶಿ ಮಾರುಕಟ್ಟೆ ಸೂಚ್ಯಂಕಗಳನ್ನು ಆಧರಿಸಿರುವ ಇಟಿಎಫ್ ಕೂಡ ಲಭ್ಯವಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಪ್ರಧಾನಿ ನರೇಂದ್ರ ಮೋದಿ, ಕಮಲಾ ಹ್ಯಾರಿಸ್ ಸೇರಿ ಹಲವು ರಾಷ್ಟ್ರಗಳ ಗಣ್ಯರು ಹಾಜರು

ವಿರೋಧಗಳ ಮಧ್ಯೆ ನಡೆದ ಅಬೆ ಶ್ರದ್ಧಾಂಜಲಿ

ಟೋಕಿಯೊ (ಎಪಿ): ಜಪಾನ್ ಸರ್ಕಾರ ಇಲ್ಲಿ ಆಯೋಜಿಸಿದ್ದ ಮಾಜಿ ಪ್ರಧಾನಿ ದಿವಂಗತ ಶಿಂಜೊ ಅಬೆ ಅವರ ಶ್ರದ್ಧಾಂಜಲಿ ಸಭೆ ಬಿಗಿ ಭದ್ರತೆಯೊಂದಿಗೆ ಮಂಗಳವಾರ ನಡೆಯಿತು.

'ಅಬೆ ಅವರ ಶ್ರದ್ಧಂಜಲಿ ಸಭೆ ಹೆಸರಲ್ಲಿ ಸರ್ಕಾರ ದುಂದು ವೆಚ್ಚ ಮಾಡಿದೆ' ಎಂದು ಕೆಲ ವಲಯಗಳಲ್ಲಿ ಆಕ್ರೋಶ ವ್ಯಕ್ತವಾಗಿತ್ತು. ಇದರಿಂದ ದೇಶದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಇದರ ನಡುವೆಯೇ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು.

ಕಪ್ಪು ಬಣ್ಣದ ನಿಲುವಂಗಿ ಧರಿಸಿದ್ದ ಅಬೆ ಅವರ ಪತ್ನಿ ಅಕಿ ಅಬೆ ಅವರು ಪತಿಯ ಚಿತಾಭಸ್ಮವನ್ನು ಮರದ ಪೆಟ್ಟಿಗೆಯಲ್ಲಿರಿಸಿದರು. ಬಳಿಕ ಅದನ್ನು ಚಿನ್ನದ ಗೆರೆಗಳಿರುವ ನೇರಳೆ ಬಟ್ಟೆಯಲ್ಲಿ ಸುತ್ತಿ ಬುಡೋಕಾನ್ ಸಭಾಂಗಣದ ಸ್ಥಳಕ್ಕೆ ತಂದರು. ಅಲ್ಲಿ ಬಿಳಿ ಸಮವಸ್ತ್ರದಲ್ಲಿದ್ದ ರಕ್ಷಣಾ ಪಡೆಯವರು ಚಿತಾಭಸ್ಮವನ್ನು ತೆಗೆದುಕೊಂಡು ಬಿಳಿ ಮತ್ತು ಹಳದಿ ಬಣ್ಣದ ಹೂವುಗಳಿಂದ ಅಲಂಕೃತವಾಗಿದ್ದ ಪೀಠದ ಮೇಲೆ ಇರಿಸಿ ನಮನ ಸಲ್ಲಿಸಿದರು.

ಅಕಿ ಅಬೆ, ಪ್ರಧಾನಿ ಫುಮಿಯೊ ಕಿಶಿದಾ, ಸರ್ಕಾರ, ಸಂಸತ್ತು ಮತ್ತು ನ್ಯಾಯಾಂಗದ ಪ್ರತಿನಿಧಿಗಳು ಈ ವೇಳೆ ಸಂತಾಪ ಸೂಚಿಸಿದರು. ಜಪಾನಿನ ರಾಜ ಅಕಿಶಿನೊ, ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಭಾರತದ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಸುಮಾರು 4,300 ವಿದೇಶಿ ಗಣ್ಯರು ಪಾಲ್ಗೊಂಡಿದ್ದರು. ಅಬೆ ಅವರ ಆಡಳಿತಾವಧಿಯಲ್ಲಿ ನಡೆದ ಮೈಲುಗಲ್ಲುಗಳ ಕುರಿತ ವಿಡಿಯೊವನ್ನು ಈ ವೇಳೆ ಪ್ರದರ್ಶಿಸಲಾಯಿತು.



ಶಿಂಜೊ ಅಬೆ ಅವರ ಶ್ರದ್ಧಾಂಜಲಿಯಲ್ಲಿ ಪಾಲ್ಗೊಳ್ಳಲು ಬಂದ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಜಪಾನಿನ ಪ್ರಧಾನಿ ಫುಮಿಯೊ ಕಿಶಿದಾ ಬರಮಾಡಿಕೊಂಡರು — ಎಎಫ್‌ಪಿ ಚಿತ್ರ

ಜಪಾನಿನ ಪಶ್ಚಿಮದ ನಾರಾ ನಗರದಲ್ಲಿ ಜುಲೈ 8ರಂದು ಚುನಾವಣಾ ಪ್ರಚಾರ ನಡೆಸುತ್ತಿದ್ದ ಶಿಂಜೊ ಅಬೆ ಅವರನ್ನು ಹತ್ಯೆ ಮಾಡಲಾಗಿತ್ತು. ಅದಾದ ಕೆಲ ದಿನಗಳಲ್ಲಿಯೇ ಅಬೆ ಅವರ ಅಂತ್ಯಕ್ರಿಯೆ ನಡೆದಿತ್ತು.

'ದೀರ್ಘಾವಧಿಯ ಜಪಾನಿನ ರಾಜಕೀಯ ನಾಯಕರಾದ ಅಬೆ, ಸರ್ಕಾರಿ ಗೌರವಗಳನ್ನು ಪಡೆಯಲು ಅರ್ಹರೆಂದು' ಜಪಾನಿನ ಪ್ರಧಾನಿ ಕಿಶಿದಾ ಹೇಳಿದರು.

ದುಂದುವೆಚ್ಚದ ಶ್ರದ್ಧಾಂಜಲಿ ಸಭೆಗೆ ವಿರೋಧ ಪಕ್ಷಗಳ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು. ನಗರದಲ್ಲಿ ಶಾಂತಿಯುತ ಪ್ರತಿಭಟನಾ ಮೆರವಣಿಗೆಗಳೂ ನಡೆದವು. ಬ್ಯಾನರ್‌ಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ನೂರಾರು ಜನರು ಪ್ರತಿಭಟನಾ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. 'ಶಿಂಜೊ ಅಬೆ ಅವರು ದೇಶದ ಸಾಮಾನ್ಯ ಜನರಿಗೆ ಏನೇನೂ ಮಾಡಿಲ್ಲ' ಎಂದು ಪ್ರತಿಭಟನನಿರತರು ಘೋಷಣೆಗಳನ್ನು ಕೂಗಿದರು. ಪ್ರತಿಭಟನೆಗಳ ಕಾರಣ ಟೋಕಿಯೊದಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿತ್ತು.

ವಿವಾದ ಮತ್ತು ವಿರೋಧಗಳ ನಡುವೆಯೂ ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಹೂಗುಚ್ಛಗಳೊಂದಿಗೆ ಸರದಿಯಲ್ಲಿ ಬಂದು ಶಿಂಜೊ ಅಬೆ ಅವರಿಗೆ ಅಂತಿಮ, ಗೌರವ ನಮನಗಳನ್ನು ಸಲ್ಲಿಸಿದರು. ಜಪಾನ್‌ನ ಪ್ರಮುಖ ವಿರೋಧ ಪಕ್ಷಗಳು ಸರ್ಕಾರಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲಿಲ್ಲ.

ಮೋದಿ ಭಾಗಿ

ಶಿಂಜೊ ಅಬೆ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಹೂಗುಚ್ಛವಿಟ್ಟು ಅಂತಿಮ ನಮನ ಸಲ್ಲಿಸಿದರು.

ಮಂಗಳವಾರ ಬೆಳಿಗ್ಗೆ ಇಲ್ಲಿಗೆ ಬಂದ ಮೋದಿ ಅವರು, ಜಾಗತಿಕ ನಾಯಕರ ಜತೆ ಸಭೆಯಲ್ಲಿ ಪಾಲ್ಗೊಂಡರು.

'ಭಾರತ– ಜಪಾನ್ ಪಾಲುದಾರಿಕೆಯ ಉತ್ತುಂಗದಲ್ಲಿ ಅಪಾರ ಕೊಡುಗೆ ನೀಡಿದ ಮಹಾನ್ ದಾರ್ಶನಿಕನಿಗೆ ನಮನಗಳು' ಎಂದು ಮೋದಿ ಗೌರವ ಸಲ್ಲಿಸಿದರು. ಬಳಿಕ ಅವರು ಭಾರತಕ್ಕೆ ವಾಪಸಾದರು.

ಕಿಶಿದಾ ಜತೆ ಮೋದಿ ಮಾತುಕತೆ

ಟೋಕಿಯೊ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಜಪಾನ್ ಪ್ರಧಾನಿ ಫುಮಿಯೊ ಕಿಶಿದಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಈ ವೇಳೆ ಭಾರತ– ಜಪಾನ್ ನಡುವಿನ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಉಭಯ ನಾಯಕರು ಮತ್ತೊಮ್ಮೆ ಬದ್ಧತೆ ವ್ಯಕ್ತಪಡಿಸಿದರು.

ಮೇ ತಿಂಗಳಲ್ಲಿ ನಡೆದಿದ್ದ 'ಕ್ವಾಡ್' ನಾಯಕರ ಶೃಂಗಸಭೆಯಲ್ಲಿ ಮೋದಿ ಅವರು ಕಿಶಿದಾ ಅವರನ್ನು ಭೇಟಿಯಾಗಿದ್ದರು. ಅದಕ್ಕೂ ಮುನ್ನ ಮಾರ್ಚ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಕಿಶಿದಾ ಅವರು ಮೋದಿ ಅವರೊಂದಿಗೆ ಮಾತುಕತೆ ನಡೆಸಿದ್ದರು.


ಮುಂದಿನ ತಿಂಗಳು ಕಮ್ಯುನಿಸ್ಟ್ ಪಕ್ಷದ ಅಧಿವೇಶನ

ವಿದೇಶಕ್ಕೆ ಹೋಗಿ ಬಂದವರು ಕ್ವಾರಂಟೈನ್ ಪಾಲಿಸುವ ನಿಯಮ ಚೀನಾದಲ್ಲಿದೆ. ಅದನ್ನು ಅಧ್ಯಕ್ಷರು ಪಾಲಿಸಿದ ಕಾರಣ ಜಾಲತಾಣಗಳಲ್ಲಿ ವದಂತಿ ಹರಡಿತ್ತು

ಷಿ ಜಿನ್‌ಪಿಂಗ್ ಹಾಜರಿ: ಪದಚ್ಯುತಿ ವದಂತಿಗೆ ತೆರೆ

ಬೀಜಿಂಗ್ (ಪಿಟಿಐ): ಶಾಂಘೈ ಸಹಕಾರ ಶೃಂಗಸಭೆಯಲ್ಲಿ (ಎಸ್‌ಸಿಒ) ಪಾಲ್ಗೊಂಡು ಹಿಂತಿರುಗಿದ ಮೇಲೆ ಸೆ.16ರಿಂದ ಸಾರ್ವಜನಿಕವಾಗಿ ಕಾಣಿಸಿಕೊಳ್ಳದಿದ್ದ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಮಂಗಳವಾರ ಕಮ್ಯುನಿಸ್ಟ್ ಪಕ್ಷದ ಕಳೆದೊಂದು ದಶಕದ ಆಡಳಿತ ಸಾಧನೆ ಬಿಂಬಿಸುವ ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಮೂಲಕ ಮೊದಲ ಬಾರಿಗೆ ಕಾಣಿಸಿಕೊಂಡರು.

ಆಡಳಿತರೂಢ ಕಮ್ಯುನಿಸ್ಟ್ ಪಕ್ಷದ ಪ್ರಮುಖ ಅಧಿವೇಶನ ಮುಂದಿನ ತಿಂಗಳು ನಿಗದಿಯಾಗಿದ್ದು, ಜಿನ್‌ಪಿಂಗ್ ನೇತೃತ್ವದ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸಲು ಈ ಪ್ರದರ್ಶನ ನಡೆಯುತ್ತಿದೆ.



ಜಾಲತಾಣಿಗರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದ 'ಕಮ್ಯುನಿಸ್ಟ್ ದೇಶದಲ್ಲಿ ಸೇನಾ ಕ್ರಾಂತಿ ನಡೆದಿದೆ, ಅಧ್ಯಕ್ಷರನ್ನು ಪದಚ್ಯುತಿಗೊಳಿಸಿ ಗೃಹಬಂಧನದಲ್ಲಿರಿಸಲಾಗಿದೆ' ಎಂಬ ಮಾಹಿತಿ ಮತ್ತು ವಿಡಿಯೊಗಳಿಂದ ವ್ಯಾಪಕವಾಗಿ ಹರಡಿದ್ದ ವದಂತಿಗಳಿಗೆ ಜಿನ್‌ಪಿಂಗ್ ಭೇಟಿ ತೆರೆ ಎಳೆದಿದೆ.

ಚೀನಾದ ಮಣ್ಣಿನ ಗುಣಗಳನ್ನು ಉಳಿಸಿಕೊಳ್ಳುವ ಜತೆಗೆ ಸಮಾಜವಾದದ ಹೊಸ ದಿಗ್ವಿಜಯವನ್ನು ದೃಢನಿಶ್ಚಯದಿಂದ ಮುಂದುವರಿಸಲು ಸರ್ವ ಪ್ರಯತ್ನ ನಡೆಸುವಂತೆ ತಮ್ಮ ಪಕ್ಷದ ಪ್ರತಿನಿಧಿಗಳಿಗೆ ಅವರು ಕರೆ ನೀಡಿದರು ಎಂದು ಸರ್ಕಾರಿ ಸುದ್ದಿ ಸಂಸ್ಥೆ ಶಿನುಹಾ ವರದಿ ಹೇಳಿದೆ.

ಪಂಜಾಬ್: ವಿಶ್ವಾಸ ಮತ ನಿರ್ಣಯ ಮಂಡಿಸಿದ ಸಿ.ಎಂ

ಚಂಡೀಗಢ (ಪಿಟಿಐ): ರಾಜ್ಯಪಾಲ ಬನ್ವಾರಿ ಲಾಲ್ ಪುರೋಹಿತ್ ಅವರು ಸದನವನ್ನು ಕರೆಯಲು ಒಪ್ಪಿಗೆ ನೀಡಿದ ಎರಡು ದಿನಗಳ ಬಳಿಕ ಪಂಜಾಬ್ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಮಂಗಳವಾರ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ವಿಶ್ವಾಸಮತಕ್ಕೆ ನಿರ್ಣಯ ಮಂಡಿಸಿದರು.

ಸ್ಪೀಕರ್ ಕುಲತಾರ್ ಸಿಂಗ್ ಸಂಧ್ವಾನ್ ಅವರು ವಿಶ್ವಾಸಮತ ಮಂಡನೆಗೆ ಒಪ್ಪಿಗೆ ನೀಡಿದ ಬಳಿಕ ಬಿಜೆಪಿ ಶಾಸಕರಾದ ಅಶ್ವನಿ ಶರ್ಮಾ, ಜಂಗಿ ಲಾಲ್ ಮಹಾಜನ್ ಅವರು ಸದನದಿಂದ ಹೊರನಡೆದರು.

ಮಾನ್ ಮತ್ತು ಸಚಿವ ಅಮನ್ ಅರೋರಾ ಅವರು ಮಾತನಾಡಿದ ನಂತರ ಸ್ಪೀಕರ್ ಅವರು, ವಿಶ್ವಾಸಮತ ಯಾಚನೆ ಮೇಲಿನ ಚರ್ಚೆಯನ್ನು ಗುರುವಾರಕ್ಕೆ ಮುಂದೂಡಿದರು.

ಗಲಭೆಯಲ್ಲಿ ಆರೆಸ್ಸೆಸ್ ಮುಂಚೂಣಿ: ಸಿಪಿಎಂ

ತಿರುವನಂತಪುರ: 'ಕೇರಳದಲ್ಲಿ ಗಲಭೆ ಸೃಷ್ಟಿಸುವುದರಲ್ಲಿ ಆರೆಸ್ಸೆಸ್‌ಮುಂಚೂಣಿಯಲ್ಲಿದೆ' ಎಂದು ಆಡಳಿತಾರೂಢ ಸಿಪಿಎಂ ಮಂಗಳವಾರ ಹೇಳಿದೆ.

'ಕೇರಳ ಭಯೋತ್ಪಾದನೆಯ ತಾಣ ವಾಗುತ್ತಿದೆ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿರುವ ಸಿಪಿಎಂ, 'ಎಡರಂಗ ಸರ್ಕಾರದ ವಿರುದ್ಧ ನಡ್ಡಾ ಅಪಪ್ರಚಾರ ಮಾಡುತ್ತಿದ್ದಾರೆ. ಇದನ್ನು ಜನರು ತಳ್ಳಿಹಾಕಲಿದ್ದಾರೆ' ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಭೂಮಿಯನ್ನು ಆಕಾಶ ಕಾಯಗಳಿಂದ ರಕ್ಷಿಸುವ ಪರೀಕ್ಷೆ

ಕ್ಷುದ್ರಗ್ರಹಕ್ಕೆ ಡಿಕ್ಕಿ ಹೊಡೆದ ನೌಕೆ

ಲಾರೆಲ್ (ಅಮೆರಿಕ) (ಎಪಿ): ಕ್ಷುದ್ರಗ್ರಹ ಅಥವಾ ಧೂಮಕೇತುಗಳಿಂದ ಎದುರಾಗುವ ಸಂಭಾವ್ಯ ಅಪಾಯಗಳ ವಿರುದ್ಧ ಭೂಮಿಯನ್ನು ರಕ್ಷಿಸುವ ತಂತ್ರಜ್ಞಾನವನ್ನು ಪರೀಕ್ಷಿಸುವ ವಿಶ್ವದ ಮೊದಲ ಕಾರ್ಯಾಚರಣೆಯನ್ನು ನಾಸಾ ಮಂಗಳವಾರ ಯಶಸ್ವಿಯಾಗಿ ಪೂರ್ಣಗೊಳಿಸಿದೆ.


ನಾಸಾದ ಬಾಹ್ಯಾಕಾಶ ನೌಕೆ 'ಡಾರ್ಟ್ (ಡಬಲ್ ಅಸ್ಟ್ರಾಯ್ಡ್ ರೀಡೈರೆಕ್ಷನ್ ಟೆಸ್ಟ್ – ಕ್ಷುದ್ರಗ್ರಹದ ಪಥ ಬದಲಿಸುವ ಪರೀಕ್ಷೆ)' ಕ್ಷುದ್ರಗ್ರಹ 'ಡಿಮೊರ್ಫಾಸ್'ಗೆ ಹೈಪರ್ ಸಾನಿಕ್ ವೇಗದಲ್ಲಿ (ಗಂಟೆಗೆ 22,530 ಕಿ.ಮೀ.) ಡಿಕ್ಕಿ ಹೊಡೆದಿದೆ.

530 ಅಡಿ ಅಗಲದ ಕ್ಷುದ್ರಗ್ರಹದ ಪಥ ಬದಲಿಸುವ ಸಲುವಾಗಿ ಅದರ ಮೇಲೆ ಬಾಹ್ಯಾಕಾಶ ನೌಕೆಯು ಡಿಕ್ಕಿ ಹೊಡೆಯಿತು. ಭೂಮಿಯಿಂದ 11 ದಶಲಕ್ಷ ಕಿಲೋಮೀಟರ್ ದೂರದಲ್ಲಿ ಈ ವಿದ್ಯಮಾನ ನಡೆದಿದೆ.

ಈ ಪರೀಕ್ಷೆಗಾಗಿ 'ಡಾರ್ಟ್' ಅನ್ನು ಕಳೆದ ವರ್ಷ ನವೆಂಬರ್‌ನಲ್ಲಿ ನಭಕ್ಕೆ ಉಡಾಯಿಸಲಾಗಿತ್ತು. ತಿಂಡಿಗಳ ಸ್ವಯಂ ಮಾರಾಟ ಯಂತ್ರ (ವೆಂಡಿಂಗ್ ಮೆಶಿನ್) ಗಾತ್ರದ 570 ಕೆ.ಜಿ.ತೂಕದ ಈ ನೌಕೆಯನ್ನು ಜಾನ್ಸ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದ ಅಪ್ಲೈಡ್ ಫಿಸಿಕ್ಸ್ ಲ್ಯಾಬೊರೇಟರಿ ಅಭಿವೃದ್ಧಿಪಡಿಸಿತ್ತು.

ಚಲನ ಶಕ್ತಿಯನ್ನು ಬಳಸಿಕೊಂಡು ಕ್ಷುದ್ರಗ್ರಹದ ಪಥವನ್ನು ಬದಲಾಯಿಸುವ ಸಾಮರ್ಥ್ಯವನ್ನು ಬಾಹ್ಯಾಕಾಶ ನೌಕೆಯು ಹೊಂದಿದೆಯೇ ಎಂದು ಅವಲೋಕಿಸಲು ಈ ಕಾರ್ಯಾಚರಣೆ ರೂಪಿಸಲಾಗಿತ್ತು. ಭೂಮಿಗೆ ಆಕಾಶ ಕಾಯಗಳಿಂದ ಹಾನಿಯಾಗದಂತೆ ತಡೆಯುವುದು ಇದರ ಉದ್ದೇಶವಾಗಿತ್ತು.

325 ದಶಲಕ್ಷ ಡಾಲರ್ ವೆಚ್ಚದ ಈ ಯೋಜನೆಯ ಫಲಶ್ರುತಿಯನ್ನು ಅಧ್ಯಯನ ನಡೆಸಲಾಗುತ್ತಿದ್ದು, ಉಪಗ್ರಹ ಡಿಕ್ಕಿ ಹೊಡೆದುದರಿಂದ ಕ್ಷುದ್ರಗ್ರಹದಲ್ಲಿ ಎಂತಹ ಕುಳಿ ನಿರ್ಮಾಣವಾಗಿದೆ, ಕ್ಷುದ್ರಗ್ರಹದ ಪಥ ಹೇಗೆ ಬದಲಾಗಿದೆ ಎಂಬ ಮಾಹಿತಿ ಸಂಗ್ರಹಿಸುವ ಕೆಲಸ ಆರಂಭವಾಗಿದೆ ಎಂದು ನಾಸಾ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಹೇಳಿದ್ದಾರೆ.



'ಡಿಮೊರ್ಫಾಸ್' ಕ್ಷುದ್ರಗ್ರಹವನ್ನು ಡಾರ್ಟ್ ಅಪ್ಪಳಿಸುವುದಕ್ಕೆ ಕೆಲವೇ ಕ್ಷಣಗಳ ಮೊದಲು ಕಂಡ ಕ್ಷುದ್ರಗ್ರಹದ ದೃಶ್ಯ –ಎಎಫ್‌ಪಿ ಚಿತ್ರ

ಯೋಜನೆಯಲ್ಲಿ ಬೆಂಗಳೂರಿನ ಕಾರ್ತಿಕ್

ಅನ್ಯಗ್ರಹಗಳಿಂದ ಭೂಮಿಗೆ ಎದುರಾಗುವ ಹಾನಿಯನ್ನು ತಪ್ಪಿಸುವ ಈ ಮಹತ್ವದ ಯೋಜನೆಯಲ್ಲಿ ಬೆಂಗಳೂರಿನ ಭಾರತೀಯ ಖಭೌತ ವಿಜ್ಞಾನ ಸಂಸ್ಥೆಯ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೊಫಿಸಿಕ್ಸ್) ವಿಜ್ಞಾನಿ ಕ್ರಿಶ್ವಿನ್ ಕಾರ್ತಿಕ್ ಸಹ ಇದ್ದರು.

'66 ದಶಲಕ್ಷ ವರ್ಷಗಳ ಹಿಂದೆ ಭೂಮಿಗೆ ಅಪ್ಪಳಿಸಿದ ಕ್ಷುದ್ರಗಹದಿಂದಾಗಿಯೇ ಡೈನೋಸಾರ್‌ಗಳ ಸಂತತಿ ಅಳಿಯಿತು ಎಂದು ಊಹಿಸಲಾಗಿದೆ. ಭವಿಷ್ಯದಲ್ಲಿ ಇಂತಹ ಗಂಡಾಂತರ ಎದುರಾಗದಿರಲಿ ಎಂಬ ಕಾರಣಕ್ಕೇ ಈ ಪರೀಕ್ಷೆ ನಡೆಸಲಾಗಿದೆ' ಎಂದು ಕಾರ್ತಿಕ್ 'ಪಿಟಿಐ' ಸುದ್ದಿ ಸಂಸ್ಥೆಗೆ ತಿಳಿಸಿದರು.

'ನಮ್ಮ ಸುತ್ತಲೂ ಹಲವಾರು ಕ್ಷುದ್ರಗ್ರಹಗಳು ಮತ್ತು ಧೂಮಕೇತುಗಳಿವೆ. ಅವುಗಳೆಲ್ಲ ಸೂರ್ಯನ ಸುತ್ತ ಸುತ್ತುತ್ತಿವೆ. ಅವುಗಳಲ್ಲಿ ಕೆಲವೇ ಕೆಲವು ಭೂಮಿಗೆ ಅಪ್ಪಳಿಸಿ ಅಪಾಯ ತಂದೊಡ್ಡಬಹುದು. ಭವಿಷ್ಯದಲ್ಲಿ ಅಂತಹ ಕ್ಷುದ್ರಗ್ರಹಗಳಿಂದ ಭೂಮಿಗೆ ಯಾವುದೇ ಅಪಾಯ ಎದುರಾಗಬಾರದು ಎಂಬ ಕಾರಣಕ್ಕೆ ಈ ಪರೀಕ್ಷೆ ನಡೆದಿದೆ' ಎಂದರು.

'ಭೂಮಿಯಿಂದ ಬಹುದೂರದಲ್ಲಿರುವ ಕ್ಷುದ್ರಗ್ರಹವೊಂದರ ಪಥವನ್ನು ಸ್ವಲ್ಪ ಬದಲಿಸಿದರೂ ಅದು ಭೂಮಿಗೆ ಅಪ್ಪಳಿಸುವ ಸಾಧ್ಯತೆ ಇರುವುದಿಲ್ಲ. ಹೀಗಾಗಿ ಇಂತಹ ಪ್ರಯೋಗಗಳು ಅಗತ್ಯ' ಎಂದು ನಾಸಾದ ಜೆಟ್ ಪ್ರೊಪುಲ್ಷನ್ ಲ್ಯಾಬರೋಟರಿಯ ವಿಜ್ಞಾನಿ ಗೌತಮ್ ಚಟ್ಟೋಪಾಧ್ಯಾಯ ಹೇಳಿದರು.

ಮೊಬೈಲ್ ಗೇಮ್ ಕಂಪನಿ ಮೇಲೆ ಇ.ಡಿ ದಾಳಿ: ₹68 ಕೋಟಿ ಜಪ್ತಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಸಂಬಂಧ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ಕೋಡಾ ಪೇಮೆಂಟ್ಸ್ ಇಂಡಿಯಾ ಪ್ರೈ.ಲಿ (ಸಿಪಿಐಪಿಎಲ್) ಹೆಸರಿನ ಆನ್‌ಲೈನ್ ಮೊಬೈಲ್ ಗೇಮ್ ಕಂಪನಿ ಹಾಗೂ ಅದಕ್ಕೆ ಸೇರಿದ ಮೂರು ಸ್ಥಳಗಳ ಮೇಲೆ ದಾಳಿ ನಡೆಸಿ ₹68 ಕೋಟಿಗೂ ಅಧಿಕ ಮೊತ್ತ ಜಪ್ತಿ ಮಾಡಿದೆ.

'ಗರೇನಾ ಫ್ರೀ ಫೈರ್, ತೀನ್ ಪತ್ತಿ ಗೋಲ್ಡ್ ಸೇರಿ ಇತರೆ ಮೊಬೈಲ್ ಗೇಮ್‌ಗಳನ್ನು ನಡೆಸುತ್ತಿದ್ದ ಈ ಕಂಪನಿಯು ಮಕ್ಕಳು ಸೇರಿ ತನ್ನ ಬಳಕೆದಾರರಿಂದ ಅನಧಿಕೃತವಾಗಿ ಹಣ ಸಂಗ್ರಹಿಸುತ್ತಿತ್ತು. ಕಂಪನಿ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿದ್ದವು. ಕಂಪನಿಯು ₹2,850 ಕೋಟಿ ಹಣ ಸಂಗ್ರಹಿಸಿದ್ದು, ಈ ಪೈಕಿ ₹2,265 ಕೋಟಿ ಮೊತ್ತ ವಿದೇಶಗಳಿಗೆ ರವಾನಿಸಿತ್ತು' ಎಂದು ಇ.ಡಿ ಹೇಳಿದೆ.

ರೈಲ್ವೆ ಎಂಜಿನಿಯರ್ ಬಂಧನ

ನವದೆಹಲಿ (ಪಿಟಿಐ): ಕೋಲ್ಕತ್ತ ಮೂಲದ ಖಾಸಗಿ ಕಂಪನಿಯೊದರ ಬಿಲ್‌ಗಳ ಪಾವತಿ ಸಂಬಂಧ ₹ 1 ಲಕ್ಷ ಲಂಚ ಪಡೆದ ಆರೋಪದ ಮೇರೆಗೆ ಮುಂಬೈನ ಕೇಂದ್ರೀಯ ರೈಲ್ವೆಯ ಮುಖ್ಯ ಮೆಕಾನಿಕಲ್ ಎಂಜಿನಿಯರ್ ಅಶೋಕ್ ಕುಮಾರ್ ಗುಪ್ತಾ ಅವರನ್ನು ಸಿಬಿಐ ಬಂಧಿಸಿದೆ ಎಂದು ಮಂಗಳವಾರ ಅಧಿಕಾರಿಗಳು ತಿಳಿಸಿದ್ದಾರೆ.

1985ರ ಭಾರತೀಯ ರೈಲ್ವೆ ಸೇವೆಯ ಮೆಕಾನಿಕಲ್ ಎಂಜಿನಿಯರಿಂಗ್ (ಐಆರ್‌ಎಸ್‌ಎಂಇ) ಅಧಿಕಾರಿಯಾದ ಗುಪ್ತಾ ಅವರು ಛತ್ರಪತಿ ಶಿವಾಜಿ ಟರ್ಮಿನಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಗುಪ್ತಾ ಪರವಾಗಿ ಅವರ ಚಾಲಕ ₹ 1 ಲಕ್ಷ ಲಂಚ ಪಡೆದ ಬೆನ್ನಲ್ಲೇ ಗುಪ್ತಾ ಅವರನ್ನೂ ಬಂಧಿಸಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಧಿಕಾರಿಯ ಕಚೇರಿ ಸೇರಿ ಇತರ ಪ್ರದೇಶಗಳ ಮೇಲೆ ಸಿಬಿಐ ದಾಳಿ ನಡೆಸಿ ಅಪಾರ ಆಸ್ತಿ ಮತ್ತು ವಿದೇಶದಲ್ಲಿ ಬ್ಯಾಂಕ್ ಖಾತೆಗಳನ್ನು ಪತ್ತೆ ಮಾಡಿದೆ.

'ದಾಳಿ ವೇಳೆ ಸುಮಾರು ₹ 23 ಲಕ್ಷ ನಗದು, ವಜ್ರ ಸೇರಿ ₹ 40 ಲಕ್ಷ ಮೌಲ್ಯದ ಆಭರಣಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಸಿಬಿಐ ವಕ್ತಾರರು ತಿಳಿಸಿದ್ದಾರೆ.

₹ 8 ಕೋಟಿ ಮೊತ್ತದ ಹೂಡಿಕೆಗಳು, ನೊಯ್ಡಾ, ಹರಿದ್ವಾರ, ಡೆಹ್ರಾಡೂನ್, ದೆಹಲಿಯಲ್ಲಿ ₹ 5 ಕೋಟಿ ಮೌಲ್ಯದ ಮನೆ ಮತ್ತು ನಿವೇಶನ ಪತ್ತೆ ಆಗಿದೆ. ಜತೆಗೆ ಸಿಂಗಾಪುರದಲ್ಲಿ ಮೂರು ಬ್ಯಾಂಕ್ ಖಾತೆಗಳು ಮತ್ತು ಅಮೆರಿಕದಲ್ಲಿ 2 ಲಕ್ಷ ಡಾಲರ್‌ಗಳಷ್ಟು ಠೇವಣಿ ಮೊತ್ತ ಪತ್ತೆ ಹಚ್ಚಲಾಗಿದೆ. ಆರೋಪಿ ಮತ್ತು ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ಎನ್‌ಆರ್‌ಐ ಖಾತೆಗಳು, ಇತರ ಬ್ಯಾಂಕ್ ಖಾತೆಗಳು ಇರುವುದು ಪತ್ತೆಯಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕೋಲ್ಕತ್ತ ಮೂಲದ ಆನಂದ್ ಸೇಲ್ಸ್ ಕಾರ್ಪೊರೇಷನ್ ಕಂಪನಿಯ ಪಾಲುದಾರ ಆದಿತ್ಯ ಟಿಬ್ರೆವಾಲ್, ಗುಪ್ತಾ ಅವರ ಚಾಲಕ ಅಬ್ದುಲ್ ಕಲಾಂ ಶೇಖ್ ಅವರನ್ನು ಸಿಬಿಐ ಬಂಧಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಜೈಶಂಕರ್ ಹೇಳಿಕೆ ತಿರಸ್ಕರಿಸಿದ ಪಾಕ್

ಇಸ್ಲಾಮಾಬಾದ್ (ಪಿಟಿಐ): 'ಅಮೆರಿಕದ ಜತೆಗಿನ ನಮ್ಮ ಸಂಬಂಧದ ಬಗ್ಗೆ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಮಾಡಿರುವ ಟೀಕೆ ಅನಗತ್ಯವಾದುದು. ಈ ಪ್ರದೇಶದಲ್ಲಿ ಶಾಂತಿ ಮತ್ತು ಭದ್ರತೆಗಾಗಿ ಉಭಯ ದೇಶಗಳ ನಡುವಿನ ಸಂಬಂಧಗಳು ಅತ್ಯಗತ್ಯ' ಎಂದು ಪಾಕಿಸ್ತಾನ ಮಂಗಳವಾರ ಹೇಳಿದೆ.

ವಾಷಿಂಗ್ಟನ್‌ನಲ್ಲಿ ಸಚಿವ ಎಸ್. ಜೈಶಂಕರ್ ಅವರು, ಪಾಕ್‌ಗೆ ಅಮೆರಿಕ ಎಫ್ 16 ಯುದ್ಧ ವಿಮಾನ ನೀಡುತ್ತಿರುವ ಬಗ್ಗೆ ಮಾಡಿರುವ ಟೀಕೆಗೆ ಪಾಕಿಸ್ತಾನ ವಿದೇಶಾಂಗ ಸಚಿವಾಲಯದ ಕಚೇರಿ ಈ ಪ್ರತಿಕ್ರಿಯೆ ನೀಡಿದೆ.

ದೋಣಿ ದುರಂತ: 68ಕ್ಕೆ ಏರಿದ ಸಾವು

ಢಾಕಾ (ಪಿಟಿಐ): ಬಾಂಗ್ಲಾದೇಶದ ಪಂಚಗಡ ಜಿಲ್ಲೆಯ ಕೊರೊಟೊ ನದಿಯಲ್ಲಿ ಭಾನುವಾರ ದೋಣಿ ಮುಗುಚಿ ಸಂಭವಿಸಿದ್ದ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ ಮಂಗಳವಾರ 68ಕ್ಕೆ ಏರಿಕೆಯಾಗಿದೆ. ಇನ್ನೂ 20 ಪ್ರಯಾಣಿಕರು ನಾಪತ್ತೆಯಾಗಿದ್ದಾರೆ.

ಮೂರನೇ ದಿನವೂ ನಡೆದ ರಕ್ಷಣಾ ಕಾರ್ಯಾಚರಣೆ ವೇಳೆ 14 ಮೃತದೇಹಗಳನ್ನು ಹೊರ ತೆಗೆಯಲಾಗಿದೆ ಎಂದು 'ಢಾಕಾ ಟ್ರಿಬ್ಯೂನ್' ವರದಿ ಮಾಡಿದೆ.

ದೋಣಿಯಲ್ಲಿ 80 ಜನರಿದ್ದರು ಎಂದು ಮೊದಲ ಎರಡು ದಿನ ಅಂದಾಜಿಸಲಾಗಿತ್ತು. ಆದರೆ ಅದರಲ್ಲಿ 150ಕ್ಕೂ ಅಧಿಕ ಜನರಿದ್ದರು ಎಂದು ಪ್ರತ್ಯಕ್ಷದರ್ಶಿಗಳು ಹೇಳಿಕೊಂಡಿದ್ದಾರೆ. ದುರಂತ ಸಂಭವಿಸುತ್ತಲೇ ಕೆಲವರು ಈಜಿ ದಡ ಸೇರಿದ್ದಾರೆ ಎಂದು ಹೇಳಲಾಗಿದೆ.

ಫುಟ್‌ಬಾಲ್: ಎಫ್‌ಸಿಬಿಯುಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಹಣಾಹಣಿಯಲ್ಲಿ ಎಫ್‌ಸಿಬಿಯು 3–0ಯಿಂದ ಕೊಡಗು ಎಫ್‌ಸಿ ಎದುರು ಗೆದ್ದಿತು. ವಿಜೇತ ತಂಡದ ಪರ ಇರ್ಫಾನ್ ಯಾದವಾಡ (5ನೇ ನಿಮಿಷ), ಜೈರೊ ರಾಡ್ರಿಗಸ್ ಪೆಕ್ಸೊಟೊ (39ನೇ ನಿ.) ಮತ್ತು ಷಹಜಾನ್ ಫ್ರಾಂಕ್ಲಿನ್ (51ನೇ ನಿ.) ಗೋಲು ಗಳಿಸಿದರು.

ಇನ್ನುಳಿದ ಪಂದ್ಯಗಳಲ್ಲಿ ರೂಟ್ಸ್ ಎಫ್‌ಸಿ 2–0ಯಿಂದ ಎಡಿಇ ಎಫ್‌ಸಿ ಎದುರು ಜಯ ಸಾಧಿಸಿದರೆ, ಕಿಕ್‌ಸ್ಟಾರ್ಟ್ ಎಫ್‌ಸಿ 4–3ರಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎದುರು ಗೆದ್ದಿತು.

ಬುಧವಾರ ನಡೆಯುವ ಮೊದಲ ಪಂದ್ಯದಲ್ಲಿ ರೆಬೆಲ್ಸ್ ಎಫ್‌ಸಿ– ಎಂಇಜಿ ಸೆಂಟರ್ ಮುಖಾಮುಖಿಯಾಗಲಿವೆ. ಎರಡನೇ ಪಂದ್ಯದಲ್ಲಿ ಬೆಂಗಳೂರು ಈಗಲ್ಸ್– ಎಎಸ್‌ಸಿ ಸೆಂಟರ್ ಸೆಣಸಲಿವೆ.



ಎಡಿಇ ಎಫ್‌ಸಿ ತಂಡದ ಪಿ. ಸಂದೀಪ್ ಕೃಷ್ಣ (ಎಡ) ಮತ್ತು ರೂಟ್ಸ್ ಎಫ್‌ಸಿಯ ಹರಿಕೃಷ್ಣ ಎಂ.ಅವರು ಚೆಂಡಿನ ಮೇಲೆ ಹತೋಟಿ ಸಾಧಿಸಲು ಪ್ರಯತ್ನಿಸಿದರು– ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ಧನ್

'ಸುಪ್ರೀಂ'ನ ಸಾಂವಿಧಾನಿಕ ಪೀಠದ ಕಲಾಪಗಳ ನೇರ ಪ್ರಸಾರಕ್ಕೆ ಚಾಲನೆ

ನವದೆಹಲಿ (ಪಿಟಿಐ): ಇದೇ ಮೊದಲ ಬಾರಿಗೆ, ಸುಪ್ರೀಂ ಕೋರ್ಟ್ ಸಾಂವಿಧಾನಿಕ ಪೀಠದ ಕಲಾಪಗಳ ನೇರ ಪ್ರಸಾರಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಈ ಕಲಾಪಗಳನ್ನು webcast.gov.in/scindia/ ನಲ್ಲಿ ವೀಕ್ಷಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ನ್ಯಾಯಾಲಯದ ಕಲಾಪಗಳನ್ನು ನೇರ ಪ್ರಸಾರ ಮಾಡಲಿರುವ ಸುಪ್ರೀಂಕೋರ್ಟ್, ನಂತರ ಕಲಾಪಗಳ ವಿಡಿಯೊಗಳನ್ನು ತನ್ನ ಸರ್ವರ್‌ನಲ್ಲಿ ಅಳವಡಿಸಲಿದೆ. ಹೀಗಾಗಿ, ಜನರು ತಮ್ಮ ಮೊಬೈಲ್ ಫೋನ್, ಲ್ಯಾಪ್‌ಟಾಪ್ ಹಾಗೂ ಕಂಪ್ಯೂಟರ್‌ನಲ್ಲಿ ಈ ಕಲಾಪಗಳನ್ನು ವೀಕ್ಷಿಸಬಹುದಾಗಿದೆ ಎಂದು ಮೂಲಗಳು ಹೇಳಿವೆ.

'ಯೂಟ್ಯೂಬ್ ಮೂಲಕ ಬದಲಾಗಿ, ಕಲಾಪಗಳ ನೇರ ಪ್ರಸಾರಕ್ಕೆ ನ್ಯಾಯಾಲಯ ತಮ್ಮದೇ ಆದ ವೇದಿಕೆಯೊಂದನ್ನು ಶೀಘ್ರವೇ ಹೊಂದಲಿದೆ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಸೋಮವಾರ ಹೇಳಿದ್ದರು.

'ಸಾಂವಿಧಾನಿಕ ಮಹತ್ವ ಹೊಂದಿದ ವಿಷಯಗಳಿಗೆ ಸಂಬಂಧಿಸಿದ ಕಲಾಪಗಳನ್ನು ಟೆಲಿಕಾಸ್ಟ್ ಅಥವಾ ವೆಬ್‌ಕಾಸ್ಟ್ ಮೂಲಕ ನೇರ ಪ್ರಸಾರ ಮಾಡಬೇಕು' ಎಂದು ನಿವೃತ್ತ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರು 2018ರ ಸೆಪ್ಟೆಂಬರ್ 27ರಂದು ಐತಿಹಾಸಿಕ ತೀರ್ಪು ನೀಡಿದ್ದರು.

3.97 ಲಕ್ಷ ಅನರ್ಹರಿಗೆ ₹442 ಕೋಟಿ

ಒಂದನೇ ಪುಟದಿಂದ

'ಸುಮಾರು 3.83 ಲಕ್ಷ ರೈತರು ಸ್ವಯಂ ನೋಂದಣಿಯಡಿ ಪಿಎಂ–ಕಿಸಾನ್ ಯೋಜನೆ ಫಲಾನುಭವಿಗಳಾಗಲು ಹೆಸರು ನೋಂದಾಯಿಸಿದ್ದರು. ಆದರೆ, ಚಿತ್ರದುರ್ಗ ಜಿಲ್ಲೆಯೊಂದರಲ್ಲೇ ಅಸ್ವಾಭಾವಿಕವಾಗಿ ಅತ್ಯಧಿಕ ನೋಂದಣಿಯಾಗಿದೆ. ಇದರಿಂದಾಗಿ ನೋಂದಣಿ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸುವಂತೆ ಸೂಚಿಸಲಾಗಿದೆ ಎಂದು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಗೆ ಬರೆದ ಪತ್ರದಲ್ಲಿ ತಿಳಿಸಲಾಗಿದೆ' ಎಂದರು.

'ಸ್ವಯಂ ನೋಂದಣಿ ಮಾಡಿದವರ ಪೈಕಿ 1.06 ಲಕ್ಷ ರೈತರು ಅನರ್ಹರು ಎಂದು ಪತ್ತೆ ಆಯಿತು. ಈಗ ಸ್ವಯಂ ನೋಂದಣಿ ಅವಕಾಶ ಇಲ್ಲ' ಎಂದೂ ಶರತ್ ಹೇಳಿದರು.

ಸರ್ಕಾರ 91,969 ಮಂದಿ ಫಲಾನುಭವಿಗಳು ಆದಾಯ ತೆರಿಗೆ ಪಾವತಿ ಮಾಡುತ್ತಿರುವವರನ್ನು ಪತ್ತೆ ಮಾಡಿತು. 1.99 ಲಕ್ಷ ಭೂ ಹಿಡುವಳಿದಾರರು ಈ ಯೋಜನೆ ವ್ಯಾಪ್ತಿಗೆ ಬರುವುದಿಲ್ಲ.

ಅನರ್ಹರಿಗೆ ನೀಡಲಾಗಿದ್ದ ಮೊತ್ತದಲ್ಲಿ ಇಲ್ಲಿಯವರೆಗೆ ₹7.26 ಕೋಟಿ ಹಣವನ್ನು ವಸೂಲಿ ಮಾಡಿದೆ. ರಾಜ್ಯದಲ್ಲಿ 58.42 ಲಕ್ಷ ರೈತರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿಶ್ವಕಪ್ ಹಾಕಿ: ಭಾರತಕ್ಕೆ ಸ್ಪೇನ್ ಮೊದಲ ಎದುರಾಳಿ

ನವದೆಹಲಿ (ಪಿಟಿಐ): ಆತಿಥೇಯ ಭಾರತ ತಂಡವು ಪುರುಷರ ವಿಶ್ವಕಪ್ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ.

ರೂರ್ಕೆಲಾದ ಬಿರ್ಸಾ ಮುಂಡಾ ಕ್ರೀಡಾಂಗಣದಲ್ಲಿ ಟೂರ್ನಿಯ ಮೊದಲ ದಿನವಾದ ಜನವರಿ 13ರಂದು (2023) ಈ ಪಂದ್ಯ ನಡೆಯಲಿದೆ. ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ, ಇಂಗ್ಲೆಂಡ್, ಸ್ಪೇನ್ ಮತ್ತು ವೇಲ್ಸ್ ತಂಡಗಳಿರುವ ಡಿ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಆರವ್ ಮುನ್ನಡೆ

ಬೆಂಗಳೂರು: ಉತ್ತರ ಪ್ರದೇಶದ ಆರವ್ ಡಿ. ಶಾ ಅವರು ಇಲ್ಲಿ ನಡೆಯುತ್ತಿರುವ ಐಜಿಯು ಬಯೊಜೆನ್ ರೋಟರಿ ಸದರ್ನ್ ಇಂಡಿಯಾ ಅಮೆಚೂರ್ ಗಾಲ್ಫ್ ಚಾಂಪಿಯನ್‌ಷಿಪ್‌ನ ಮೊದಲ ದಿನ ಮುನ್ನಡೆ ಸಾಧಿಸಿದರು.

ಮಂಗಳವಾರ ಆರಂಭವಾದ ಟೂರ್ನಿಯಲ್ಲಿ ಕರ್ನಾಟಕದ ಮಿಥಿಲ್ ಎಂ.ಜಿ. ಮತ್ತು ದೆಹಲಿಯ ಶೌರ್ಯ ಭಟ್ಟಾಚಾರ್ಯ ಜಂಟಿ ಎರಡನೇ ಸ್ಥಾನದಲ್ಲಿದ್ದರು.

ಹರ್ಮನ್‌ಪ್ರೀತ್‌ಗೆ ಐದನೇ ಸ್ಥಾನ

ದುಬೈ (ಪಿಟಿಐ): ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಬ್ಯಾಟರ್‌ಗಳ ಪಟ್ಟಿಯಲ್ಲಿ ನಾಲ್ಕು ಕ್ರಮಾಂಕ ಮೇಲಕ್ಕೇರಿ, ಐದನೇ ಸ್ಥಾನ ಗಳಿಸಿದ್ದಾರೆ.

ಇಂಗ್ಲೆಂಡ್ ಎದುರಿನ ಸರಣಿಯನ್ನು 3–0 ರಲ್ಲಿ ಗೆದ್ದುಕೊಂಡ ಭಾರತ ತಂಡದಲ್ಲಿದ್ದ ಹಲವರು ರ‍್ಯಾಂಕಿಂಗ್‌ನಲ್ಲಿ ಮೇಲಕ್ಕೇರಿದ್ದಾರೆ. ಎರಡನೇ ಏಕದಿನ ಪಂದ್ಯದಲ್ಲಿ ಕೌರ್ ಅವರು 111 ಎಸೆತಗಳಲ್ಲಿ 143 ರನ್ ಗಳಿಸಿದ್ದರು.

ಬ್ಯಾಟರ್‌ಗಳ ಪಟ್ಟಿಯಲ್ಲಿ ಸ್ಮೃತಿ ಮಂದಾನ ಮತ್ತು ದೀಪ್ತಿ ಶರ್ಮಾ ಅವರು ಕ್ರಮವಾಗಿ ಆರು ಹಾಗೂ 24ನೇ ಸ್ಥಾನದಲ್ಲಿದ್ದಾರೆ.

ಫುಟ್‌ಬಾಲ್: ಭಾರತ ಪರಾಭವ

ಹೊ ಚಿ ಮಿನ್ ಸಿಟಿ (ಪಿಟಿಐ): ಭಾರತ ತಂಡ ಮಂಗಳವಾರ ಇಲ್ಲಿ ನಡೆದ ಸೌಹಾರ್ದ ಫುಟ್‌ಬಾಲ್ ಪಂದ್ಯದಲ್ಲಿ ವಿಯೆಟ್ನಾಂ ಕೈಯಲ್ಲಿ 0–3 ಗೋಲುಗಳಿಂದ ಪರಾಭವಗೊಂಡಿತು.

ಫಿಫಾ ರ‍್ಯಾಂಕಿಂಗ್‌ನಲ್ಲಿ 104ನೇ ಸ್ಥಾನದಲ್ಲಿರುವ ಭಾರತ, ತನಗಿಂತ ಮೇಲಿನ ಸ್ಥಾನದಲ್ಲಿರುವ (97) ಎದುರಾಳಿಗಳಿಗೆ ತಕ್ಕ ಪೈಪೋಟಿ ನೀಡಲು ವಿಫಲವಾಯಿತು.

ಉದ್ಯೋಗ ವಾಣಿ

ಟಿ20 ಕ್ರಿಕೆಟ್: ಭಾರತ–ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಮೊದಲ ಹಣಾಹಣಿ ಇಂದು

ವಿಶ್ವಕಪ್‌ಗೆ 'ಪೂರ್ವಾಭ್ಯಾಸ'ದ ವೇದಿಕೆ

ತಿರುವನಂತಪುರ (ಪಿಟಿಐ): ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಜಯ ಸಾಧಿಸಿದರೂ ಭಾರತ ತಂಡಕ್ಕೆ ಇನ್ನೂ ಒಂದು ಕೊರಗು ಉಳಿದುಕೊಂಡಿದೆ.

ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ರನ್‌ಗಳನ್ನು ನಿಯಂತ್ರಿಸುವಲ್ಲಿ ಬೌಲರ್‌ಗಳು ಇನ್ನೂ ಸಿದ್ಧರಾಗದಿರುವುದು ನಾಯಕ ರೋಹಿತ್ ಶರ್ಮಾ ಅವರ ಚಿಂತೆ ಹೆಚ್ಚಿಸಿದೆ. ಮುಂದಿನ ತಿಂಗಳು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ಮುನ್ನ ಈ ದೌರ್ಬಲ್ಯಕ್ಕೆ ಪರಿಹಾರ ಕಂಡುಕೊಳ್ಳಲು ಉಳಿದಿರುವುದು ಒಂದೇ ದಾರಿ. ಅದು ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಲಿರುವ ಮೂರು ಪಂದ್ಯಗಳ ಟಿ20 ಸರಣಿ.

ಬುಧವಾರ ಮೊದಲ ಪಂದ್ಯ ನಡೆಯಲಿದೆ. ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಹಾಗೂ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಹಾರ್ದಿಕ್ ಯಶಸ್ವಿಯಾಗಿದ್ದರು. ಆದರೆ ಭುವನೇಶ್ವರ್ ಬೌಲಿಂಗ್ ಲಯ ಕಂಡುಕೊಳ್ಳುವಲ್ಲಿ ಸಫಲರಾಗಿರಲಿಲ್ಲ. ಅದರಲ್ಲೂ ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ಹೆಚ್ಚು ದಂಡನೆಗೆ ಒಳಗಾಗಿದ್ದರು.

ದಕ್ಷಿಣ ಆಫ್ರಿಕಾ ಎದುರಿನ ಸರಣಿಯು ಬೌಲರ್‌ಗಳಾದ ಅರ್ಷದೀಪ್ ಸಿಂಗ್, ಅನುಭವಿ ಬೂಮ್ರಾ, ದೀಪಕ್ ಚಾಹರ್ ಅವರಿಗೆ ಪರೀಕ್ಷೆಯ ಕಣವಾಗಲಿದೆ. ಬ್ಯಾಟಿಂಗ್‌ನಲ್ಲಿ ಆರಂಭಿಕ ಕೆ.ಎಲ್. ರಾಹುಲ್ ಲಯ ಕಂಡುಕೊಳ್ಳಲೇಬೇಕಾದ ಅನಿವಾರ್ಯತೆ ಇದೆ. ವಿರಾಟ್ ಫಾರ್ಮ್‌ಗೆ ಮರಳಿರುವುದು, ಸೂರ್ಯಕುಮಾರ್ ಅಬ್ಬರಿಸುತ್ತಿರುವುದು, ರೋಹಿತ್ ಕೂಡ ಸಿಕ್ಸರ್‌ಗಳನ್ನು ಸಿಡಿಸುತ್ತಿರುವುದು ಸಮಾಧಾನದ ವಿಷಯ. ಆದರೆ ಈ ಸರಣಿಯಲ್ಲಿ ಹಾರ್ದಿಕ್ ಅನುಪಸ್ಥಿತಿಯಲ್ಲಿ ರಿಷಭ್ ಅಥವಾ ದಿನೇಶ್ ಅವರು ಮಧ್ಯಮಕ್ರಮಾಂಕಕ್ಕೆ ಬಲ ತುಂಬಬೇಕು.

ತೆಂಬಾ ಬವುಮಾ ನಾಯಕತ್ವದ ಪ್ರವಾಸಿ ಬಳಗದ ಬೌಲರ್‌ಗಳಾದ ಎನ್ರಿಚ್, ಲುಂಗಿ ಹಾಗೂ ರಬಾಡ ಅವರ ಚಾಣಾಕ್ಷ ದಾಳಿ ಎದುರಿಸುವುದು ಆತಿಥೇಯರಿಗೆ ಪ್ರಮುಖ ಸವಾಲಾಗಲಿದೆ.



ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ –ಪಿಟಿಐ ಚಿತ್ರ

ರೋಹಿತ್ ಶರ್ಮಾ – ಪಿಟಿಐ ಚಿತ್ರ

'ಪವರ್‌ಪ್ಲೇ ಅವಧಿಯಲ್ಲಿ ಭಾರತದ ಬೌಲರ್‌ಗಳನ್ನು ಎದುರಿಸುವುದು ಸವಾಲಾಗಲಿದೆ. ಹೊಸ ಚೆಂಡಿನಲ್ಲಿ ಅವರು ಹೆಚ್ಚು ಸ್ವಿಂಗ್ ಮಾಡಬಲ್ಲರು.
ತೆಂಬಾ ಬವುಮಾ

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ದಿನೇಶ್ ಕಾರ್ತಿಕ್ (ಇಬ್ಬರೂ ವಿಕೆಟ್‌ಕೀಪರ್), ಆರ್. ಅಶ್ವಿನ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಶ್ರೇಯರ್ ಅಯ್ಯರ್, ಶಹಬಾಜ್ ಅಹಮ್ಮದ್ ಅರ್ಷದೀಪ್ ಸಿಂಗ್, ಹರ್ಷಲ್ ಪಟೇಲ್, ದೀಪಕ್ ಚಾಹರ್, ಜಸ್‌ಪ್ರೀತ್ ಬೂಮ್ರಾ.
ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಕ್ವಿಂಟನ್ ಡಿಕಾಕ್, ಬಿಜಾರ್ನ್ ಫಾರ್ಟ್ಯೂನ್, ರೀಜಾ ಹೆನ್ರಿಕ್ಸ್, ಹೆನ್ರಿಕ್ ಕ್ಲಾಸೆನ್, ಮಾರ್ಕೊ ಜಾನ್ಸೆನ್, ಕೇಶವ ಮಹಾರಾಜ್, ಏಡನ್ ಮರ್ಕರಂ, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ಎನ್ರಿಚ್ ನಾಕಿಯಾ, ವೇಯ್ನ್ ಪಾರ್ನೆಲ್, ಆ್ಯಂಡಿಲ್ ಪಿಶುವಾಯೊ, ಡ್ವೆನ್ ಪ್ರಿಟೋರಿಯಸ್, ಕಗಿಸೊ ರಬಾಡ, ರಿಲಿ ರೊಸೊ, ತಬ್ರೇಜ್ ಶಮ್ಸಿ, ಟ್ರಿಸ್ಟನ್ ಸ್ಟಬ್ಸ್.

ಪಿಚ್ ಹೇಗಿದೆ?

ಪಂದ್ಯ ನಡೆಯಲಿರುವ ಗ್ರೀನ್‌ಫೀಲ್ಡ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಈ ಹಿಂದೆ ಎರಡು ಟಿ20 ಪಂದ್ಯಗಳು ನಡೆದಿವೆ. 2017ರಲ್ಲಿ ಭಾರತ ತಂಡವು ಇಲ್ಲಿ ನ್ಯೂಜಿಲೆಂಡ್ ಎದುರು ಜಯಿಸಿತ್ತು. 2019ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಸೋತಿತ್ತು.

ಪಂದ್ಯದಲ್ಲಿ ಟಾಸ್ ಗೆದ್ದವರು ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರೆ ಲಾಭವಾಗುವ ಸಾಧ್ಯತೆ ಹೆಚ್ಚಿದೆ. ಆರಂಭಿಕ ಓವರ್‌ಗಳಲ್ಲಿ ಬೌಲರ್‌ಗಳಿಗೆ ಯಶಸ್ಸು ಸಿಗುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಪರಿವೀಕ್ಷಕರಾಗಿ ಬೆಳಗಾವಿಯ ಅವಿನಾಶ



ಬೆಳಗಾವಿ: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯ ಧಾರವಾಡ ವಲಯದ ನಿಮಂತ್ರಕ ಅವಿನಾಶ ಪೋತದಾರ ಅವರನ್ನು ತಿರುವನಂತಪುರದಲ್ಲಿ ನಡೆಯಲಿರುವ ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ನಡುವಿನ ಟಿ-20 ಪಂದ್ಯದ ಪರಿವೀಕ್ಷಕರಾಗಿ ನೇಮಕ ಮಾಡಲಾಗಿದೆ.

ಬೆಳಗಾವಿಯವರಾದ ಅವಿನಾಶ ಪೋತದಾರ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಆಯ್ಕೆ ಮಾಡಿದೆ.

ವಿಶ್ವ ಕೆಡೆಟ್ಸ್ ಚೆಸ್: ಚಾರ್ವಿಗೆ ಪ್ರಶಸ್ತಿ

8 ವರ್ಷದೊಳಗಿನ ವಿಭಾಗದಲ್ಲಿ ರಾಜ್ಯದ ಬಾಲಕಿ ಸಾಧನೆ

• ಮಹಮ್ಮದ್ ನೂಮಾನ್

ಬೆಂಗಳೂರು: ಚತುರ ಆಟವಾಡಿದ ಕರ್ನಾಟಕದ ಎ.ಚಾರ್ವಿ ಅವರು ಜಾರ್ಜಿಯದ ಬಟುಮಿಯಲ್ಲಿ ಮಂಗಳವಾರ ಕೊನೆಗೊಂಡ ವಿಶ್ವ ಕೆಡೆಟ್ಸ್ ಚೆಸ್ ಚಾಂಪಿಯನ್‌ಷಿಪ್‌ನ ಬಾಲಕಿಯರ 8 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಚಾರ್ವಿ ಅವರು 11 ಸುತ್ತುಗಳಲ್ಲಿ 9.5 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. ಇಂಗ್ಲೆಂಡ್‌ನ ಬೋಧನಾ ಶಿವಾನಂದನ್ ಕೂಡಾ 9.5 ಪಾಯಿಂಟ್ಸ್ ಕಲೆಹಾಕಿದ್ದರು. ಆದರೆ ಟೈಬ್ರೇಕರ್‌ನಲ್ಲಿ ಚಾಂಪಿಯನ್‌ಪಟ್ಟ ಚಾರ್ವಿಗೆ ಒಲಿಯಿತು.

ಚಾರ್ವಿ 9 ಗೇಮ್‌ಗಳಲ್ಲಿ ಗೆಲುವು ಪಡೆದರೆ, ಒಂದನ್ನು ಡ್ರಾ ಮಾಡಿಕೊಂಡರು. ಒಂದರಲ್ಲಿ ಸೋತರು. ಎಂಟನೇ ಸುತ್ತಿನಲ್ಲಿ ಕಜಕಸ್ತಾನದ ಶೊಲ್ಪನ್‌ಬೆಕ್ ಜನ್ಸಯಾ ಎದುರು ಪರಾಭವಗೊಂಡರು.

10 ಸುತ್ತುಗಳ ಬಳಿಕ ಅವರು ಎರಡನೇ ಸ್ಥಾನದಲ್ಲಿದ್ದರು. ಪ್ರಶಸ್ತಿ ಗೆಲ್ಲಲು ಕೊನೆಯ ಗೇಮ್‌ನಲ್ಲಿ ಗೆಲುವು ಅನಿವಾರ್ಯವಾಗಿತ್ತು. ಮಂಗಳವಾರ ನಡೆದ 11ನೇ ಸುತ್ತಿನಲ್ಲಿ ರಷ್ಯಾದ ಕುರಯೆವಾ ಸೋಫಿಯಾ ಎದುರು ಗೆದ್ದರು.

ಬೆಂಗಳೂರಿನಲ್ಲಿ ನೆಲೆಸಿರುವ ಶ್ರವಣಬೆಳಗೊಳದ ಸಾಫ್ಟ್‌ವೇರ್ ಎಂಜಿನಿಯರ್‌ಗಳಾದ ಅನಿಲ್‌ಕುಮಾರ್ ಮತ್ತು ಅಖಿಲಾ ಅವರ ಪುತ್ರಿ ಚಾರ್ವಿ, ಇಲ್ಲಿನ ಹೆಗ್ಡೆನಗರದಲ್ಲಿರುವ ಕ್ಯಾಪಿಟಲ್ ಪಬ್ಲಿಕ್ ಸ್ಕೂಲ್‌ನಲ್ಲಿ 3ನೇ ತರಗತಿಯಲ್ಲಿ ಕಲಿಯುತ್ತಿದ್ದಾರೆ.



ಟ್ರೋಫಿ, ಪದಕದೊಂದಿಗೆ ಚಾರ್ವಿ

'ಮಗಳ ಸಾಧನೆ ಖುಷಿ ತಂದಿದೆ. 83 ಸ್ಪರ್ಧಿಗಳಿದ್ದ ಕಣದಲ್ಲಿ ಸಾಕಷ್ಟು ಪೈಪೋಟಿಯ ನಡುವೆಯೂ ಆಕೆ ಗೆದ್ದಿದ್ದಾಳೆ' ಎಂದು ಅನಿಲ್‌ಕುಮಾರ್ ಜಾರ್ಜಿಯದಿಂದ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಮುಂದಿನ ತಿಂಗಳು ಇಂಡೊನೇಷ್ಯಾದಲ್ಲಿ ನಡೆಯಲಿರುವ ಏಷ್ಯನ್ ಯೂತ್ ಚಾಂಪಿಯನ್‌ಷಿಪ್‌ನಲ್ಲೂ ಆಕೆ ದೇಶವನ್ನು ಪ್ರತಿನಿಧಿಸುವಳು. ನವೆಂಬರ್‌ನಲ್ಲಿ ಶ್ರೀಲಂಕಾದಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಚೆಸ್ ಕೂಟದಲ್ಲೂ ಪಾಲ್ಗೊಳ್ಳಲಿದ್ದಾಳೆ' ಎಂದು ಅವರು ಹೇಳಿದರು.

ಕಳೆದ ವರ್ಷ ಪಶ್ಚಿಮ ಏಷ್ಯನ್ ಆನ್‌ಲೈನ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿದ್ದ ಚಾರ್ವಿ, ಈ ವರ್ಷದ ಆರಂಭದಿಂದಲೇ ಉತ್ತಮ ಪ್ರದರ್ಶನದಿಂದ ಸುದ್ದಿಯಾಗಿದ್ದರು. ಕ್ರಮವಾಗಿ ವಿಜಯವಾಡ ಮತ್ತು ಜಮ್ಮುವಿನಲ್ಲಿ ನಡೆದ 8 ವರ್ಷದೊಳಗಿನವರ ಹಾಗೂ 10 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕಿರೀಟ ಮುಡಿಗೇರಿಸಿಕೊಂಡಿದ್ದರು. ಜೂನ್ ತಿಂಗಳಲ್ಲಿ ನಡೆದ ರಾಜ್ಯ ಮುಕ್ತ ಚೆಸ್ ಟೂರ್ನಿಯಲ್ಲೂ ಚಾಂಪಿಯನ್ ಆಗಿದ್ದರು.

ಕರ್ನಾಟಕದ ಪ್ರಣವ್ ಆನಂದ್ ಕೆಲದಿನಗಳ ಹಿಂದೆಯಷ್ಟೇ 16 ವರ್ಷದೊಳಗಿನವರ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದು, ಗ್ರ್ಯಾಂಡ್ ಮಾಸ್ಟರ್ ಪದವಿ ಪಡೆದುಕೊಂಡಿದ್ದರು. ಇದೀಗ ಚಾರ್ವಿ ಅವರೂ ವಿಶ್ವ ಚಾಂಪಿಯನ್‌ಷಿಪ್ ಗೆದ್ದು ರಾಜ್ಯಕ್ಕೆ ಕೀರ್ತಿ ತಂದಿತ್ತಿದ್ದಾರೆ.

ಶುಭಿ ಚಾಂಪಿಯನ್: ಬಟುಮಿಯಲ್ಲಿ ನಡೆದ ಟೂರ್ನಿಯಲ್ಲಿ ಭಾರತದ ಶುಭಿ ಗುಪ್ತಾ ಅವರು 12 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು. ಗಾಜಿಯಾಬಾದ್‌ನ ಶುಭಿ, 11 ಸುತ್ತುಗಳಲ್ಲಿ 8.5 ಪಾಯಿಂಟ್ಸ್ ಗಳಿಸಿದರು. ಕೇರಳದ ಸಫಿನ್ ಸಫರುಲ್ಲಾ ಖಾನ್ 8 ವರ್ಷದೊಳಗಿನ ಓಪನ್ ವಿಭಾಗದಲ್ಲಿ ಕಂಚು ಗೆದ್ದರು.

ಮುಖ್ಯಾಂಶಗಳು

- ಜಾರ್ಜಿಯದ ಬಟುಮಿಯಲ್ಲಿ ನಡೆದ ಟೂರ್ನಿ
- 11 ಸುತ್ತುಗಳಲ್ಲಿ 9.5 ಪಾಯಿಂಟ್ಸ್
- ಒಂಬತ್ತು ಗೇಮ್‌ಗಳಲ್ಲಿ ಗೆಲುವು, ಒಂದರಲ್ಲಿ ಡ್ರಾ

ಹ್ಯಾನ್ಸ್ ಮೋಸದಾಟ: ಕಾರ್ಲ್‌ಸನ್ ಆರೋಪ

ನವದೆಹಲಿ (ಪಿಟಿಐ): ಅಮೆರಿಕದ ಚೆಸ್ ಆಟಗಾರ ಹ್ಯಾನ್ಸ್ ನೀಮನ್ ಅವರು ಮೋಸದ ಆಟ ಆಡುತ್ತಿದ್ದಾರೆ ಎಂದು ವಿಶ್ವದ ಅಗ್ರ ರ‍್ಯಾಂಕಿಂಗ್‌ನ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಆರೋಪಿಸಿದ್ದಾರೆ.

'ನೀಮನ್ ಅವರು ಬಹಿರಂಗವಾಗಿ ಏನು ತಪ್ಪು ಒಪ್ಪಿಕೊಂಡಿದ್ದಾರೋ, ಅದಕ್ಕಿಂತಲೂ ಹೆಚ್ಚು ಮೋಸದಾಟದಲ್ಲಿ ತೊಡಗಿದ್ದಾರೆ' ಎಂದು ಕಾರ್ಲ್‌ಸನ್ ಸೋಮವಾರ ಹೊರಡಿಸಿದ ಪ್ರಕಟಣೆಯಲ್ಲಿ ದೂರಿದ್ದಾರೆ.

ಇತ್ತೀಚೆಗೆ ನಡೆದ ಜೂಲಿಯಸ್ ಬೇರ್ ಜೆನರೇಷನ್ ಕಪ್ ಆನ್‌ಲೈನ್ ಚೆಸ್ ಟೂರ್ನಿಯಲ್ಲಿ ಕಾರ್ಲ್‌ಸನ್, 19 ವರ್ಷದ ನೀಮನ್ ವಿರುದ್ಧದ ಪಂದ್ಯದಲ್ಲಿ ಕೇವಲ ಒಂದು ನಡೆಯ ಬಳಿ ಹಿಂದೆ ಸರಿದಿದ್ದರು.

ಸೆಪ್ಟೆಂಬರ್ ಮೊದಲ ವಾರದಲ್ಲಿ ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿ ನಡೆದಿದ್ದ ಸಿಂಕ್‌ಫೀಲ್ಡ್ ಕಪ್ ಟೂರ್ನಿಯಲ್ಲಿ 31 ವರ್ಷದ ಕಾರ್ಲ್‌ಸನ್, ನೀಮನ್ ಎದುರು ಸೋತಿದ್ದರು. ಅಮೆರಿಕದ ಆಟಗಾರ ಮೋಸದ ಆಟವಾಡಿದ್ದಾರೆ ಎಂದು ಆರೋಪಿಸಿ, ಕಾರ್ಲ್‌ಸನ್ ಟೂರ್ನಿಯಿಂದ ಹಿಂದೆ ಸರಿದಿದ್ದರು.

'ಈ ಹಿಂದೆ 12 ವರ್ಷ ಮತ್ತು 16 ವರ್ಷದವನಾಗಿದ್ದಾಗ ಆಲ್‌ಲೈನ್ ಚೆಸ್ ಟೂರ್ನಿಯಲ್ಲಿ ಆಡುವಾಗ ಮೋಸ ಮಾಡಿದ್ದೆ' ಎಂದು ನೀಮನ್ ಒಪ್ಪಿಕೊಂಡಿದ್ದರು. ಆದರೆ ಆನ್‌ಲೈನ್ ಮಾತ್ರವಲ್ಲ, ಸಾಮಾನ್ಯ ಆಟದ ವೇಳೆಯೂ ಮೋಸ ಮಾಡುತ್ತಿದ್ದಾರೆ ಎಂಬುದು ಕಾರ್ಲ್‌ಸನ್ ಆರೋಪ.

ವಾಲಿಬಾಲ್: ಕರ್ನಾಟಕ ತಂಡಕ್ಕೆ ಜಯದ ಆರಂಭ

ಬೆಂಗಳೂರು: ಭರ್ಜರಿ ಆಟವಾಡಿದ ಕರ್ನಾಟಕ ವೃತ್ತ ತಂಡದವರು ಅಖಿಲ ಭಾರತ ಪೋಸ್ಟಲ್ (ಅಂಚೆ ಇಲಾಖೆ) ವಾಲಿಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾದ ಟೂರ್ನಿಯ ಲೀಗ್ ಹಂತದ ಪಂದ್ಯದಲ್ಲಿ ಕರ್ನಾಟಕ 25–9, 25–9, 25–6ರಿಂದ ಪಂಜಾಬ್ ತಂಡವನ್ನು ಪರಾಭವಗೊಳಿಸಿತು. 45 ನಿಮಿಷಗಳ ಈ ಹಣಾಹಣಿಯಲ್ಲಿ ಆತಿಥೇಯ ಆಟಗಾರರು ಸಂಪೂರ್ಣ ಪಾರಮ್ಯ ಮೆರೆದರು.

ಇನ್ನುಳಿದ ಪಂದ್ಯಗಳಲ್ಲಿ ಹಿಮಾಚಲ ಪ್ರದೇಶ 25-17, 25-16,25-19ರಿಂದ ಮಹಾರಾಷ್ಟ್ರ ಎದುರು, ಪಶ್ಚಿಮ ಬಂಗಾಳ 25-16, 23-25, 25-19, 25-10ರಿಂದ ಗುಜರಾತ್ ಎದುರು, ರಾಜಸ್ಥಾನ 21-25, 25-20, 25-20, 25-19ರಿಂದ ಆಂಧ್ರ ತಂಡದ ಎದುರು ಜಯಸಾಧಿಸಿದವು.ಒಡಿಶಾ 25-18, 25-20, 25-21ರಿಂದ ತೆಲಂಗಾಣ ಎದುರು, ಕೇರಳ 25-13, 25-10, 25-14ರಿಂದ ದೆಹಲಿ ತಂಡಗಳ ಎದುರು ಜಯಿಸಿದವು.

ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿ: ರಾಜ್ಯ ಸಂಭವನೀಯರ ತಂಡ

ಕರುಣ್‌ಗೆ ಕೊಕ್; ರೋಹನ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಭವಿ ಆಟಗಾರ ಕರುಣ್ ನಾಯರ್ ಅವರನ್ನು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಗೆ ಆಯ್ಕೆ ಮಾಡಿರುವ ಸಂಭವನೀಯರ ತಂಡದಿಂದ ಕೈಬಿಡಲಾಗಿದೆ.

ಟೆಸ್ಟ್ ಕ್ರಿಕೆಟ್ ತ್ರಿಶತಕ ಗಳಿಸಿದ ಭಾರತದ ಎರಡನೇ ಆಟಗಾರನೆಂಬ ಹೆಗ್ಗಳಿಕೆಯ ಆಟಗಾರ ಕರುಣ್ ಕಳೆದೆರಡು ಋತುಗಳಲ್ಲಿ ಸತತ ವೈಫಲ್ಯ ಅನುಭವಿಸಿದ್ದರು. ಮಂಗಳವಾರ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಯ್ಕೆ ಸಮಿತಿಯು 25 ಆಟಗಾರರ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಈಚೆಗಷ್ಟೇ ಕೋಚ್ ಸ್ಥಾನಕ್ಕೆ ನೇಮಕವಾಗಿರುವ ಪಿ.ವಿ. ಶಶಿಕಾಂತ್ ಅವರ ಮಾರ್ಗದರ್ಶನದಲ್ಲಿ ತಂಡವು ಇದೇ 29ರಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಲಿದೆ. ಅ.11ರಿಂದ ಟೂರ್ನಿಯ ಲೀಗ್ ಹಂತವು ಮೊಹಾಲಿಯಲ್ಲಿ ನಡೆಯಲಿದೆ.

'ಯುವ ಆಟಗಾರರಿಗೆ ಸ್ಥಾನ ನೀಡಲು ಕರುಣ್ ನಾಯರ್ ಅವರನ್ನು ಕೈಬಿಡಲಾಗಿದೆ. ಇನ್ನುಳಿದ ಮಾದರಿಗಳಲ್ಲಿ ಅವರು ಸ್ಥಾನ ಪಡೆಯಲು ಪ್ರಯತ್ನಿಸಲು ಅವಕಾಶವಿದೆ. ಟಿ20 ಮಾದರಿಯಲ್ಲಿ ಪ್ರದರ್ಶನ ಸಾಮರ್ಥ್ಯ ಹಾಗೂ ವಯಸ್ಸು ಮಾನದಂಡವಾಗಿಟ್ಟುಕೊಂಡು ಅವಕಾಶ ನೀಡಿದ್ದೇವೆ. ಕರ್ನಾಟಕ ತಂಡವನ್ನು ಬಲಿಷ್ಠಗೊಳಿಸುವ ಸವಾಲು ಈಗ ನಮ್ಮ ಮುಂದಿದೆ' ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಫಜಲ್ ಖಲೀಲ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಎಸ್‌ಸಿಎಯಿಂದ ಈಚೆಗೆ ನಡೆದ ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಉತ್ತಮವಾಗಿ ಆಡಿದ ರೋಹನ್ ಪಾಟೀಲ, ಮನೋಜ್ ಬಾಂಢಗೆ, ಸಿಸೋಡಿಯಾ ಅವರಿಗೂ ಸಂಭವನೀಯರ ಪಟ್ಟಿಯಲ್ಲಿ ಸ್ಥಾನ ಕೊಟ್ಟಿದ್ದೇವೆ. ಲಭಿಸಿದ ಅವಕಾಶವನ್ನು ಉತ್ತಮವಾಗಿ ಬಳಸಿಕೊಳ್ಳುವುದು ಆಟಗಾರರ ಸಾಮರ್ಥ್ಯಕ್ಕೆ ಬಿಟ್ಟಿದ್ದು' ಎಂದರು.



ರೋಹನ್ ಪಾಟೀಲ



ಕರುಣ್ ನಾಯರ್

ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಪ್ರಕಟಿಸಿರುವ ತಂಡ ಇಂತಿದೆ: ಮಯಂಕ್ ಅಗರವಾಲ್, ಮನೀಷ್ ಪಾಂಡೆ, ದೇವದತ್ತ ಪಡಿಕ್ಕಲ್, ಎಲ್.ಆರ್. ಚೇತನ್, ರೋಹನ್ ಎ ಪಾಟೀಲ, ಅಭಿನವ್ ಮನೋಹರ್, ಆರ್. ಸ್ಮರಣ್, ಲವನೀತ್ ಸಿಸೊಡಿಯಾ, ಬಿ.ಆರ್. ಶರತ್, ನಿಹಾಲ್ ಉಲ್ಲಾಳ್ (ಮೂವರು ವಿಕೆಟ್‌ಕೀಪರ್), ಕೃಷ್ಣಪ್ಪ ಗೌತಮ್, ಶ್ರೇಯಸ್ ಗೋಪಾಲ್, ಎಸ್.ಎ. ರಿಷಿ ಬೋಪಣ್ಣ, ರಿತೇಶ್ ಭಟ್ಕಳ, ಜೆ. ಸುಚಿತ್, ಶುಭಾಂಗ್ ಹೆಗಡೆ, ವಿ. ಕೌಶಿಕ್, ವೈಶಾಖ್ ವಿಜಯಕುಮಾರ್, ವಿದ್ಯಾಧರ್ ಪಾಟೀಲ, ಎಂ. ವೆಂಕಟೇಶ್, ಆದಿತ್ಯ ಗೋಯಲ್, ಮನೋಜ್ ಬಾಂಢಗೆ, ವಿದ್ವತ್ ಕಾವೇರಪ್ಪ, ಎಸ್.ಜೆ. ನಿಕಿನ್ ಜೋಸ್, ಕೆ.ಸಿ. ಕಾರ್ಯಪ್ಪ.

ಪಿ.ವಿ. ಶಶಿಕಾಂತ್ (ಕೋಚ್), ಜಾಬಪ್ರಭು (ಫಿಸಿಯೊಥೆರಪಿಸ್ಟ್), ಕೆ.ಸಿ. ಅವಿನಾಶ್ (ಸ್ಟ್ರೆಂಥ್–ಕಂಡಿಷನಿಂಗ್ ಕೋಚ್), ಅನುತೋಷ್ ಪೋಳ್ (ಮ್ಯಾನೇಜರ್), ಸಿ.ಎಂ. ಸೋಮಸುಂದರ (ಮಸಾಜ್ ಪರಿಣತ)

ಕರ್ನಾಟಕದ ಪಂದ್ಯಗಳು	
ಎದುರಾಳಿ	ದಿನಾಂಕ
ಮಹಾರಾಷ್ಟ್ರ	ಅ.11
ಕೇರಳ	ಅ.12
ಮೇಘಾಲಯ	ಅ.14
ಜಮ್ಮು–ಕಾಶ್ಮೀರ	ಅ.16
ಅರುಣಾಚಲ	ಅ.18
ಸರ್ವಿಸಸ್	ಅ.20
ಹರಿಯಾಣ	ಅ.22

ಭಾರತ 'ಎ' ಕ್ಲೀನ್‌ಸ್ವೀಪ್ ಸಾಧನೆ

ಚೆನ್ನೈ (ಪಿಟಿಐ): ರಾಜ್ ಅಂಗದ್ ಬಾವಾ (11ಕ್ಕೆ4) ಅವರ ಪ್ರಭಾವಿ ಬೌಲಿಂಗ್ ಮತ್ತು ಶಾರ್ದೂಲ್ ಠಾಕೂರ್ (51 ರನ್, 33 ಎ) ಗಳಿಸಿದ ಬಿರುಸಿನ ಅರ್ಧಶತಕದ ನೆರವಿನಿಂದ ಭಾರತ 'ಎ' ತಂಡ, ನ್ಯೂಜಿಲೆಂಡ್ ಎದುರಿನ ಮೂರನೇ ಹಾಗೂ ಕೊನೆಯ ಏಕದಿನ ಪಂದ್ಯದಲ್ಲಿ 106 ರನ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 49.3 ಓವರ್‌ಗಳಲ್ಲಿ 284 ರನ್‌ಗಳಿಗೆ ಆಲೌಟಾಯಿತು. ಶಾರ್ದೂಲ್ ಅಲ್ಲದೆ ಸಂಜು ಸ್ಯಾಮ್ಸನ್ (54 ರನ್, 68 ಎ.) ಮತ್ತು ತಿಲಕ್ ವರ್ಮಾ (50 ರನ್, 62 ಎ.) ಅವರೂ ಅರ್ಧಶತಕ ಗಳಿಸಿದರು.

ಭಾರತದ ಬೌಲರ್‌ಗಳ ಶಿಸ್ತಿನ ದಾಳಿಗೆ ನಲುಗಿದ ನ್ಯೂಜಿಲೆಂಡ್ 'ಎ' 38.3 ಓವರ್‌ಗಳಲ್ಲಿ 178 ರನ್‌ಗಳಿಗೆ ಆಲೌಟಾಯಿತು.

ಅ.15ರಿಂದ ಓಪನ್ ಅಥ್ಲೆಟಿಕ್ಸ್: ಪ್ರಮುಖ ಸ್ಪರ್ಧಿಗಳ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ್ಮಿಂಗ್‌ಹ್ಯಾಮ್‌ನಲ್ಲಿ ಇತ್ತೀಚೆಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಗೆದ್ದ ಕೆಲವು ಸ್ಪರ್ಧಿಗಳು ಸೇರಿದಂತೆ ದೇಶದ ಪ್ರಮುಖ ಅಥ್ಲೀಟ್‌ಗಳ ಪ್ರದರ್ಶನ ಕಣ್ತುಂಬಿಕೊಳ್ಳುವ ಅವಕಾಶ ಬೆಂಗಳೂರಿನ ಕ್ರೀಡಾಪ್ರೇಮಿಗಳಿಗೆ ಲಭಿಸಲಿದೆ.

ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ (ಕೆಎಎ) ಆಶ್ರಯದಲ್ಲಿ ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಅ. 15ರಿಂದ 19ರವರೆಗೆ 61ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಆಯೋಜನೆಯಾಗಿದ್ದು, ದೇಶದ ಘಟಾನುಘಟಿ ಸ್ಪರ್ಧಿಗಳು ಪದಕಕ್ಕಾಗಿ ಪೈಪೋಟಿ ನಡೆಸಲಿದ್ದಾರೆ.

ದ್ಯುತಿ ಚಾಂದ್, ಹಿಮಾ ದಾಸ್, ಅನುರಾಣಿ, ಮುರಳಿ ಶ್ರೀಶಂಕರ್, ಜೈಶಂಕರ್, ಅವಿನಾಶ್ ಸಬ್ಳೆ, ಎಲ್ದೋಸ್ ಪಾಲ್ ಮತ್ತು ಅಬ್ದುಲ್ಲಾ ಅಬೂಬಕರ್ ಅವರು ಪಾಲ್ಗೊಳ್ಳಲಿದ್ದಾರೆ. ಕರ್ನಾಟಕದ ಯುವ ಅಥ್ಲೀಟ್‌ಗಳಾದ ಡಿ.ಪಿ. ಮನು, ಚೇತನ್, ಅಭಿನ್ ದೇವಾಡಿಗ ಮತ್ತು ಎನ್.ಎಸ್.ಸಿಮಿ ಅವರು ತಮ್ಮ ಸಾಮರ್ಥ್ಯ ತೋರಲಿದ್ದಾರೆ. ರಾಜ್ಯದ 45 ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ.

'ಬೆಂಗಳೂರಿನಲ್ಲಿ ಸುಮಾರು ಮೂರು ದಶಕಗಳ ಬಳಿಕ ಈ ಚಾಂಪಿಯನ್‌ಷಿಪ್‌ನ ಆಯೋಜನೆಯಾಗಿದೆ. ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ 1,200ಕ್ಕೂ ಅಧಿಕ ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ' ಎಂದು ಚಾಂಪಿಯನ್‌ಷಿಪ್‌ನ ಸಂಘಟನಾ ಸಮಿತಿಯ ಅಧ್ಯಕ್ಷ, ಸಚಿವರೂ ಆಗಿರುವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಈ ಪ್ರಮುಖ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ಆತಿಥ್ಯ ವಹಿಸುತ್ತಿರುವುದು ಹೆಮ್ಮೆಯ ಸಂಗತಿ. ಕೂಟ ಯಶಸ್ವಿಯಾಗಿ ನಡೆಸಲು ಬೇಕಾದ ಎಲ್ಲ ನೆರವನ್ನು ರಾಜ್ಯ ಸರ್ಕಾರ ಒದಗಿಸಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಾಲನೆ ನೀಡಲಿದ್ದಾರೆ' ಎಂದು ಹೇಳಿದರು.

ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾ (ಎಎಫ್‌ಐ) ಹಿರಿಯ ಉಪಾಧ್ಯಕ್ಷರಾದ ಲಾಂಗ್‌ಜಂಪರ್ ಅಂಜು ಬಾಬಿ ಜಾರ್ಜ್ ಮಾತನಾಡಿ, 'ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಎಎಫ್‌ಐನ ಪ್ರತಿಷ್ಠಿತ ಕೂಟ ಆಗಿದೆ. ಕರ್ನಾಟಕವು ಈ ಕೂಟವನ್ನು ಯಶಸ್ವಿಯಾಗಿ ಆಯೋಜಿಸುವ ವಿಶ್ವಾಸವಿದೆ. ರಾಷ್ಟ್ರೀಯ ಕ್ರೀಡಾಕೂಟದ ಬೆನ್ನಲ್ಲೇ ಈ ಚಾಂಪಿಯನ್‌ಷಿಪ್ ನಡೆಯುತ್ತಿರುವುದರಿಂದ ಅಥ್ಲೀಟ್‌ಗಳೂ ಅತ್ಯುತ್ತಮ ಫಾರ್ಮ್‌ನಲ್ಲಿದ್ದು, ಪ್ರಬಲ ಪೈಪೋಟಿ ನಿರೀಕ್ಷಿಸಬಹುದು' ಎಂದರು.

ಕೆಎಎ ಕಾರ್ಯದರ್ಶಿ ಎ.ರಾಜವೇಲು, ಕೂಟದ ನಿರ್ದೇಶಕ ಸತ್ಯನಾರಾಯಣ, ಕೆ.ಪಿ. ಪುರುಷೋತ್ತಮ್ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡರು.









